

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 6 ಶನಿವಾರ 2023

ಸಂಪುಟ: 44 | ಸಂಚಿಕೆ: 20 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಸೋಮಣ್ಣ, ರೇವಣ್ಣ ಪರ ಸಿಎಂ ಬೊಮ್ಮಾಯಿ ಪ್ರಚಾರ

ಅಭಿವೃದ್ಧಿ ಹರಿಕಾರರಿಗೆ ಒಂದು ಅವಕಾಶ ಮಾಡಿಕೊಡಿ: ಸಿಎಂ ಮನವಿ



ತಿ.ನರಸೀಪುರ, ಮೇ 5– ವರುಣದಲ್ಲಿ ಸೋಮಣ್ಣ ಹಾಗೂ ತಿ.ನರಸೀಪುರದಲ್ಲಿ ಡಾ.ಎಂ.ರೇವಣ್ಣ ಅವರನ್ನು ಗೆಲ್ಲಿಸುವ ಮೂಲಕ ಎರಡೂ ಕ್ಷೇತ್ರಗಳಲ್ಲಿ ರಾಜಕೀಯ ಕ್ರಾಂತಿ ಮಾಡಬೇಕೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರೆ ನೀಡಿದರು.

ಪಟ್ಟಣದ ಶ್ರೀಗುಂಜಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ವರುಣ ಮತ್ತು ತಿ.ನರಸೀಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಗಳ ಪರ ಭರ್ಜರಿ ರೋಡ್ ಶೋ ನಡೆಸಿದರು. ತಿ.ನರಸೀಪುರದ ನಮ್ಮ ಅಭ್ಯರ್ಥಿ ಡಾ.ಎಂ.ರೇವಣ್ಣ ಕೋವಿಡ್ ಸಂದರ್ಭ ಮಾಡಿರುವ ಸೇವೆ ಅಮೋಘ. ನೂರಾರು ಜನರ ಪ್ರಾಣ ಉಳಿಸಿರುವುದು ಇಡೀ ರಾಜ್ಯಕ್ಕೆ ದಾಖಲೆಯಾಗಿದೆ. ಹಾಗಾಗಿ ಕ್ಷೇತ್ರದ ಮತದಾರರು ನಿಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿರುವ ರೇವಣ್ಣ ಬೇಕೋ, ದುರಂಹಕಾರದಿಂದ ವರ್ತಿಸುವ ರಾಜಕಾರಣಿಗಳು ಬೇಕಾ ಎಂಬುದನ್ನು ತೀರ್ಮಾನಿಸಿ ಮತ ನೀಡಿ ಎಂದರು. ಅಭಿವೃದ್ಧಿಗೆ ಮತ್ತೊಂದು ಹೆಸರಾಗಿರುವ ವಿ.ಸೋಮಣ್ಣ ಈ ಬಾರಿ ವರುಣ ಕ್ಷೇತ್ರದಲ್ಲಿ ಅಭೂತಪೂರ್ವ ಜಯ ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ಜನತೆ ಈ ಬಾರಿ ಬದಲಾವಣೆ ಬಯಸಿದ್ದಾರೆ. ಚಾಮರಾಜನಗರ, ಮೈಸೂರು ಜಿಲ್ಲೆಗಳ ●9ನೇ ಪುಟಕ್ಕೆ

ಕಿಚ್ಚ ಸುದೀಪ್ ಗೈರು: ಅಭಿಮಾನಿಗಳಿಗೆ ನಿರಾಸೆ

ಸಿಎಂ ರೋಡ್ ಶೋ ಮುಗಿದ ನಂತರ 3.45ಕ್ಕೆ ತಿ.ನರಸೀಪುರ ಕ್ಷೇತ್ರದ ಅಭ್ಯರ್ಥಿ ಡಾ.ರೇವಣ್ಣ ಪರ ಚಿತ್ರನಟ ಕಿಚ್ಚ ಸುದೀಪ್ ರೋಡ್ ಶೋ ನಡೆಸಬೇಕಿತ್ತು. ನಿರೀಕ್ಷೆಗೂ ಮೀರಿ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು, ಸುದೀಪ್ ಭಾವಚಿತ್ರವಿರುವ ಬಾವುಟಗಳೊಂದಿಗೆ ರೋಡ್ ಶೋನಲ್ಲಿ ಭಾಗವಹಿಸಲು ಬೆಳಗ್ಗೆಯಿಂದಲೇ ಕಾದು ಕುಳಿತಿದ್ದರು. 18 ಸಾವಿರ ರೂ. ವೆಚ್ಚದ ಹೂವಿನ ಹಾರ, ಸೇಬಿನ ಹಾರಗಳನ್ನು ಸಿದ್ಧಪಡಿಸಲಾಗಿತ್ತು. ರೋಡ್ ಶೋ ಆರಂಭವಾಗುವ ದೇವಸ್ಥಾನದ ಮುಂಭಾಗ ಸಹಸ್ರ ಸಂಖ್ಯೆಯಲ್ಲಿ ಅಭಿಮಾನಿಗಳು ಜಮಾಯಿಸಿದ್ದರು. ಪೊಲೀಸ್ ಬಂದೋಬಸ್ತ್ ಸಹ ಆಯೋಜಿಸಲಾಗಿತ್ತು. ಆದರೆ ಇದ್ದಕ್ಕಿದ್ದಂತೆ ಸುದೀಪ್ ರೋಡ್ ಶೋನಲ್ಲಿ ಭಾಗವಹಿಸುತ್ತಿಲ್ಲ ಎಂಬ ಸುದ್ದಿ ತಿಳಿಯುತ್ತಿದ್ದಂತೆ ಅಭಿಮಾನಿಗಳು ನಿರಾಸೆಗೊಂಡರು. ಏಕಾಏಕಿ ಕಾರ್ಯಕ್ರಮ ರದ್ದಾಗಿದ್ದಕ್ಕೆ ಬೇಸರ ವ್ಯಕ್ತ ಪಡಿಸಿದ ಅಭಿಮಾನಿಗಳು ಬಿಜೆಪಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಅಂದು ರೈತರ ಆತ್ಮಹತ್ಯೆ ತಡೆಯಲು ಬರಲಿಲ್ಲ ಈ ಕೇಂದ್ರ ನಾಯಕರು ಈಗ

ಜೆಡಿಎಸ್ ಮುಗಿಸಲು ಬರುತ್ತಿದ್ದಾರೆ


●ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ●ಮಂಡ್ಯದಲ್ಲಿ ಜೆಡಿಎಸ್ ಅಭ್ಯರ್ಥಿಗಳ ಪರ ಪ್ರಚಾರ



ಮಂಡ್ಯ, ಮೇ 5(ಮೋಹನ್ ರಾಜ್)– ಜಿಲ್ಲೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡು ಸಂಕಷ್ಟಕ್ಕೆ ಸಿಲುಕಿದಾಗ, ರಾಜ್ಯದಲ್ಲಿ ನಾನಾ ಸಮಸ್ಯೆ ಇದ್ದಾಗ ಬಾರದ ಕಾಂಗ್ರೆಸ್ ಹಾಗೂ ಬಿಜೆಪಿಯ ಉತ್ತರ ಭಾರತದ ನಾಯಕರು ಈಗ ಜೆಡಿಎಸ್ ಮುಗಿಸಲು ಬರುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು. ನಗರದ ಸರ್ಕಾರಿ ಮಹಿಳಾ ಕಾಲೇಜಿನ ಆವರಣದಲ್ಲಿ ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಬಿ.ಆರ್. ರಾಮಚಂದ್ರ ಪರ ಆಯೋಜಿಸಿದ್ದ ಜೆಡಿಎಸ್ ಕಾರ್ಯಕರ್ತರ ಬಹಿರಂಗ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, 2017–18ರಲ್ಲಿ ಜಿಲ್ಲೆಯಲ್ಲಿ 200ಕ್ಕೂ ಹೆಚ್ಚು ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡರು. ಅವರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿದವು. ಆಗ ಬಾರದ ಬಿಜೆಪಿ, ಕಾಂಗ್ರೆಸ್ ನಾಯಕರು ಈಗ ಬರುತ್ತಿದ್ದಾರೆ. ಇದನ್ನು ಜಿಲ್ಲೆಯ ಜನ ಅರ್ಥ ಮಾಡಿಕೊಳ್ಳಬೇಕು ಎಂದರು. ಪ್ರಧಾನಿ ಮೋದಿ, ಅಮಿತ್ ಶಾ, ರಾಜನಾಥ್‌ಸಿಂಗ್, ಕಾಂಗ್ರೆಸ್‌ನ ಪ್ರಿಯಾಂಕಾ ಗಾಂಧಿ, ರಾಹುಲ್ ಗಾಂಧಿ ಅವರು ಜಿಲ್ಲೆಗೆ ಭೇಟಿ ನೀಡುತ್ತಿದ್ದಾರೆ. ●6ನೇ ಪುಟಕ್ಕೆ

ಮೇ 18ರಂದು ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ!

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಅಚ್ಚರಿ ಭವಿಷ್ಯ



ಬೇಲೂರು, ಮೇ 5–ಬರುವ ಮೇ 10ರಂದು ಮತದಾನ ನಡೆಯಲಿದೆ. ಮೇ 13ರಂದು ಮತಗಳ ಎಣಿಕೆ ನಡೆದರೆ, ಮೇ 18ರಂದು ಹೆಚ್.ಡಿ. ಕುಮಾರಸ್ವಾಮಿ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವುದು ಶತಸಿದ್ಧ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಅಚ್ಚರಿಯ ಭವಿಷ್ಯ ನುಡಿದಿದ್ದಾರೆ.

ಹಾಸನ ಜಿಲ್ಲೆ ಸಕಲೇಶಪುರ, ಬೇಲೂರು, ಅರಸೀಕೆರೆ ಮತ್ತಿತರ ಕಡೆ ಜೆಡಿಎಸ್ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿ ಮಾತನಾಡಿದ ಅವರು, ಬಿಜೆಪಿ, ಕಾಂಗ್ರೆಸ್‌ನವರಿಗೆ ರಾಜ್ಯದ ಜನರ ಹಿತ ಬೇಕಾಗಿಲ್ಲ. ಈ ಪಕ್ಷಗಳಿಗೆ ಜನತೆ ತಕ್ಕ ಪಾಠ ಕಲಿಸುವುದು ನಿಶ್ಚಿತ ಎಂದು ಹೇಳಿದರು. ಪ್ರಾದೇಶಿಕ ಪಕ್ಷದ ಉಳಿವಿಗಾಗಿ ನನ್ನ ಇಳಿ ವಯಸ್ಸಿನಲ್ಲಿ ರಾಜ್ಯ ಸುತ್ತಿ ಹೋರಾಟ ನಡೆಸುತ್ತಿದ್ದೇನೆ. ರಾಜ್ಯದ ನೆಲ–ಜಲ ಸಂರಕ್ಷಣೆಗಾಗಿ ಪ್ರಾದೇಶಿಕ ಪಕ್ಷದ ಅಗತ್ಯವಿದೆ. ರಾಜ್ಯದ ಜನರಿಗೇ ನೀರಿಲ್ಲದಿದ್ದರೂ ತಮಿಳುನಾಡಿಗೆ ಹರಿಸುವಂತಹ ಅನಿವಾರ್ಯತೆ ಸೃಷ್ಟಿಸಲಾಗಿದೆ ಎಂದರು. ಲೋಕಸಭೆಯಲ್ಲಿ ಈ ಬಗ್ಗೆ ಏಕಾಂಗಿಯಾಗಿ ಹೋರಾಟ ನಡೆಸಿದ್ದೇನೆ. ಆಗ ಬಿಜೆಪಿಯ 18 ಲೋಕಸಭಾ ಸದಸ್ಯರಿದ್ದರೂ, ಒಬ್ಬರೂ ನನಗೆ ಸಹಕಾರ ನೀಡಲಿಲ್ಲ. ನಮಗೆ ಮೇಕೆದಾಟಿನಲ್ಲಿ ಅಣೆಕಟ್ಟೆ ನಿರ್ಮಿಸುವ ಶಕ್ತಿ ಇಲ್ಲವೇ ಎಂದು ಪ್ರಶ್ನಿಸಿದರು. ಇದೇ ವೇಳೆ ಗೌಡರ ಸಮ್ಮುಖದಲ್ಲಿ ಬಿಜೆಪಿ, ಕಾಂಗ್ರೆಸ್, ಭಜರಂಗ ದಳ, ಶ್ರೀರಾಮ ಸೇನೆ ಕಾರ್ಯಕರ್ತರು ಹಾಗೂ ಮುಸ್ಲಿಂ ಬಾಂಧವರು ಜೆಡಿಎಸ್ ಸೇರ್ಪಡೆಯಾದರು.

ವರುಣ ಎಂದಿಗೂ ಸರ್ವ ಜನಾಂಗದ ಶಾಂತಿಯ ತೋಟ

●ನಾನೂ ಜಾತೀಯತೆಗೆ ಆದ್ಯತೆ ಕೊಟ್ಟಿಲ್ಲ ●ಕ್ಷೇತ್ರದ ವ್ಯಾಪ್ತಿಯಲ್ಲಿ ಬಿರುಸಿನ ಪ್ರಚಾರ; ಈ ಬಾರಿ ಕಾಂಗ್ರೆಸ್ ಸರ್ಕಾರ ಖಚಿತ ಎಂದ ಮಾಜಿ ಸಿಎಂ



ಮೈಸೂರು, ಮೇ 5(ಎಂಟಿವೈ)–ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ಕೋಮುವಾದದಿಂದ ಜನ ಬೇಸತ್ತಿದ್ದು, ಈ ಹಿಂದೆ ಕಾಂಗ್ರೆಸ್ ಸರ್ಕಾರದ ಜನಪರ ಕಾರ್ಯಕ್ರಮಗಳಿಗೆ ಮನ್ನಣೆ ನೀಡಿ ಈ ಬಾರಿ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರುತ್ತಾರೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ವರುಣ ಕ್ಷೇತ್ರದ ಚಿಕ್ಕಹಳ್ಳಿ, ಭುಗತಗಳ್ಳಿ, ವಾಜಮಂಗಲ, ಮೆಲ್ಲಹಳ್ಳಿ, ಹಾರೋಹಳ್ಳಿ, ಮಾದೇಗೌಡನಹುಂಡಿ, ರಂಗನಾಥಪುರ, ರಂಗಾಚಾರಿ ಹುಂಡಿ, ರಂಗಸಮುದ್ರ, ಇಟ್ಟುವಳ್ಳಿ, ಕುಪ್ಯ, ತುಂಬಲ ಗ್ರಾಮಗಳಲ್ಲಿ ಮತ ಪ್ರಚಾರ ನಡೆಸಿ ಅವರು ಮಾತನಾಡಿದರು. ಈ ಬಾರಿ ರಾಜ್ಯದಲ್ಲಿ ನಡೆಯುತ್ತಿರುವ ಚುನಾವಣೆ ಪೈಕಿ 224 ಕ್ಷೇತ್ರಗಳಲ್ಲಿ ಬಿಜೆಪಿಗರಿಗೆ ವರುಣ ಕ್ಷೇತ್ರದ ಮೇಲೆ ಕಣ್ಣು ಬಿದ್ದಿದೆ. ಈಗಾಗಲೇ ರಾಜ್ಯದ ಹಲವು ಕ್ಷೇತ್ರಗಳಲ್ಲಿ ಕೋಮುಭಾವನೆ ಕೆರಳಿಸಿ, ರಾಜಕೀಯ ಲಾಭ ಮಾಡಿಕೊಳ್ಳುವುದರೊಂದಿಗೆ ಶಾಶ್ವತವಾಗಿ ಸಾಮರಸ್ಯ ಕದಡಿರುವ ಬಿಜೆಪಿಗರು, ಇದೀಗ ವರುಣ ಕ್ಷೇತ್ರದಲ್ಲಿ ಜಾತಿ ಜಾತಿಗಳ ನಡುವೆ ಸಂಘರ್ಷ ತಂದು, ಸಾಮರಸ್ಯ ಕದಡುವುದರೊಂದಿಗೆ ನನ್ನನ್ನು ಸೋಲಿಸಲೇಬೇಕೆಂದು ಸಂಚು ರೂಪಿಸಿದ್ದಾರೆ. ಕ್ಷೇತ್ರಕ್ಕೆ ಸಂಬಂಧಪಡದೇ ಇರುವ ವ್ಯಕ್ತಿಗಳು ವರುಣ ಕ್ಷೇತ್ರದಲ್ಲಿ ಅಪಪ್ರಚಾರ, ವದಂತಿ ಹಬ್ಬಿಸುವ ಮೂಲಕ ಘರ್ಷಣೆಗೆ ಪ್ರಚೋದಿಸುತ್ತಿದ್ದಾರೆ. ಇದಕ್ಕೆ ಕ್ಷೇತ್ರದ ಜನತೆ ಚುನಾವಣೆ ದಿನ ತಕ್ಕ ಪಾಠ ಕಲಿಸಬೇಕು ಎಂದು ಸಲಹೆ ನೀಡಿದರು.

ನಾನು 1978ರಿಂದಲೂ ಚಾಮುಂಡೇಶ್ವರಿ ಕ್ಷೇತ್ರ ಮತ್ತು ವರುಣ ಕ್ಷೇತ್ರದ ಜನರೊಂದಿಗೆ ಒಡನಾಟ ಇಟ್ಟುಕೊಂಡು ಬಂದಿದ್ದೇನೆ. ಇಷ್ಟರ ಮಟ್ಟಿಗೆ ಬೆಳೆಯಲು ಎರಡೂ ಕ್ಷೇತ್ರದ ಜನರು ತೋರಿದ ಪ್ರೀತಿ ಹಾಗೂ ಆಶೀರ್ವಾದವೇ ಕಾರಣ. 1983ರಿಂದಲೂ ನನ್ನನ್ನು ಗೆಲ್ಲಿಸುತ್ತಾ ಬಂದಿದ್ದೀರಿ. 2008ರಲ್ಲಿ ನಡೆದ ವರುಣ ಕ್ಷೇತ್ರದ ಮೊದಲ ಚುನಾವಣೆಯಲ್ಲಿ ●9ನೇ ಪುಟಕ್ಕೆ

ಮುಂದಿನ ಮುಖ್ಯಮಂತ್ರಿ ಜೈಕಾರಕ್ಕೆ ಪ್ರತಿಕ್ರಿಯೆ...

ರೋಡ್ ಶೋ ವೇಳೆ ಯುವಕರು 'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಜೈ' ಎಂದು ಕೂಗಿದ್ದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ನಾನು ಮುಖ್ಯಮಂತ್ರಿಯಾಗಬೇಕು ಎಂದು ನೀವು ಬಯಸುತ್ತೀರಿ. ಅದಕ್ಕಾಗಿ ನನ್ನನ್ನು ಗೆಲ್ಲಿಸಿ. ಇದು ನನಗೆ ಕೊನೆ ಚುನಾವಣೆ. ರಾಜ್ಯದಲ್ಲಿ ಕಾಂಗ್ರೆಸ್‌ಗೆ ಉತ್ತಮ ವಾತಾವರಣವಿದೆ. ಅಧಿಕಾರ ಸಿಗುವುದು ಖಚಿತ. ಹಾಗಾಗಿ ಮತ್ತೊಮ್ಮೆ ಗೆಲ್ಲಿಸಿಕೊಡಿ ಎಂದರು.

ಚಾಮರಾಜನಗರ ಜಿಲ್ಲೆಯಲ್ಲಿ ಸುದೀಪ್ ಬಿಜೆಪಿ ಪರ ಭರ್ಜರಿ ರೋಡ್ ಶೋ

ಸೋಮಣ್ಣ, ಮಹೇಶ್, ನಿರಂಜನ್‌ಕುಮಾರ್, ಪ್ರೀತನ್ ನಾಗಪ್ಪ ಪರವಾಗಿ ಮತಯಾಚನೆ



ಚಾಮರಾಜನಗರ, ಮೇ 5– ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಶುಕ್ರವಾರ ನಟ ಕಿಚ್ಚ ಸುದೀಪ್ ಭರ್ಜರಿ ರೋಡ್ ಶೋ ನಡೆಸಿ ಕಿಕ್ಕಿರಿದು ನೆರೆದಿದ್ದ ಸಾವಿರಾರು ಜನರ ನಡುವೆ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಮತಯಾಚಿಸಿದರು.

ಬೆಳಗ್ಗೆ ಗುಂಡ್ಲುಪೇಟೆಯಲ್ಲಿ ರೋಡ್ ಶೋ ನಡೆಸಿ, ನಗರಕ್ಕೆ ಆಗಮಿಸಿದ ಸುದೀಪ್ ಗುಂಡ್ಲುಪೇಟೆ ವೃತ್ತದಲ್ಲಿ ಪ್ರಚಾರ ವಾಹನವೇರಿ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಅವರನ್ನು ಭಾರೀ ಮತಗಳ ಅಂತರದಲ್ಲಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ನಂತರ ಕಾರಿನಲ್ಲಿ ಸಂತೇಮರಹಳ್ಳಿ ವೃತ್ತಕ್ಕೆ ಬಂದು ತಮ್ಮ ಕಾರಿನ ಮೇಲೇರಿ ಅಭಿಮಾನಿಗಳತ್ತ ಕೈ ಬೀಸಿದರು. ಸಚಿವ ಸೋಮಣ್ಣ ಅವರನ್ನೂ ತಮ್ಮ ಕಾರಿನ ಮೇಲೆ ಹತ್ತಿಸಿಕೊಂಡ ಸುದೀಪ್, ಅವರ ಕೈಯ್ಯನ್ನು ಮೇಲಕ್ಕೆತ್ತಿ ಹಿಡಿದು, ಸೋಮಣ್ಣರ ಬೆಂಬಲಿಸುವಂತೆ ಮನವಿ ಮಾಡಿದರು. ಇದೇ ವೇಳೆ ಕ್ರೇನ್‌ನಿಂದ ಬಾರಿ ●9ನೇ ಪುಟಕ್ಕೆ


ವರುಣದಲ್ಲಿ ಸಿದ್ದರಾಮಯ್ಯ ಪರ ದುನಿಯಾ ವಿಜಿ, ಯೋಗಿ ಪ್ರಚಾರ



ಮೈಸೂರು, ಮೇ.5(ಎಂಟಿವೈ)– ಮತದಾನದ ದಿನ ಸಮೀಪಿಸುತ್ತಿರುವಂತೆಯೇ ವರುಣ ವಿಧಾನಸಭಾ ಕ್ಷೇತ್ರದ ಚುನಾವಣಾ ಕಣ ದಿನದಿಂದ ದಿನಕ್ಕೆ ರಂಗೇರುತ್ತಿದ್ದು, ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರವಾಗಿ ಚಿತ್ರನಟರಾದ ದುನಿಯಾ ವಿಜಿ, ಯೋಗಿ ಸೇರಿದಂತೆ ಹಲವಾರು ಮಂದಿ ದಿನವಿಡೀ ರೋಡ್ ಶೋ ನಡೆಸಿ ಬಿರುಸಿನ ಪ್ರಚಾರ ನಡೆ ಸಿದರು. ಗುರುವಾರವಷ್ಟೇ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ದಂಪತಿ, ಮೋಹಕ ತಾರೆ ರಮ್ಯಾ ಸೇರಿದಂತೆ ವಿವಿಧ ಮುಖಂಡರೊಂದಿಗೆ ವರುಣ ಕ್ಷೇತ್ರದ ನಂಜನಗೂಡು ತಾಲೂಕು ವ್ಯಾಪ್ತಿಗೆ ಹಲವು ಗ್ರಾಮಗಳಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿದ್ದ ಸಿದ್ದರಾಮಯ್ಯ, ಶುಕ್ರವಾರ ಮೈಸೂರು ಹಾಗೂ ತಿ.ನರಸೀಪುರ ತಾಲೂಕಿನ ಹಲವು ಗ್ರಾಮಗಳಲ್ಲಿ ಮತಯಾಚಿಸಿದರು.

ಚಿತ್ರ ನಟರ ಸಾಥ್: ರಾಮಕೃಷ್ಣನಗರದ ನಿವಾಸದಿಂದ ಶುಕ್ರವಾರ ಬೆಳಗ್ಗೆ ಮತಬೇಟೆಗೆ ಹೊರಟ ಮಾಜಿ ಸಿಎಂ ಸಿದ್ದರಾಮಯ್ಯ, ಮೈಸೂರು–ತಿ.ನರಸೀಪುರ ಮುಖ್ಯರಸ್ತೆಯ ಚಿಕ್ಕಹಳ್ಳಿಗೆ ●6ನೇ ಪುಟಕ್ಕೆ

ಸ್ಪಷ್ಟ ಬಹುಮತಕ್ಕಿಂತಲೂ ಅಧಿಕ ಸ್ಥಾನಗಳನ್ನು ಬಿಜೆಪಿ ಗೆಲ್ಲಲಿದೆ: ಸಿಎಂ



ಮೈಸೂರು, ಮೇ 5(ಎಸ್‌ಬಿಡಿ)– ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತಕ್ಕಿಂತಲೂ ಅಧಿಕ ಸ್ಥಾನಗಳಲ್ಲಿ ಬಿಜೆಪಿ ಗೆಲ್ಲಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮೈಸೂರಿನ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಈವರೆಗಿನ ಚುನಾವಣೆ ಸಮೀಕ್ಷೆಗಳು ಹೇಳಿರುವ ಸಂಖ್ಯೆಗಿಂತ ಹೆಚ್ಚು ಸಾಧಿಸಲಿದ್ದೇವೆ. ಪ್ರಧಾನಿ ಮೋದಿಯವರು ಪ್ರಚಾರಕ್ಕೆ ಬಂದಿರುವುದರಿಂದ ಸ್ಪಷ್ಟ ಬಹುಮತಕ್ಕಿಂತ ಹೆಚ್ಚು ಸ್ಥಾನಗಳನ್ನು ಬಿಜೆಪಿ ಪಡೆಯಲಿದೆ ಎಂದರು. ವರುಣ ಕ್ಷೇತ್ರದಲ್ಲಿ ಬಿಜೆಪಿ ಪರ ವಾತಾವರಣವಿದೆ. ಎಲ್ಲಾ ಸಮುದಾಯದವರು ಬಿಜೆಪಿಯನ್ನು ಬೆಂಬಲಿಸುವ ವಿಶ್ವಾಸವಿದ್ದು, ನಮ್ಮ ಅಭ್ಯರ್ಥಿ ವಿ.ಸೋಮಣ್ಣ ಗೆಲ್ಲುತ್ತಾರೆ. ಆದರೆ ಕಾಂಗ್ರೆಸ್‌ನವರಿಗೆ ಅಭದ್ರತೆ ಕಾಡುತ್ತಿದೆ. ಹಾಗಾಗಿ ಮೊದಲು ವರುಣಾದಲ್ಲಿ ಒಂದು ದಿನ ಮಾತ್ರ ಪ್ರಚಾರಕ್ಕೆ ಬರುತ್ತೇನೆ ಎಂದು ಹೇಳುತ್ತಿದ್ದ ಸಿದ್ದರಾಮಯ್ಯ, ಈಗ ಸ್ಟಾರ್‌ಗಳೊಂದಿಗೆ ಪ್ರಚಾರ ನಡೆಸುತ್ತಿದ್ದಾರೆ. ಕ್ಷೇತ್ರದಲ್ಲಿ ಬಿಜೆಪಿ ಸ್ಥಿತಿ ಉತ್ತಮವಾಗಿದೆ ಎಂದು ಇದರಿಂದಲೇ ವ್ಯಕ್ತವಾಗುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷಕ್ಕೆ ಅಭದ್ರತೆ ಕಾಡುತ್ತಿದೆ. ಕಾಂಗ್ರೆಸ್ ನಾಯಕರು ಮೊದಲು ತಪ್ಪು ಮಾಡಿ, ನಂತರ ಓವರ್ ರಿಯಾಕ್ಟ್ (ಅತಿಯಾದ ಪ್ರತಿಕ್ರಿಯೆ) ಮಾಡುತ್ತಿದ್ದಾರೆ. ಇದೆರಡೂ ತಪ್ಪೇ. ಅವರ ಮಾತಿನಲ್ಲಿ ಸಮನ್ವಯತೆ ಇಲ್ಲ. ಅಪ್ರಮಾಣಿಕತೆ ಮತ್ತು ಅಭದ್ರತೆ ಅವರನ್ನು ಅತಿಯಾಗಿ ಕಾಡುತ್ತಿದೆ ಎಂದು ಟೀಕಿಸಿದರು. ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭಜರಂಗ ದಳ ನಿಷೇಧಿಸುವುದಾಗಿ ●9ನೇ ಪುಟಕ್ಕೆ

ನಾಳೆ ನಂಜನಗೂಡಲ್ಲಿ ಪ್ರಧಾನಿ ಮೋದಿ ಪ್ರಚಾರ



ಮೈಸೂರು, ಮೇ 5(ಆರ್‌ಕೆ)– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮೇ 7ರಂದು ನಂಜನಗೂಡು ತಾಲೂಕು, ಎಲಚಗೆರೆ ಬೋರೆ ಗ್ರಾಮದ ಬಳಿ ಬಿಜೆಪಿ ಅಭ್ಯರ್ಥಿಗಳ ಪರ ಚುನಾವಣಾ ಬಹಿರಂಗ ಪ್ರಚಾರ ಸಭೆ ನಡೆಸುವರು. ಮೈಸೂರಿನ ಬಿಜೆಪಿ ಮಾಧ್ಯಮ ಕೇಂದ್ರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬಿಜೆಪಿ ಮೈಸೂರು ವಿಭಾಗದ ಪ್ರಭಾರಿ ಮೈ.ವಿ. ರವಿಶಂಕರ್, ಭಾನುವಾರ ಸಂಜೆ 4 ಗಂಟೆಗೆ ಹೆಲಿಕಾಪ್ಟರ್ ಮೂಲಕ ಎಲಚಗೆರೆ ಬೋರೆ ಬಳಿ ನಿರ್ಮಿಸಿರುವ ತಾತ್ಕಾಲಿಕ ಹೆಲಿಪ್ಯಾಡ್‌ಗೆ ಆಗಮಿಸುವ ಪ್ರಧಾನಿಗಳು, ಸಮೀಪದಲ್ಲಿ ಆಯೋಜಿಸಿರುವ ಮೈಸೂರು ಚಾಮರಾಜನಗರ ಜಿಲ್ಲೆಗಳ ಬಿಜೆಪಿ ಅಭ್ಯರ್ಥಿಗಳ ಪರ ಬಹಿರಂಗ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಮಾತನಾಡುವರು ಎಂದರು.

ಮೈಸೂರು ಜಿಲ್ಲೆಯಲ್ಲಿ 7 ಹಾಗೂ ಚಾಮರಾಜನಗರ ಜಿಲ್ಲೆಯ 4 ವಿಧಾನಸಭಾ ಕ್ಷೇತ್ರಗಳ 1 ಲಕ್ಷ ಮಂದಿ ಸಭೆಯಲ್ಲಿ ಭಾಗವಹಿಸಲಿದ್ದು, ನಂಜನಗೂಡು ಮತ್ತು ಗುಂಡ್ಲುಪೇಟೆಯಿಂದ 200 ಮಂದಿ ಪಕ್ಷದ ಕಾರ್ಯಕರ್ತರು ಬೈಕ್ ರ್‍ಯಾಲಿ ಮೂಲಕ ಆಗಮಿಸುವರು ಎಂದ ರವಿಶಂಕರ್, ಇದೀಗ ಬಿಜೆಪಿ ಪರವಾದ ಅಲೆ ಎದ್ದಿದೆ, ವರುಣದಲ್ಲೂ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಗೆಲುವು ನಿಶ್ಚಿತ ಎಂದರು. ಸೋಲಿನ ಭಾಯ ಆವರಿಸಿರುವುದರಿಂದ ಹತಾಶರಾಗಿ ಸಿದ್ದರಾಮಯ್ಯ ಚಿತ್ರನಟರನ್ನು ಕರೆತಂದು ವರುಣದಲ್ಲಿ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ. ಇದನ್ನು ನೋಡಿದರೆ ಸೋಲಿನ ಭೀತಿ ಆವರಿಸಿದೆ ಎಂಬುದು ಗೊತ್ತಾಗುತ್ತದೆ. ಬೆಂಗಳೂರಿನ ಗೋವಿಂದರಾಜನಗರದಂತೆ ಸೋಮಣ್ಣ ಅವರು ವರುಣ ಕ್ಷೇತ್ರವನ್ನು ಅಭಿವೃದ್ಧಿಪಡಿಸುತ್ತಾರೆ ಎಂದು ನುಡಿದರು.

ಮೈಸೂರಿನ ನರಸಿಂಹರಾಜ, ಚಾಮರಾಜ, ಕೃಷ್ಣರಾಜ ಹಾಗೂ ಚಾಮುಂಡೇಶ್ವರಿ ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಜಯಗಳಿಸಲಿದ್ದಾರೆ. ಭಜರಂಗದಳ ನಿಷೇಧಿಸುವುದಾಗಿ ಘೋಷಿಸಿರುವ ಕಾಂಗ್ರೆಸ್‌ಗೆ ಈಗ ಜನರು ತಕ್ಕ ಪಾಠ ಕಲಿಸಲಿದ್ದಾರೆ. ಶ್ರೀ ರಾಮ ಹಾಗೂ ಹನುಮನ ನಾಡಿನಲ್ಲಿ ಅವರ ಭಕ್ತರ ಮೇಲೆ ಕಾಂಗ್ರೆಸ್ ನಿಷೇಧ ಧೋರಣೆ ಹೇರುತ್ತಿರುವುದು ಸರಿಯಲ್ಲ ಎಂದು ರವಿಶಂಕರ್ ನುಡಿದರು. ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ವರುಣ ಕ್ಷೇತ್ರದ ಬಗ್ಗೆ ಅಸಂಬದ್ಧ ಹೇಳಿಕೆ ನೀಡುವ ಮೂಲಕ ಕ್ಷೇತ್ರದಲ್ಲಿ ಶಾಂತಿ ಕದಡುತ್ತಿದ್ದಾರೆ. ಪಕ್ಷದಲ್ಲೇ ಇದ್ದು ಅಧಿಕಾರ ಪಡೆದು ಈಗ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವ ಅವರು, ನೈತಿಕತೆ ಇದ್ದರೆ ಬಿಜೆಪಿ ತ್ಯಜಿಸಲಿ ಎಂದು ತಿಳಿಸಿದರು. ಬಿಜೆಪಿ ಜಿಲ್ಲಾ ಸಹ ವಕ್ತಾರ ಡಾ.ಕೆ. ವಸಂತಕುಮಾರ್, ಜಿಲ್ಲಾ ಮಾಧ್ಯಮ ಸಂಚಾಲಕ ಮಹೇಶ್‌ರಾಜೇ ಅರಸ್, ಸಹ ವಕ್ತಾರ ಕೇಬಲ್ ಮಹೇಶ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇಂದು, ನಾಳೆ ಬೆಂಗಳೂರಲ್ಲಿ ಬೃಹತ್ ರೋಡ್ ಶೋ

●ನೀಟ್ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಅಗತ್ಯ ಮುಂಜಾಗರೂಕ ಕ್ರಮ ●ಇಷ್ಟರ ನಡುವೆಯೂ ರೋಡ್ ಶೋಗೆ ಅಡ್ಡಿಪಡಿಸಲು ಕಾಂಗ್ರೆಸ್ ಷಡ್ಯಂತ್ರ: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ

ಬೆಂಗಳೂರು, ಮೇ 5(ಕೆಎಂಶಿ)– ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ರಾಜಕೀಯ ನಾಯಕರ ರೋಡ್ ಶೋ ಇಲ್ಲವೇ ಸಭೆಗಳಿಂದ ನೀಟ್ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಸರ್ಕಾರ ಮತ್ತು ಬಿಜೆಪಿ ಎಚ್ಚೆತ್ತುಕೊಂಡಿದೆ. ರಾಜ್ಯದ ನಾಲ್ಕು ಪ್ರಮುಖ ನಗರಗಳಲ್ಲಿ ವೈದ್ಯಕೀಯ ಶಿಕ್ಷಣ ಪ್ರವೇಶ ಪರೀಕ್ಷೆ (ನೀಟ್) ನಡೆಯುತ್ತಿದ್ದು, ಈ ಸಂದರ್ಭದಲ್ಲಿ ರ್‍ಯಾಲಿಗಳಿಂದ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಅದರಲ್ಲೂ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಭದ್ರತಾದೃಷ್ಟಿಯಿಂದ ಪೊಲೀಸರು ಕಿರಿಕಿರಿ ●6ನೇ ಪುಟಕ್ಕೆ

ಎಲ್‌ಕೆಜಿ ಮಕ್ಕಳ ಶಾಲಾ ದಾಖಲಾತಿಗೆ ವಯೋಮಿತಿ ನಿಗದಿ: 4 ವರ್ಷ ಕಡ್ಡಾಯ

ಬೆಂಗಳೂರು, ಮೇ 5–ಎಲ್‌ಕೆಜಿ ಮಕ್ಕಳ ಶಾಲಾ ದಾಖಲಾತಿಗೆ ನಾಲ್ಕು ವರ್ಷ ವಯೋಮಿತಿ ನಿಗದಿಪಡಿಸಿ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಈ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಮಕ್ಕಳನ್ನು ಎಲ್‌ಕೆಜಿಗೆ ಸೇರಿಸಲು ಮಗುವಿಗೆ 4 ವರ್ಷ ತುಂಬಿರಬೇಕು. 2025 ಹಾಗೂ 26ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಒಂದನೇ ತರಗತಿಯ ದಾಖಲಾತಿಗೆ 6 ವರ್ಷ ಪೂರ್ಣಗೊಂಡಿರುವುದು ಕಡ್ಡಾಯ ಎಂಬ ನಿಯಮ ಜಾರಿ ಮಾಡಲಾದ ಹಿನ್ನಲೆಯಲ್ಲಿ ಎಲ್‌ಕೆಜಿಗೆ ಈ ವಯಸ್ಸನ್ನು ನಿಗದಿಪಡಿಸಲಾಗಿದೆ.

ಮೇ 8ರಿಂದ ಪ್ರತಿಬಂಧಕಾಜ್ಞೆ ಜಾರಿ

ಗುಂಪು ಸೇರುವುದು, ಮಾರಕಾಸ್ತ್ರ ಹಿಡಿದು ಓಡಾಡುವುದು ನಿಷಿದ್ಧ: ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ

ಮೈಸೂರು, ಮೇ 5– ರಾಜ್ಯ ವಿಧಾನಸಭಾ ಮತ ಕ್ಷೇತ್ರಗಳಿಗೆ ಸಾರ್ವತ್ರಿಕ ಚುನಾವಣೆ ನಿಮಿತ್ತ ಮೇ 8ರ ಸಾಯಂಕಾಲ 6ರಿಂದ ಮೇ 10ರಂದು ಮತ ದಾನ ಮುಕ್ತಾಯವಾಗುವವರೆಗೆ ದಂಡ ಪ್ರಕ್ರಿಯಾ ಸಂಹಿತೆ 1973ರ ಕಲಂ 144ರಡಿ ಪ್ರತಿಬಂಧಕಾಜ್ಞೆ ಯನ್ನು ಜಾರಿ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಯ ವ್ಯಾಪ್ತಿಯಲ್ಲಿ 5ಕ್ಕಿಂತ ಹೆಚ್ಚು ಜನರು ಗುಂಪು ಸೇರುವುದು, ಮೆರವಣಿಗೆ ಅಥವಾ ಸಭೆ ಸಮಾರಂಭ ಜರುಗಿಸುವುದನ್ನು ನಿಷೇಧಿಸಲಾಗಿದ್ದು, ಚುನಾವಣಾ ಅಭ್ಯರ್ಥಿ, ಬೆಂಬಲಿಗರು ಸೇರಿ 5 ಜನರಿಗಿಂತ ಹೆಚ್ಚಿನ ಸಂಖ್ಯೆಯ ಜನರು ಸೇರು ವಂತಿಲ್ಲ. ಶಸ್ತ್ರ, ಬಡಿಗೆ, ಭರ್ಜಿ, ಖಡ್ಗ, ಗದೆ, ಬಂದೂಕು, ಚೂರಿ, ಲಾಠಿ, ದೊಣ್ಣೆ, ಚಾಕು ಅಥವಾ ದೇಹಕ್ಕೆ ಅಪಾಯವನ್ನು ಉಂಟು ಮಾಡಬಹುದಾದ ಯಾವುದೇ ಮಾರಕಾಸ್ತ್ರವನ್ನು ಹಿಡಿದುಕೊಂಡು ತಿರುಗಾಡುವುದನ್ನು ಪ್ರತಿಬಂಧಿಸಲಾಗಿದೆ.

ಬಹಿರಂಗವಾಗಿ ಮಾರಕಾಸ್ತ್ರಗಳು, ಸ್ಫೋಟಕ ವಸ್ತುಗಳು, ವಿನಾಶಕಾರಿ ವಸ್ತುಗಳು ಹಾಗೂ ಇತರ ಆಕ್ಷೇಪಾರ್ಹ ವಸ್ತುಗಳನ್ನು ಹೊಂದಿದ್ದು ಕಂಡು ಬಂದ ಕೂಡಲೇ ಅವುಗಳನ್ನು ವಶಪಡಿಸಿಕೊಳ್ಳಲು ಪೊಲೀಸ್ ಅಧಿಕಾರಿಗಳಿಗೆ ಅಧಿಕಾರ ಇರುತ್ತದೆ.

> "ಸಾರ್ವಜನಿಕವಾಗಿ ಯಾವುದೇ ವ್ಯಕ್ತಿ ಪ್ರಚೋದನಾತ್ಮಕ ಹಾಗೂ ಉದ್ರೇಕಕಾರಿ ಹಾಡುಗಳು, ಕೂಗಾಟ ಮಾಡುವುದನ್ನು ಹಾಗೂ ವ್ಯಕ್ತಿಗಳ ತೇಜೋವಧೆ ಮಾಡುವಂತಹ ಚಿತ್ರಗಳು, ಚಿಹ್ನೆಗಳು, ಪ್ರತಿಕೃತಿಗಳು ಮುಂತಾದವುಗಳನ್ನು ಪ್ರದರ್ಶಿಸುವುದಾಗಲಿ ಹಾಗೂ ಸಾರ್ವಜನಿಕ ಗಾಂಭೀರ್ಯ ಹಾಗೂ ನೈತಿಕತೆಗೆ ಭಂಗ ತರುವಂತಹ ಅಥವಾ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವಂತಹ ಯಾವುದೇ ಕೃತ್ಯಗಳಲ್ಲಿ ಭಾಗಿಯಾಗುವಂತಿಲ್ಲ. ಶವ ಸಂಸ್ಕಾರಕ್ಕೆ ಅಥವಾ ಮದುವೆ ಮತ್ತು ಧಾರ್ಮಿಕ ಮೆರವಣಿಗೆಗಳಿಗೆ ಹಾಗೂ ಕೋವಿಡ್–19 ಕಾರ್ಯಗಳಿಗೆ ಆಜ್ಞೆ ಅನ್ವಯಿಸು ವುದಿಲ್ಲ. ಮದುವೆ ಮತ್ತು ಇತರೆ ಧಾರ್ಮಿಕ ಮೆರವಣಿಗೆಗಳು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಯಾಗದಂತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರದಂತೆ ಹಾಗೂ ಕೋವಿಡ್ ಮಾರ್ಗಸೂಚಿಗಳನ್ನು, ನಿಯಮಗಳನ್ನು ಪಾಲಿಸುವುದು. **–ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ**



ಅಂತಹ ಮಾರಕಾಸ್ತ್ರಗಳನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. ಅಲ್ಲದೇ ಸಂಬಂಧಿಸಿದ ವ್ಯಕ್ತಿಗಳ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು. ಮತಗಟ್ಟೆಗಳ 100 ಮೀಟರ್ ಒಳಗೆ ಚುನಾವಣೆ ಪ್ರಚಾರ ನಿಷೇಧಿಸಲಾಗಿದ್ದು, ಈ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜೆರಾಕ್ಸ್ ಅಂಗಡಿ, ಬುಕ್ ಸ್ಟಾಲ್, ಸೈಬರ್ ಕೆಫೆಗಳನ್ನು ನಿರ್ಬಂಧಿಸಿದೆ. ಕಲ್ಲುಗಳನ್ನು, ಕ್ವಾರಿ ಪದಾರ್ಥ ಇಲ್ಲವೇ ಸ್ಫೋಟಕ ವಸ್ತುಗಳು ಇತ್ಯಾದಿಗಳನ್ನು ಸದರಿ ಸ್ಥಳಕ್ಕೆ ತೆಗೆದುಕೊಂಡು ಹೋಗುವುದನ್ನು ಹಾಗೂ ಶೇಖರಿಸುವುದನ್ನು ನಿಷೇಧಿಸಲಾಗಿದೆ. ಕಲ್ಲುಗಳನ್ನು ಮತ್ತು ಎಸೆಯುವಂತಹ ವಸ್ತುಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ. ಮನುಷ್ಯ ಶವಗಳ ಅಥವಾ ಅವುಗಳ ಆಕೃತಿ ಅಥವಾ ಪ್ರತಿಮೆಗಳ ಪ್ರದರ್ಶನ, ದಹನ ಮಾಡುವುದನ್ನು ಸಹ ಪ್ರತಿಬಂಧಿಸಲಾಗಿದೆ.

ಬಹಿರಂಗವಾಗಿ ಘೋಷಣೆ ಮಾಡು ವುದು, ಪದ ಹಾಡುವುದು, ವಾದ್ಯ ಬಾರಿಸುವುದು, ವ್ಯಾಖ್ಯಾನ ಕೊಡುವುದು, ಸನ್ನೆ ಅಥವಾ ನಕಲಿ ಪ್ರದರ್ಶನವನ್ನು ಹಾಗೂ ಸಾರ್ವಜನಿಕ ಸಭ್ಯತೆ ಅಥವಾ ನೀತಿಯನ್ನು ಆಕ್ರಮಿಸಬಹುದಾದ ಕೃತ್ಯಗಳನ್ನು ಮಾಡುವುದನ್ನು ನಿಷೇಧಿಸಲಾಗಿದೆ. ಮತಗಟ್ಟೆಗಳ ಸುತ್ತ 100 ಮೀಟರ್ ಅಂತರದಲ್ಲಿ ಮೊಬೈಲ್ ಫೋನ್, ಕಾರ್ಡ್‌ಲೆಸ್ ಫೋನ್ ಅಥವಾ ಇನ್ನಿತರ ಎಲೆಕ್ಟ್ರಾನಿಕ್, ಉಪ ಕರಣಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ. (ಚುನಾವಣಾ ಕಾರ್ಯದಲ್ಲಿ ಜಿಲ್ಲಾ ಚುನಾವಣಾಧಿಕಾರಿ, ಚುನಾವಣಾಧಿಕಾರಿ ಅವರಿಂದ ಅನುಮತಿ ಪಡೆದ ಅಧಿಕಾರಿಗಳು, ಸಿಬ್ಬಂದಿ ಹೊರತುಪಡಿಸಿ) ಮತಗಟ್ಟೆಗಳ ಸುತ್ತ 100 ಮೀಟರ್ ಪರಿಮಿತಿಯಲ್ಲಿ ಪ್ರಚಾರಕ್ಕೆ ಸಂಬಂಧಿಸಿದ ಪೋಸ್ಟರ್, ಬ್ಯಾನರ್ ಅಥವಾ ಇನ್ನಾವುದೇ ವಸ್ತುಗಳನ್ನು ಬಳಸು ವಂತಿಲ್ಲ. ಈ ಅವಧಿಯಲ್ಲಿ ಕ್ಷೇತ್ರದ ಮತದಾರರಲ್ಲದ ವರು ಕ್ಷೇತ್ರದ ವ್ಯಾಪ್ತಿಯಿಂದ ಹೊರಗೆ ಹೋಗತಕ್ಕದ್ದು. ಈ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ಭಾರತೀಯ ದಂಡ ಸಂಹಿತೆಯ 188ರ ಪ್ರಕಾರ ಕ್ರಮ ವನ್ನು ಜರುಗಿಸಲಾಗುವುದು. ಈ ಆದೇಶವು ಮತ ದಾನ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ, ಪೊಲೀಸ್ ಅಧಿಕಾರಿಗಳಿಗೆ ಹಾಗೂ ಚುನಾವಣಾ ಕಾರ್ಯನಿರತ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಹಾಗೂ ಒಬ್ಬೊಬ್ಬ ರಾಗಿ ಮತಗಟ್ಟೆಗಳಿಗೆ ತೆರಳಿ ಮತದಾನ ಮಾಡುವ ಮತದಾರರಿಗೆ ಅನ್ವಯಿಸುವುದಿಲ್ಲ. ಪ್ರತಿಬಂಧಕಾಜ್ಞೆಯ ಉಲ್ಲಂಘನೆ ಆದಲ್ಲಿ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಆದೇಶಿಸಿದ್ದಾರೆ.

ವರ್ಷಕ್ಕೆ 3 ಸಿಲಿಂಡರ್ ಉಚಿತ: ಟಿ.ಎಸ್.ಶ್ರೀವತ್ಸ



ಮೈಸೂರು, ಮೇ 5– ದೇಶದ ಸಮಗ್ರ ಅಭಿವೃದ್ಧಿ ಕೈಗೊಳ್ಳುವುದರೊಂದಿಗೆ ಬಿಜೆಪಿಯ ಪ್ರಜಾ ಪ್ರಣಾಳಿಕೆಯಡಿ ಹಲವು ಯೋಜನೆ ಗಳನ್ನು ಬಿಜೆಪಿ ಸರ್ಕಾರ ಕೈಗೊಳ್ಳಲಿದೆ ಎಂದು ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್. ಶ್ರೀವತ್ಸ ಹೇಳಿದರು.

ಗುಂಡುರಾವ್ ನಗರ ಹಾಗೂ ಕನಕಗಿರಿ ಯಲ್ಲಿ ಗುರುವಾರ ಪ್ರಚಾರ ನಡೆಸಿ ಅವರು ಮಾತನಾಡಿದರು. ರಾಜ್ಯದ ಬಿಪಿಎಲ್ ಕಾರ್ಡುದಾರರಿಗೆ ವರ್ಷದಲ್ಲಿ ಯುಗಾದಿ, ಗಣೇಶಚತುರ್ಥಿ, ದೀಪಾವಳಿಯ ಹಬ್ಬ ದಂದು ಉಚಿತ ಸಿಲಿಂಡರ್ ನೀಡಲಾಗು ವುದು. ಪ್ರತಿದಿನ ಅರ್ಧ ಲೀ. ನಂದಿನಿ ಹಾಲು ಉಚಿತ ಪೂರೈಕೆ, ಶ್ರೀ ಅನ್ನ ಯೋಜನೆಯಡಿ ಬಡಕುಟುಂಬಗಳಿಗೆ ಒಟ್ಟು 5 ಕೆ.ಜಿ. ಸಿರಿಧಾನ್ಯ ವಿತರಣೆ, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಟಲ್ ಆಹಾರ ಕೇಂದ್ರ, ವರ್ಷದಲ್ಲಿ ಒಂದು ಬಾರಿ ಹಿರಿಯ ನಾಗರಿಕರ ಆರೋಗ್ಯ ತಪಾಸಣೆ, ಏಕರೂಪ ನಾಗರಿಕ ಸಂಹಿತೆ, ಸೇರಿದಂತೆ ಹಲವಾರು ಯೋಜನೆ ಈಡೇರಿ ಸಲು ಬಿಜೆಪಿ ಬದ್ಧವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಉಡಿಗಾಲ ಮಹದೇವಪ್ಪ, ಅಶೋಕ, ಡಿ ಪಿ ಸುರೇಶ, ದೊಡ್ಡಿ ಶಿವು, ರವಿ, ರಾಣಿ, ಸಿದ್ದಪ್ಪ ಮೀನಾಕ್ಷಿ, ಶಾರದಾ, ಉಮಾ, ನಾಗರಾಜ್, ವನ ಜಾಕ್ಷಿ, ಮುತ್ತಣ್ಣ, ಸಂತೋಷ್ ಕುಮಾರ್, ಮನು (ಅಪ್ಪಿ),ಇನ್ನು ಮುಂತಾದ ಪ್ರಮುಖರು ಇದ್ದರು. ಸ್ಥಳೀಯ ಬಿಜೆಪಿ ಮುಖಂಡರು, ಕಾರ್ಯಕರ್ತರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಹೆಬ್ಬಾಳದಲ್ಲಿ ಹರೀಶ್‌ಗೌಡ ಮತಯಾಚನೆ




ಮೈಸೂರು, ಮೇ 5– ಚಾಮರಾಜ ಕ್ಷೇತ್ರದ ಹೆಬ್ಬಾಳ ಬಡಾವಣೆಯ ಲೋಕನಾಯಕ ನಗರದಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹರೀಶ್‌ಗೌಡ ರೋಡ್ ಶೋ ನಡೆಸಿ ಮತ ಯಾಚಿಸಿದರು.

ಕಾಂಗ್ರೆಸ್ ಪಕ್ಷ ನುಡಿದಂತೆ ನಡೆವ ಪಕ್ಷವಾಗಿದ್ದು, ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದರು. ಆದರೆ ಬಿಜೆಪಿಯವರು ಸುಳ್ಳು ಭರವಸೆಗಳನ್ನು ನೀಡುತ್ತಾ ಜನರನ್ನು ಮರಳು ಮಾಡುತ್ತಿದ್ದಾರೆ. ಭ್ರಷ್ಟ ಬಿಜೆಪಿಗೆ ತಕ್ಕ ಪಾಠ ಕಲಿಸುವ ಸಮಯ ಬಂದಿದ್ದು, ನೀವೆಲ್ಲರೂ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುವ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು. ಕಾಂಗ್ರೆಸ್ 5 ಗ್ಯಾರಂಟಿ ಭರವಸೆಗಳನ್ನು ನೀಡಿದ್ದು, ಪ್ರತಿ ಬಡ ಕುಟುಂಬದ ಸದಸ್ಯರಿಗೆ ತಲಾ 10 ಕೆಜಿ ಅಕ್ಕಿ ಕುಟುಂಬದ ಮಹಿಳೆಗೆ ತಿಂಗಳಿಗೆ 2 ಸಾವಿರ ರೂ., 200 ಯೂನಿಟ್ ಉಚಿತ ವಿದ್ಯುತ್, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ನಿರುದ್ಯೋಗಿ ಪದವೀ ಧರರಿಗೆ 2 ವರ್ಷದವರೆಗೆ ತಿಂಗಳಿಗೆ 3 ಸಾವಿರ ರೂ. ಭತ್ಯೆ ನೀಡಲಾಗುವುದು. ಆದ್ದರಿಂದ ಈ ಬಾರಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದ್ದು ತಾವೆಲ್ಲರೂ ಅತಿ ಹೆಚ್ಚು ಮತಗಳ ಅಂತರದಿಂದ ನನ್ನನ್ನು ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮುಡಾ ಮಾಜಿ ಅಧ್ಯಕ್ಷ ಡಿ. ಧ್ರುವ ಕುಮಾರ್, ಪೈ. ಶ್ರೀನಿವಾಸ್, ಕೇಬಲ್ ನಾಗಣ್ಣ, ದಿನೇಶ್, ಹರೀಶ್, ರಾಮ ಕೃಷ್ಣೇಗೌಡ, ಎ.ಸಿ. ರವಿಕಿರಣ್, ಚಂದ್ರು, ಕಮಲಮ್ಮ ಹಾಜರಿದ್ದರು.



ಮಾಜಿ ಮೇಯರ್, ನರಸಿಂಹರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂದೇಶ್ ಸ್ವಾಮಿ ಅವರು ನರಸಿಂಹರಾಜ ಕ್ಷೇತ್ರದ ವಿವಿಧೆಡೆ ಮನೆಮನೆಗೆ ತೆರಳಿ ಮತಯಾಚಿಸಿದರು.



ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್. ಶ್ರೀವತ್ಸ ಪರವಾಗಿ ಒಕ್ಕಲಿಗರ ಮುಖಂಡರು ಶ್ರೀರಾಂಪುರ, ಅರವಿಂದನಗರ, ಜಂಯನಗರ ಬಡಾವಣೆಯ ಸುತ್ತಮುತ್ತ ಮತಯಾಚನೆ ಮಾಡಿದರು. ಈ ವೇಳೆ ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಗಿರೀಶ್‌ಗೌಡ, ಅಖಿಲ ಕರ್ನಾಟಕ ಒಕ್ಕಲಿಗರ ಮಹಿಳಾ ಸಂಘದ ಅಧ್ಯಕ್ಷೆ ಸುಮಿತ್ರ ರಮೇಶ್, ಹರೀಶ್ ಗೌಡ, ಅರುಣ್ ಗೌಡ, ಮಂಜುನಾಥ್ ಗೌಡ , ರಮೇಶ್‌ಗೌಡ, ಕುಮಾರ್‌ಗೌಡ ಇನ್ನಿತರರು ಭಾಗವಹಿಸಿದ್ದರು.

ನಿಧನ



ಬಿ.ನಟರಾಜ್

ಮೈಸೂರು, ಮೇ 5– ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ಮ್ಯಾನೇಜರ್ ಹಾಗೂ ಯಾದವಗಿರಿಯ ಸಂಕಲ್ಪ ಸೆಂಟ್ರಲ್ ಪಾರ್ಕ್ ಅಪಾರ್ಟ್‌ಮೆಂಟ್ ನಿವಾಸಿ ಬಿ.ನಟರಾಜ್ (62) ಶುಕ್ರವಾರ ಬೆಳಗ್ಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಉಮಾ ನಟರಾಜ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನಲ್ಲಿರುವ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿಕ್ಕಣ್ಣ (ರಂಗೇಗೌಡ)



ಮೈಸೂರು, ಮೇ 5–ಮೈಸೂರಿನ ಯರಗನಹಳ್ಳಿ ನಿವಾಸಿ ಚಿಕ್ಕಣ್ಣ (ರಂಗೇಗೌಡ) ಶುಕ್ರವಾರ ನಿಧನರಾದರು. ಅವರಿಗೆ 85 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಶನಿವಾರ) ಮಧ್ಯಾಹ್ನ 12 ಗಂಟೆಗೆ ಯರಗನಹಳ್ಳಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಲ್&ಟಿಯಿಂದ 6ನೇ ಆವೃತ್ತಿಯ ಯಶಸ್ವಿ ಹ್ಯಾಕಥಾನ್

ಮೈಸೂರು, ಮೇ 5– ಮೈಸೂರಿನ ಎಲ್ ಅಂಡ್ ಟಿ ಸರ್ವೀಸಸ್ ಆಯೋಜಿಸಿದ್ದ ಇನ್ನೋವೇಶನ್ ಹ್ಯಾಕಥಾನ್ 'ಟೆಕ್‌ಜಿಎಂ' ಆರನೇ ಆವೃತ್ತಿ ಯಶಸ್ವಿಯಾಗಿ ನೆರವೇರಿತು.

ಎಲ್‌ಟಿಟಿಎಸ್‌ನ ಮೈಸೂರು ಕ್ಯಾಂಪಸ್‌ನಲ್ಲಿ ನಡೆದ ವಾರ್ಷಿಕ ತಂತ್ರಜ್ಞಾನ ಸ್ಪರ್ಧೆಯಲ್ಲಿ ದೇಶದ ವಿಧೆಡೆಗಳ ಎಂಜಿನಿಯರಿಂಗ್ ಸಂಸ್ಥೆಗಳಿಂದ 31,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಟೆಕ್‌ಜಿಎಂ ಇಂಜಿನಿಯರಿಂಗ್ ವಿದ್ಯಾರ್ಥಿ ಗಳು 20 ಲಕ್ಷ ರೂಪಾಯಿಗಳ ಬಹುಮಾನದ ಮೊತ್ತದೊಂದಿಗೆ, ವಿಜೇತರು 10 ಲಕ್ಷ ರೂಪಾಯಿಗಳನ್ನು ಗಳಿಸಿದರು. ಎರಡು ದಿನಗಳ ಈವೆಂಟ್ ಸುಸ್ಥಿರತೆ, ಯುಎವಿಗಳು, ವೈದ್ಯಕೀಯ ರೋಗ ನಿರ್ಣಯ, ಕಂಪ್ಯೂಟ್ ದೃಷ್ಟಿ, ವಿಶ್ಲೇಷಣೆ, ಇವಿಗಳು ಮತ್ತು ಇವಿ ಮೂಲ ಸೌಕರ್ಯ ಮತ್ತು ವೈರ್ಲೆಸ್ ಪ್ರಸರಣ ವಿಷಯಗಳ ಮೇಲೆ ಕೇಂದ್ರೀಕರಿಸಿದೆ. ಇದು ನೈಜ–ಪ್ರಪಂಚದ ಸಮಸ್ಯೆ ಹೇಳಿಕೆಗಳಿಗೆ ಒಡ್ಡಿಕೊಳ್ಳುವುದನ್ನು ಪಡೆಯಲು ಮಹತ್ವಾಕಾಂಕ್ಷಿ ಎಂಜಿನಿಯರ್‌ಗಳನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ ಎಂದು ಎಲ್ ಅಂಡ್ ಟಿ ಟೆಕ್ನಾಲಜಿ ಸೇವೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಭಿಷೇಕ್ ಸಿನ್ಹಾ ತಿಳಿಸಿದ್ದಾರೆ.



ಮೈಸೂರಿನ ಕೆ.ಆರ್.ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್ ಮತಯಾಚನೆ ಮಾಡಿದರು. ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಉಪಾಧ್ಯಕ್ಷ ಸಚ್ಚಿದಾನಂದಮೂರ್ತಿ, ಮೈ ಶುಗರ್ ಕಾರ್ಖಾನೆಯ ಮಾಜಿ ಅಧ್ಯಕ್ಷ ನಾಗರಾಜಪ್ಪ, ರಾಜ್ಯ ಯುವ ಘಟಕದ ಅಧ್ಯಕ್ಷ ಮನೋಹರ್ ಅಬ್ಬಿಗೆರೆ, ವೀರಶೈವ ಲಿಂಗಾಯತ ಮುಖಂಡ ಮಹಾದೇವ ಮೂರ್ತಿ, ಕೆ.ಆರ್. ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಅಮ್ಮ ಸಂತೋಷ, ಹಿರಿಯ ವಕೀಲ ಮಹದೇವ ಪ್ರಸಾದ್, ರಾಷ್ಟ್ರೀಯ ಘಟಕದ ಸದಸ್ಯ ಲೋಕೇಶ್ ತುಂಬಲ, ಮುಖಂಡರಾದ ನಂ.ಸಿದ್ದಪ್ಪ, ದೀಪಕ್, ರೇವಣ್ಣ, ಸುರೇಶ್, ಗಿರೀಶ್, ಪ್ರಕಾಶ್ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಕೊಡಗಿನಲ್ಲಿ ಭೂ ಪರಿವರ್ತನೆ ಅನುಮತಿ ಹಿಂಪಡೆಯಲು ಆಗ್ರಹ

ಜಿಲ್ಲಾಧಿಕಾರಿಗೆ ದಿ ಎನ್ವಿರ್ನಾನ್ಮೆಂಟ್ ಮತ್ತು ಹೆಲ್ತ್ ಫೌಂಡೇಶನ್‌ನಿಂದ ನೋಟಿಸ್ ಜಾರಿ

ಮೈಸೂರು,ಮೇ 5(ಜಿಎ)–ಕೊಡಗಿನಲ್ಲಿ ಭೂ ಪರಿವರ್ತನೆಗೆ ನೀಡಿರುವ ಅನು ಮತಿಯನ್ನು ಹಿಂಪಡೆಯುವಂತೆ ಜಿಲ್ಲಾಧಿಕಾರಿ ಬಿ.ಸಿ.ಸತೀಶ್ ಅವರಿಗೆ ಲೀಗಲ್ ನೋಟಿಸ್ ನೀಡಿದ್ದೇವೆ ಎಂದು ದಿ ಎನ್ವಿರ್ನಾನ್ಮೆಂಟ್ ಮತ್ತು ಹೆಲ್ತ್ ಫೌಂಡೇಶನ್ ಕಾರ್ಯ ದರ್ಶಿ ಸಿ.ಪಿ.ಮುತ್ತಣ್ಣ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗು ನಗರೀಕರಣ ಮಾಡುತ್ತಿರುವುದಕ್ಕೆ ಕಡಿವಾಣ ಹಾಕದಿದ್ದರೆ, ಕಾವೇರಿ ನದಿಯ ಒಳ ಹರಿವಿನ ಮೇಲೆ ಪರಿಣಾಮ ಬೀರಲಿದೆ ಎಂದು ಕಳವಳ ವ್ಯಕ್ತಪಡಿಸಿದ ಅವರು, ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮದ ಪ್ರಕಾರ ಕಾಫಿ ತೋಟ, ಜಮ್ಮಾ ಮತ್ತು ಸಾಗು ಜಮೀನನ್ನು ಭೂ ಪರಿ ವರ್ತನೆ ಮಾಡಲು ಅವಕಾಶವಿಲ್ಲ. ಆದರೆ, ಈಗಾಗಲೇ ಈ ರೀತಿ ಅನೇಕ ಪರಿವರ್ತನೆ ಮಾಡಿ ತಮ್ಮ ವೈಯಕ್ತಿಕ ಲಾಭಕ್ಕಾಗಿ ಹಲವು ಬಡಾವಣೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕೊಡಗಿನಲ್ಲಿ 2015 ಮತ್ತು 2018ರಲ್ಲಿ ಭೂ ಕುಸಿತವಾದ ನಂತರ 2020ರಲ್ಲಿ ಜಿಲ್ಲಾಧಿಕಾರಿಗಳನ್ನೊಳಗೊಂಡಂತೆ ತಾಂತ್ರಿಕ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯೂ ಭೂ ಪರಿವರ್ತನೆ ಅರ್ಜಿ ಸಲ್ಲಿಸಿದ್ದರೆ, ಅದನ್ನು ಸ್ಥಳ ಪರಿಶೀಲನೆ ಮಾಡಿ ಅನುಮತಿ ನೀಡಬೇಕಿತು. ಆದರೆ, ಜಿಲ್ಲಾಧಿಕಾರಿಗಳು ಆ ರೀತಿ ನಿಯಮಾನು ಸಾರ ಮಾಡಿಲ್ಲ, ಈ ಕಾರಣ ಕೊಡಗಿನಲ್ಲಿ ಕಾಫಿ ತೋಟ, ಜಮ್ಮಾ ಮತ್ತು ಸಾಗು ಜಮೀನನ್ನು ಭೂ ಪರಿವರ್ತನೆ ಮಾಡಿ ಲೇಔಟ್ ನಿರ್ಮಾಣ ಮಾಡಿ ಕೊಂಡಿದ್ದಾರೆ.

ಇದನ್ನು ಪ್ರಶ್ನಿಸಿ 2021ರಲ್ಲಿ ನಮ್ಮ ಫೌಂಡೇಶನ್ ಕರ್ನಾಟಕ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಕೋರ್ಟ್ ಭೂ ಪರಿವರ್ತನೆ ಮಾಡದಂತೆ ಮಧ್ಯಂತರ ಆದೇಶ ನೀಡಿದೆ. ಆರ್‌ಟಿಐ ಮಾಹಿತಿ ಪ್ರಕಾರ 2005 ರಿಂದ 2015 ವರೆಗೂ ಕೊಡಗಿನಲ್ಲಿ 3ಸಾವಿರಕ್ಕೂ ಅಧಿಕ ಎಕರೆ ಭೂ ಪರಿವರ್ತನೆಯಾಗಿದ್ದು, ಈ ಮಧ್ಯಂತರ ಆದೇಶದನ್ವಯ ಕೊಡಗಿನ ಜಿಲ್ಲಾಧಿ ಕಾರಿಗಳಿಗೆ ಅಕ್ರಮ ಭೂ ಪರಿವರ್ತನೆಗೆ ನೀಡಿರುವ ಅನುಮತಿಯನ್ನು ಹಿಂಪಡೆ ಯುವಂತೆ ಕೋರಿ ಲೀಗಲ್ ನೋಟಿಸ್ ನೀಡಿದ್ದೇವೆ ಅವರಿಂದ ಈವರೆಗೂ ಯಾವುದೇ ಉತ್ತರ ಬಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು..

ಈ ವೇಳೆ ವಕೀಲ ಬಿ.ಆರ್.ದೀಪಕ್ ಮಾತನಾಡಿ, ಫೌಂಡೇಶನ್ ಹೈಕೋರ್ಟ್ ನಲ್ಲಿ ರಿಟ್ ಅರ್ಜಿ ಸಲ್ಲಿಸಿತ್ತು. ಅದರಂತೆ ಕೋರ್ಟ್ 2021ರಲ್ಲಿ ಮಧ್ಯಂತರ ಆದೇಶ ನೀಡಿ, ಭೂ ಕಾಯ್ದೆ ಸೆಕ್ಷನ್ 95ರ ಪ್ರಕಾರ ತಾಂತ್ರಿಕ ಸಮಿತಿ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಿರುವುದು ಭೂ ಪರಿವರ್ತನೆಗೆ ಅನುಮತಿ ನೀಡಿದೆ ಎಂದು ಅರ್ಥೈಸ ಲಾಗುವುದಿಲ್ಲ ಎಂದು ತಿಳಿಸಿದೆ ಎಂದರು.


ಕಾಫಿ ತೋಟ, ಜಮ್ಮಾ ಮತ್ತು ಸಾಗು ಜಮೀನನ್ನು ಭೂ ಪರಿವರ್ತನೆ ಮಾಡಿ ಈಗಾ ಗಲೇ ನಿರ್ಮಾಣವಾಗಿರುವ ಬಡಾವಣೆಗಳಲ್ಲಿ ಭೂ ಕಾಯ್ದೆಯ ಪ್ರಕಾರ ಇಲ್ಲಿ ಮನೆ ಗಳನ್ನು ನಿರ್ಮಾಣ ಮಾಡಿರುವುದು ಅಕ್ರಮ ವಾಗಿದ್ದು, ಈಗಾಗಲೇ ಖರೀದಿ ಮಾಡಿರು ವವರು ಇದರ ಬಗ್ಗೆ ಎಚ್ಚೆತ್ತುಕೊಂಡು ಹಣವನ್ನು ಹಿಂಪಡೆದುಕೊಳ್ಳಬೇಕು. ಮತ್ತೆ ಯಾರು ಇಂತಹ ಭೂಮಿಯನ್ನು ಖರೀದಿ ಮಾಡಬೇಡಿ ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಸಂಚಾಲಕ ರಾಯ್ ಬೋಪಣ್ಣ ಉಪಸ್ಥಿತರಿದ್ದರು.

ಕಂಟ್ರಿ ಸಿಟಿಜನ್ ಪಾರ್ಟಿ ಅಭ್ಯರ್ಥಿಗಳ ಬೆಂಬಲಿಸಲು ಮನವಿ

ಮೈಸೂರು,ಮೇ 5(ಪಿಎಂ)– ಚಾಮ ರಾಜ, ತಿ.ನರಸೀಪುರ ಮತ್ತು ಹನೂರು ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಕಂಟ್ರಿ ಸಿಟಿಜನ್ ಪಾರ್ಟಿ ಅಭ್ಯರ್ಥಿಗಳನ್ನು ಬೆಂಬಲಿಸುವಂತೆ ಮತದಾರರಲ್ಲಿ ಪಕ್ಷದ ಅಧ್ಯಕ್ಷ ಚೇತನ್ ಚಮನ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಚುನಾವಣೆಯಲ್ಲಿ ನಮ್ಮ ಪಕ್ಷವು 40 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿದ್ದು, ಈ ಪೈಕಿ ಚಾಮರಾಜ ಕ್ಷೇತ್ರದಿಂದ ಎಂ.ಪಂಚಲಿಂಗು, ತಿ.ನರಸೀಪುರ ಕ್ಷೇತ್ರ ದಿಂದ ಆರ್.ರೇಣುಕಾ ಮತ್ತು ಹನೂರು ಕ್ಷೇತ್ರದಿಂದ ಆರ್.ಸಿದ್ದಪ್ಪ ಸ್ಪರ್ಧೆ ಮಾಡಿ ದ್ದಾರೆ. ಮೈಸೂರು ಮತ್ತು ಚಾಮರಾಜ ನಗರ ಜಿಲ್ಲೆಗಳ ಜನತೆ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಬೇಕೆಂದು ಕೋರಿದರು. ಇದೇ ವೇಳೆ ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಪಕ್ಷದ ಅಭ್ಯರ್ಥಿ ಗಳಾದ ಎಂ.ಪಂಚಲಿಂಗು, ಆರ್.ರೇಣುಕಾ, ಆರ್.ಸಿದ್ದಪ್ಪ ಗೋಷ್ಠಿಯಲ್ಲಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ– ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 7.15 ಭಾವಗೀತೆಗಳು, 8.30 ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 9.30 ಚುನಾವಣೆ 2023, ಮತ ಕ್ಷೇತ್ರ ದರ್ಶನ–ಸಮಗ್ರ ಚಿತ್ರಣ, 10.00 ಕೆ.ಎಸ್. ಹೇರಂಬ ಮತ್ತು ಕೆ.ಎಸ್. ಹೇಮಂತ–ಯುಗಳ ವೇಣುವಾದನ

ಮಧ್ಯಾಹ್ನ: 12.45 ಜನಪದ ಸಂಗೀತ–ಬಿ.ನಿಂಗಮ್ಮ ಮತ್ತು ಸಂಗಡಿಗರು, 1.00 ರಂಗಗೀತೆ–ರಾಜಪ್ಪ, 1.20 ಭಾವಗೀತೆ, 2.40 ಚಲನ ಚಿತ್ರ ಧ್ವನಿವಾಹಿನಿ– ಭಬ್ರುವಾಹನ, 3.30 ಮಕ್ಕಳ ಮಂಟಪ – ಕೈಲಾಸಪುರಂ, ಮೈಸೂರು ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ "ದೂರದ ಬೆಟ್ಟ", ಮೂಲ ಕಾದಂಬರಿ– ತ್ರಿವೇಣಿ, ಬಾನುಲಿ ರೂಪ– ಪ್ರೊ.ಎಸ್.ಎನ್. ಪುಷ್ಕರ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 4.30 ನೆನಪಿನಂಗಳ, 6.50 ಕೃಷಿರಂಗ "ತೋರಣ ಹೂರಣ" ಪ್ರಸ್ತುತಿ–ಜಿ. ಶಾಂತಕುಮಾರ್, 8.00 ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 9.15 ಮುದ್ರಣ ಮಾಧ್ಯಮ–ಎಷ್ಟು ಸ್ವತಂತ್ರ–ಮಾತನಾಡುತ್ತಾರೆ ಪತ್ರಕರ್ತ ಬಿ.ವಿ. ಮಹೇಶ್ ಚಂದ್ರ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಅಲ್ಲಾರಖಾ ಕಲಾವಂತ್–ಸಾರಂಗಿ ವಾದನ, ಸಮರ್ ಸಹ– ತಬಲ

ಇಂದಿನ ಪಂಚಾಂಗ

6.5.2023 ಶನಿವಾರ, ಮಳೆ ನಕ್ಷತ್ರ: ಭರಣಿ, 28.04.2023 ರಿಂದ 10.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಮಾಜಿ ಮುಖ್ಯಮಂತ್ರಿ ಹಾಗೂ ವರುಣಾ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಅವರೊಂದಿಗೆ ಸಂವಾದ ಕಾರ್ಯಕ್ರಮ, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 9ಕ್ಕೆ

■ **ಮೈಸೂರು ಆರ್ಟ್ ಗ್ಯಾಲರಿ, ಮಹದೇಶ್ವರ ಕಲಾತಂಡ ಗೌರಿಶಂಕರ ನಗರ :** ಮಹಾ ಮಾನವತಾವಾದಿ ಬಸವಣ್ಣನವರ ರಂಗೋಲಿ ಚಿತ್ರ ಪ್ರದರ್ಶನ ಮತ್ತು ಬಸವ ಜಯಂತಿ ಕಾರ್ಯಕ್ರಮ, ಉದ್ಘಾಟನೆ : ಮರಿಮಲ್ಲಪ್ಪ ಪ್ರೌಢಶಾಲೆ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಮುಖ್ಯ ಅತಿಥಿಗಳು : ಭರತನಾಟ್ಯ ಕಲಾವಿದೆ ಶ್ರೀಮತಿ ಕಲ್ಪನಾ ಎಸ್. ಜುಪ್ತಿಮಠ, ಮಹದೇಶ್ವರ ಕಲಾ ತಂಡದವರಿಂದ ವಚನ ಗಾಯನ, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸಂಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಬೆಳಗ್ಗೆ 11ಕ್ಕೆ.

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಅಂಬೇಡ್ಕರ್ ಜಯಂತಿ ಪ್ರಯುಕ್ತ ವಿಶೇಷ ಉಪನ್ಯಾಸ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ. ಡಿ. ಆನಂದ ಅವರಿಂದ ಅಂಬೇಡ್ಕರ್ ದೃಷ್ಟಿಯಲ್ಲಿ ಸಮಾನತೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಸೆಮಿನಾರ್ ಹಾಲ್, ಬೆಳಗ್ಗೆ 11ಕ್ಕೆ.

■ **ಸಮಸ್ತ ಬ್ರಾಹ್ಮಣ ಸಮಾಜ ಕರ್ನಾಟಕ, ಜಿಲ್ಲಾ ವಿವಿಧ ಬ್ರಾಹ್ಮಣ ಸಂಘಟನೆಗಳು, ಮೈಸೂರು :** ಬೆಳಗ್ಗೆ 8.30 ರಿಂದ ಮಧ್ಯಾಹ್ನ 3 ರವರೆಗೆ 46ನೇ ರಾಜ್ಯ ಮಟ್ಟದ ಬ್ರಾಹ್ಮಣ ವಧು–ವರಾನ್ವೇಷಣಾ ಸಮಾವೇಶ, ಸಾನ್ನಿಧ್ಯ : ಮೇಲುಕೋಟೆ ವಂಗೀಪುರಂ ನಂಬಿಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಜ್ಯೋತಿಷಿ ಡಾ. ಭಾನುಪ್ರಕಾಶ್ ಶರ್ಮ, ಡಾ. ಮುರಳೀಧರ ಶಾಸ್ತ್ರ ಅಧ್ಯಕ್ಷತೆ : ಶ್ರೀ ಶೃಂಗೇರಿ ಶಂಕರ ಮಠದ ಧರ್ಮಾಧಿಕಾರಿ ಹೆಚ್. ರಾಮಚಂದ್ರ, ಉಪಸ್ಥಿತರು : ಎಕೆಬಿಎಂಎಸ್ ನಿಕಟಪೂರ್ವ ರಾಜ್ಯ ಹಿರಿಯ ಉಪಾಧ್ಯಕ್ಷ ಆರ್. ಲಕ್ಷ್ಮೀಕಾಂತ್, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಹಿರಿಯ ವಿಪ್ರ ಮುಖಂಡ ನಂ. ಶ್ರೀಕಂಠಕುಮಾರ್, ಅನಿಲ್ ಕುಮಾರ್, ವಿಶ್ವ ಮಧ್ವಮತ ವೆಲ್‌ಫೇರ್ ಅಸೋಸಿಯೇಷನ್ ಸಂಸ್ಥಾಪಕ ಅಧ್ಯಕ್ಷ ವೆಂಕೋಬರಾವ್ ಬುಕ್ಕಾ ಸಾಗರ, ಸಮಾಜ ಸೇವಕರಾದ ಶ್ರೀಮತಿ ಜಯಶ್ರೀ ಶಿವರಾಂ, ಸಾಹಿತಿ ಡಿ.ಎನ್. ಕೃಷ್ಣಮೂರ್ತಿ, ಹೊಮ್ಮ ಮಂಜುನಾಥ್, ಹೆಚ್.ಎಸ್. ಜಗದೀಶ್, ಗುರುದತ್, ಮೋಹನ್, ಆನಂದ ಜೋಷಿ, ಪ್ರೇಮತನಯ ಶ್ರೀನಿವಾಸ್ ಗುರೂಜಿ, ಎಸ್. ರಾಘವೇಂದ್ರರಾವ್, ಸ್ಥಳ: ಶ್ರೀ ವಿದ್ಯಾಭಾರತೀ ಕಲ್ಯಾಣ ಮಂಟಪ, ಉತ್ತರಾಧಿ ಮಠದ ರಸ್ತೆ, ಗನ್‌ಹೌಸ್ ಹತ್ತಿರ, ಮಧ್ಯಾಹ್ನ 12ಕ್ಕೆ.

■ **ನಟನಾ ಮೈಸೂರು :** ರಜಾ ಮಜಾ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಡಗರ, ಉಪಸ್ಥಿತರು: ಚಲನಚಿತ್ರ ನಟ ಅನಿರುದ್ಧ ಜಟ್ಕರ್, ಕಿರುತೆರೆ ನಟ ಋತ್ವಿಕ್ ಆರೋನ್ ಕೃಪಾಕರ್, ಸರಿಗಮಪ ಖ್ಯಾತಿಯ ಕು. ದಿಯಾ ಹೆಗ್ಡೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ವಿಶ್ವನಾಥ ಪಿ. ಹಿರೇಮಠ, ಸುಪ್ರೀಂ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲ ಡಾ. ಆರ್. ಗುಣವತಿ, ಸ್ಕೂಲ್ ಮುಖ್ಯಸ್ಥ ರವೀಂದ್ರಸ್ವಾಮಿ, ಸ್ಥಳ: ಗಾನಭಾರತಿ ರಮಾಗೋವಿಂದ ರಂಗ ಮಂದಿರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5ಕ್ಕೆ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟೆಬಲ್ ಟ್ರಸ್ಟ್ :** ನೃತ್ಯ ಕಲಾವಿದೆ ಡಾ. ವಸುಂಧರಾ ದೊರೆಸ್ವಾಮಿ ಅವರ ಶಿಷ್ಯರಿಂದ ನೃತ್ಯ ಕಾರ್ಯಕ್ರಮ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಸಂಜೆ 6ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಶ್ರೀ ಗುರುವಾದಿರಾಜರ ಪಂಚರಾತ್ರೋತ್ಸವ ವೈಭವ, ಗಾನಸಿರಿ–ವೇದಾಂತ ಲಹರಿ ವಿನೂತನ ಕಾರ್ಯಕ್ರಮ, ಸಂಜೆ 5 ರಿಂದ ಭಜನಾ ಕಾರ್ಯಕ್ರಮ, ಸಂಜೆ 6 ರಿಂದ ವೀಣಾವಾದಕರಾದ ವಿದುಷಿ ಶ್ರೀಮತಿ ಶುಭಾ ಸಂತೋಷ್ ಅವರಿಂದ ಗಾಯನ–ವೀಣಾವಾದನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಸಮಿತಿ, ಕೃಷ್ಣಮೂರ್ತಿಪುರಂ.

■ **ತನುಮನ ಸಂಸ್ಥೆ, ಮೈಸೂರು :** ಗಾಯಕ ಲಕ್ಷ್ಮೀರಾವ್ ಅವರ ಸಾರಥ್ಯದಲ್ಲಿ 2567ನೇ ಬುದ್ಧಪೂರ್ಣಿಮೆಯ ಪ್ರಯುಕ್ತ ಜಗನಡೆಯಲಿ ಬುದ್ಧನಕಡೆ ಸಂಗೀತ ಕಾರ್ಯಕ್ರಮ ಮತ್ತು 'ಬುದ್ಧನಾಡ ಭೂಷಣ' ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ್, ಪ್ರಶಸ್ತಿ ಪ್ರದಾನ : ಎಪಿಎಂಸಿ ಮಾಜಿ ಉಪಾಧ್ಯಕ್ಷ ಚಿಕ್ಕಜವರಯ್ಯ, ಸ್ಥಳ: ವಿಶ್ವಮೈತ್ರಿ ಬುದ್ಧವಿಹಾರ, ಅಶೋಕ ರಸ್ತೆ, ಸಂಜೆ 6ಕ್ಕೆ.

■ **ಯವನಿಕ ರಂಗ ತಂಡ, ನೇಪಥ್ಯ ರಂಗ ತಂಡ :** ಬೆಂಗಳೂರು ಪ್ಲೇಯರ್ಸ್ ತಂಡದಿಂದ ಟಿ.ಪಿ. ಕೈಲಾಸಂ ರಚನೆಯ 'ಗಂಡಸ್ಕತ್ರಿ' ನಾಟಕ ಪ್ರದರ್ಶನ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ, ಸಂಜೆ 7ಕ್ಕೆ.

ರಂಗಾಯಣ ಚಿಣ್ಣರ ಮೇಳಕ್ಕೆ ರಂಗಿನ ತೆರೆ



ಮೈಸೂರು, ಮೇ 5(ಸಿಎನ್)–ಮಕ್ಕಳ ಕೈಗೆ ಮೊಬೈಲ್ ನೀಡಿ ಅವರ ಭವಿಷ್ಯ ಹಾಳು ಮಾಡದೇ ಕ್ರಿಯಾಶೀಲರನ್ನಾಗಿ ಬೆಳೆಸಬೇಕು. ಕಲಿಕೆಯ ಜೊತೆ ಜೊತೆಗೆ ಮನರಂಜನಾತ್ಮಕ ವಿಷಯಗಳ ಬಗ್ಗೆ ಅರಿವು ಮೂಡಿಸಬೇಕು. ಈ ನಿಟ್ಟಿನಲ್ಲಿ ಮೈಸೂರು ರಂಗಾಯಣ ಪ್ರತೀ ವರ್ಷವು ಚಿಣ್ಣರ ಮೇಳ ಆಯೋಜಿಸಿ, ವಿಭಿನ್ನ ಶೈಲಿಯಲ್ಲಿ ಮಕ್ಕಳ ಬೇಸಿಗೆ ರಜಾದಿನಗಳನ್ನು, ಅರ್ಥಪೂರ್ಣವಾಗಿ ಕಳೆಯಲು ವೇದಿಕೆ ಕಲ್ಪಿಸುತ್ತಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಪಿ.ವಿಶ್ವನಾಥ್ ಹಿರೇಮಠ ಹೇಳಿದರು.

> ನಮ್ಮ ಶಾಲೆಗಳಿಗಿಂತ ಚಿಣ್ಣರ ಮೇಳವೇ ಬೆಸ್ಟ್. ಚಿಣ್ಣರ ಮೇಳ ನಮಗೆ ಶಾಲೆಯಾಗಬೇಕು. ನಮ್ಮಂಥ ತುಂಟ ಮಕ್ಕಳನ್ನ ನಿಭಾಯಿಸಿ, ಪ್ರತಿಯೊಬ್ಬರಿಗೂ ಮನರಂಜನೆ ಜೊತೆಗೆ ವಿವಿಧ ಕಲೆಗಳನ್ನು ಅಭ್ಯಾಸ ಮಾಡಿಸಿದ ರಂಗಾಯಣ ತಂಡದವರಿಗೆ ಧನ್ಯವಾದಗಳು.
> -ನಿಶಾಂತ್, ಚಿಣ್ಣರ ಮೇಳ ಶಿಬಿರಾರ್ಥಿ.

ನಗರದ ರಂಗಾಯಣದ ವನರಂಗ ಆವರಣದಲ್ಲಿ ಆಯೋಜಿಸಿದ್ದ 'ನಮ್ಮೀ ತಾಯ್ನೆಲ' ಚಿಣ್ಣರ ಮೇಳ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಇದು ಹೆಸರಿಗೆ ಮಾತ್ರ ಚಿಣ್ಣರ ಮೇಳ ಸಮಾರೋಪ ಸಮಾರಂಭ ಆದರೆ ಒಬ್ಬರಿಗೊಬ್ಬರು ಅಭಿನಂದಿಸಿಕೊಳ್ಳುವ ಮೂಲಕ ಅಭಿನಂದನಾ ಕಾರ್ಯಕ್ರಮವಾಗಿ ಮಾರ್ಪಟ್ಟಿದೆ. ಸಾಮಾನ್ಯವಾಗಿ ಸಮಾರೋಪ ಸಭೆಗಳಲ್ಲಿ ಹಿಂದಿನ ಲೋಪ ದೋಷದ ಬಗ್ಗೆ ಚರ್ಚೆಯಾಗುತ್ತೆ ಆದರೆ ಇಲ್ಲಿ ಅದಕ್ಕೆ ಅವಕಾಶವೇ ಇಲ್ಲದಂತಾಗಿ, ಮಕ್ಕಳ ಅವಶ್ಯಕತೆ ಅನುಗುಣವಾಗಿ ಶಿಬಿರ ನಡೆಸಿ ರಂಗಾಯಣ ಯಶಸ್ವಿಯಾಗಿದೆ ಎಂದು ಅಭಿನಂದಿಸಿದರು.

ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಬಹಳ ಮುಖ್ಯವಾಗುತ್ತೆ ಬರೀ ಓದುವುದೇ ವಿದ್ಯಾರ್ಥಿಗಳ ಜೀವನವಲ್ಲ. ಪೋಷಕರು ತಮ್ಮ ಕನಸನ್ನು ಮಕ್ಕಳ ಹೆಗಲಿಗೆ ಹೊರಿಸುವ ಮುನ್ನ ಯೋಚಿಸಬೇಕು. ಒತ್ತಡದ ಮೂಲಕ ಅವರ ಬಾಲ್ಯ ಕಸಿಯುತ್ತಿದ್ದೇವೆ ಎಂದು ತಿಳಿದುಕೊಳ್ಳಬೇಕು. ಮಕ್ಕಳನ್ನು ವಿಸ್ತಾರವಾದ ಗಿಡದಂತೆ ಬೆಳೆಸಬೇಕು 'ಬೋನ್ಸಾಯಿ ಗಿಡದಂತೆ ಸಂಕುಚಿತವಾಗಿ ಬೆಳೆಸಬಾರದು ಎಂದು ವಿಶ್ವನಾಥ್ ಪೋಷಕರಿಗೆ ತಿಳಿ ಹೇಳಿದರು.

ಬಳಿಕ ಹಿರಿಯ ರಂಗಕರ್ಮಿ ಪ್ರೊ.ಹೆಚ್.ಎಸ್.ಉಮೇಶ್ ಮಾತನಾಡಿ, 'ಬೆಳೆಯುವುದು ಎಂದರೆ ಮಕ್ಕಳಾಗುವುದು' ಎಂಬ ಬಿ.ವಿ ಕಾರಂತರು ಹೇಳುವ ಮೂಲಕ ಯಾರಿಗೆ ಮಗುವಿನ ಮನಸ್ಸು ಇರುವುದಿಲ್ಲವೋ ಆ ವ್ಯಕ್ತಿ ಪರಿಪೂರ್ಣ ಕಲಾವಿದ ಆಗಲಾರ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ವಿಶ್ವದಾದ್ಯಂತ ರಂಗಾಯಣದ ರೀತಿ ಚಿಣ್ಣರ ಮೇಳದಂಥ ಅರ್ಥಪೂರ್ಣ ಶಿಬಿರ ನಾನು ಕಂಡಿಲ್ಲ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ವಿಶ್ವನಾಥ್ ಪಿ.ಹಿರೇಮಠ, ರಂಗಕರ್ಮಿ ಪ್ರೊ.ಹೆಚ್.ಎಸ್.ಉಮೇಶ್, ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, 2023ರ ಚಿಣ್ಣರ ಮೇಳ ಶಿಬಿರ ನಿರ್ದೇಶಕ ಕೃಷ್ಣಕುಮಾರ್ ನಾರ್ಣಕಜೆ ಮತ್ತಿತರರಿದ್ದರು.



ಮಕ್ಕಳು ತಮ್ಮ ಸಹಪಾಠಿಗಳೊಂದಿಗೆ ರಂಗು ತುಂಬಿದ ಪಿಕಾರಿಗಳನ್ನು ಮಕ್ಕಳು ಕೈಯಲ್ಲಿ ಹಿಡಿದು, ಸ್ನೇಹಿತರಿಗೆ ಬಣ್ಣ ಹಚ್ಚಿ, ಓಕುಳಿಯಾಟ ಆಡಿದರು. ಈ ಸಂದರ್ಭ ಚಿಣ್ಣರೊಂದಿಗೆ ಪೋಷಕರು ಕೂಡ ಓಕುಳಿಯಲ್ಲಿ ಕಾಣಿಸಿಕೊಂಡು ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ನನ್ನ ಶೈಕ್ಷಣಿಕ ಹಿನ್ನೆಲೆ, ತಂದೆಯೊಂದಿಗೆ ಮಾಡಿದಂತಹ ಸಾಮಾಜಿಕ ಕಾರ್ಯಗಳ ಬಗ್ಗೆ ಚಾಮುಂಡೇಶ್ವರಿ ಜನರಿಗೆ ಅರಿವಿದೆ...

–ಕವೀಶ್‌ಗೌಡ, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ



ಸಂದರ್ಶನ: ಎಸ್.ಬಿ.ದೇವರಾಜ

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್‌ಗೌಡ ಬಿರುಸಿನ ಪ್ರಚಾರ ಮುಂದುವರೆಸಿದ್ದು, ಉತ್ತಮ ಜನ ಸ್ಪಂದನೆ ವ್ಯಕ್ತವಾಗುತ್ತಿದೆ. ಕ್ಷೇತ್ರದ ಬದಲಾವಣೆಗೆ ಬಿಜೆಪಿ ಬೆಂಬಲಿಸುವಂತೆ ಮತದಾರರ ಸೆಳೆಯುವಲ್ಲಿ ಸಕ್ರಿಯರಾಗಿದ್ದಾರೆ. ಇವರು ಚಾಮರಾಜ ಕ್ಷೇತ್ರದ ಮಾಜಿ ಶಾಸಕ ವಾಸು ಅವರ ಪುತ್ರ. ವಿಶ್ವೇಶ್ವರಯ್ಯ ತಾಂತ್ರಿಕ ವಿವಿ(ವಿಟಿಯು)ಯಲ್ಲಿ ಬಿಇ, ಕರ್ನಾಟಕ ರಾಜ್ಯ ಕಾನೂನು ವಿವಿಯಲ್ಲಿ ಎಲ್‌ಎಲ್‌ಬಿ, ಯುಕೆಯ ಕಾರ್ಡಿಫ್ ಯೂನಿವರ್ಸಿಟಿಯಲ್ಲಿ ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಪದವಿ ಪಡೆದಿದ್ದಾರೆ. ಕಾನೂನು ವೃತ್ತಿ ಜೊತೆಗೆ ಶಿಕ್ಷಣ ಸಂಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವ ಕವೀಶ್‌ಗೌಡರು(40 ವರ್ಷ), ಈಗ ರಾಜಕೀಯ ಪರೀಕ್ಷೆ ಎದುರಿಸಿದ್ದಾರೆ. ಪ್ರಚಾರ, ಕ್ಷೇತ್ರದ ಸಮಸ್ಯೆ, ಜನ ಸ್ಪಂದನೆ ಇನ್ನಿತರ ವಿಚಾರಗಳ ಬಗ್ಗೆ ಅವರು 'ಮೈಸೂರು ಮಿತ್ರ'ನೊಂದಿಗೆ ಮನಬಿಚ್ಚಿ ಮಾತನಾಡಿದ್ದಾರೆ.

***ಮೈಸೂರು ಮಿತ್ರ:* ಸ್ಪರ್ಧೆಗೆ ಅವಕಾಶ ಸಿಕ್ಕಿದ ಬಗ್ಗೆ ನಿಮ್ಮ ಮೊದಲ ಪ್ರತಿಕ್ರಿಯೆ?**

ಕವೀಶ್‌ಗೌಡ: ಯುವಕರನ್ನು ರಾಜಕೀಯವಾಗಿ ಬೆಳೆಸಬೇಕು. ಹಾಗೆ ಮಾಡಿದರೆ ಅವರೆಲ್ಲಾ ಭ್ರಷ್ಟಾಚಾರದ ವಿರುದ್ಧ ಕೆಲಸ ಮಾಡುತ್ತಾರೆ. ಅಭಿವೃದ್ಧಿ ಪರಿಣಾಮಕಾರಿಯಾಗಿರುತ್ತದೆ ಅದರಲ್ಲೂ ವೃತ್ತಿಪರ ಯುವಕರು ರಾಜಕೀಯದಲ್ಲಿ ಸಕ್ರಿಯರಾದರೆ ಜನಪರ ಕಾಳಜಿಯಿಂದ ಸರ್ಕಾರದ ಯೋಜನೆಗಳನ್ನು ನೇರವಾಗಿ ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಶ್ರಮಿಸುತ್ತಾರೆ ಎನ್ನುವುದು ಪ್ರಧಾನಿ ಮೋದಿಯವರ ಆಶಯ. ಈ ಉದ್ದೇಶದಿಂದ ನನ್ನಂತಹ ಯುವಕರನ್ನು ಗುರುತಿಸಿ ಅವಕಾಶ ನೀಡಿರುವುದು ಅತ್ಯಂತ ಖುಷಿಯ ಸಂಗತಿ. ನನಗೆ ಅವಕಾಶ ನೀಡಿದ್ದಕ್ಕೆ ಬಿಜೆಪಿ ರಾಷ್ಟ್ರೀಯ ಹಾಗೂ ರಾಜ್ಯ ನಾಯಕರು, ನಾನು ಸ್ಪರ್ಧಿಸ ಬೇಕೆಂದು ಅಪೇಕ್ಷಿಸಿದ್ದ ಕ್ಷೇತ್ರದ ಎಲ್ಲಾ ಮತ ದಾರರಿಗೆ ಧನ್ಯವಾದ ತಿಳಿಸುತ್ತೇನೆ.

***ಮಿತ್ರ:* ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮತದಾರರ ಸ್ಪಂದನೆ ಹೇಗಿದೆ?**

ಕವೀಶ್: ತುಂಬಾ ಚೆನ್ನಾಗಿದೆ. ಕ್ಷೇತ್ರಾದ್ಯಂತ ಬದಲಾವಣೆ ಅಲೆ ಎದ್ದಿದೆ. ಬದಲಾವಣೆ ಆಗಲೇ ಬೇಕು ಎಂದು ಜನ ಬಯಸಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಈವರೆಗೆ ಬಿಜೆಪಿ ಗೆದ್ದಿಲ್ಲ. ಈ ಬಾರಿ ಬಿಜೆಪಿಗೇ ಬೆಂಬಲ ನೀಡುವುದಾಗಿ ಹೇಳುತ್ತಿದ್ದಾರೆ. ಸುಶಿಕ್ಷಿತ, ಶಿಕ್ಷಣ ಸಂಸ್ಥೆ ನಡೆಸುತ್ತಿರುವ ಹಾಗೂ ತಂದೆಯೊಟ್ಟಿಗೆ ತಳಮಟ್ಟ ದಿಂದ ಅನೇಕ ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗಿರುವ ಯುವಕ ಎನ್ನುವ ವಿಚಾರ ಮತದಾರ ದೇವರ ಮನದಲ್ಲಿ ಮೂಡಿದೆ. ಈ ಹಿನ್ನೆಲೆಯಲ್ಲಿ ನನ್ನ ಮೇಲೆ ಜನರು ಅಪಾರ ನಂಬಿಕೆ ಇಟ್ಟಿದ್ದಾರೆ. ಇದನ್ನು ನೋಡಿ ನನಗೆ ಅತೀವ ಸಂತೋಷವಾಗಿದೆ. ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ಯೋಜನೆಗಳು, ಕಾರ್ಯಕ್ರಮಗಳ ಜೊತೆಗೆ ಅಭಿವೃದ್ಧಿ ಆಶಯದೊಂದಿಗೆ ಸ್ಪರ್ಧಿಸಿರುವ ಯುವಕನಿಗೆ ಆಶೀರ್ವದಿಸಬೇಕೆಂಬ ಭಾವನೆ ಕ್ಷೇತ್ರದ ಜನರಲ್ಲಿದೆ.

***ಮಿತ್ರ* ಈ ಕ್ಷೇತ್ರದ ಸಮಸ್ಯೆಗಳ ಅರಿವಿದೆಯೇ?**

ಕವೀಶ್: ಕ್ಷೇತ್ರದ ಯಾವುದೇ ಹಳ್ಳಿ ಹಾಗೂ ಬಡಾವಣೆಗೆ ಹೋದರೂ ಮೂಲಭೂತ ಸೌಕರ್ಯಗಳ ಕೊರತೆಯನ್ನು ಕಂಡಿದ್ದೇನೆ. ಶುದ್ಧ ಕುಡಿಯುವ ನೀರು, ಯುಜಿಡಿ, ಕೆರೆಗಳ ದುಸ್ಥಿತಿ ಸೇರಿದಂತೆ ಹಲವು ಸಮಸ್ಯೆಗಳ ಬಗ್ಗೆ ಜನ ಹೇಳಿಕೊಂಡಿದ್ದಾರೆ. ನಾನು ಜನರ ನಡುವೆ ಇದ್ದು ಬೆಳೆದು ಬಂದವನು. ಹಾಗಾಗಿ ಸಮಸ್ಯೆಗಳ ಬಗ್ಗೆ ಅರಿವಿದೆ. ಹಾಗೆಯೇ ಸಮಸ್ಯೆಗಳನ್ನು ಪರಿಹರಿಸುವ ವಿಧಾನವನ್ನೂ ತಿಳಿದಿದ್ದೇನೆ.

> “ ಕ್ಷೇತ್ರದ ಯಾವುದೇ ಹಳ್ಳಿ ಹಾಗೂ ಬಡಾವಣೆಗೆ ಹೋದರೂ ಮೂಲಭೂತ ಸೌಕರ್ಯಗಳ ಕೊರತೆಯನ್ನು ಕಂಡಿದ್ದೇನೆ. ಶುದ್ಧ ಕುಡಿಯುವ ನೀರು, ಯುಜಿಡಿ, ಕೆರೆಗಳ ದುಸ್ಥಿತಿ ಸೇರಿದಂತೆ ಹಲವು ಸಮಸ್ಯೆಗಳ ಬಗ್ಗೆ ಜನ ಹೇಳಿಕೊಂಡಿದ್ದಾರೆ. ನಾನು ಜನರ ನಡುವೆ ಇದ್ದು, ಬೆಳೆದು ಬಂದವನು. ಹಾಗಾಗಿ ಸಮಸ್ಯೆಗಳ ಬಗ್ಗೆ ಅರಿವಿದೆ. ಹಾಗೆಯೇ ಸಮಸ್ಯೆಗಳನ್ನು ಪರಿಹರಿಸುವ ವಿಧಾನವನ್ನೂ ತಿಳಿದಿದ್ದೇನೆ.



***ಮಿತ್ರ:* ಗೆದ್ದರೆ ನಿಮ್ಮ ಮೊದಲ ಆದ್ಯತೆ ಯಾವುದಕ್ಕೆ?**

ಕವೀಶ್: ಎಲ್ಲರಿಗೂ ಮೂಲ ಸೌಕರ್ಯವನ್ನು ಸಮರ್ಪಕವಾಗಿ ಕಲ್ಪಿಸುವುದು. ಕಾರಣ ಜನರ ಬದುಕಿಗೆ ಕನಿಷ್ಠ ಸೌಲಭ್ಯಗಳನ್ನು ನಿರ್ಲಕ್ಷಿಸಿ ಕ್ಷೇತ್ರದ ಅಭಿವೃದ್ಧಿ ನಿರೀಕ್ಷಿಸಲಾಗದು. ಜೊತೆಗೆ ಉದ್ಯೋಗ, ಶಿಕ್ಷಣ, ಆರೋಗ್ಯ, ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತೇನೆ.

***ಮಿತ್ರ:* ಪ್ರಚಾರದ ವೇಳೆ ಮತದಾರರು ನಿಮ್ಮ ಮುಂದಿಡುತ್ತಿರುವ ಗಂಭೀರ ಸಮಸ್ಯೆ ಯಾವುದು?**

ಕವೀಶ್: ಪ್ರಚಾರದ ವೇಳೆ ಎಲ್ಲಾ ಕಡೆ ಮೂಲ ಸೌಕರ್ಯಗಳ ಕೊರತೆ ಬಗ್ಗೆಯೇ ಹೇಳಿಕೊಂಡಿದ್ದಾರೆ. ಯುಜಿಡಿ ವ್ಯವಸ್ಥೆ ಸರಿಯಾಗಿಲ್ಲ, ಸಮರ್ಪಕ ರೀತಿಯಲ್ಲಿ ಕಸ ವಿಲೇವಾರಿ ಹಾಗೂ ಸಂಸ್ಕರಣೆ ಆಗುತ್ತಿಲ್ಲ. ಕೊಳಚೆ ನೀರು ಕೆರೆಗಳಿಗೆ ಸೇರಿ ಕಲುಷಿತವಾಗುತ್ತಿವೆ. ಕುಡಿಯುವ ನೀರಿನ ಸಮಸ್ಯೆ ವಿಪರೀತವಾಗಿದೆ. ಸ್ವಚ್ಛತೆ ಇಲ್ಲದೆ ರೋಗರುಜಿನಗಳ ಕಾಟ ಬಹುತೇಕ ಕಡೆ ಬೋರ್‌ವೆಲ್ ಮೂಲಕ ನೀರು ಸರಬರಾಜು ಮಾಡುತ್ತಿದ್ದು ಅದೂ ಮಣ್ಣು ಮಿಶ್ರಿತವಾಗಿದೆ. ಸರ್ಕಾರಿ ಶಾಲೆ–ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣ ಸಿಗುವಂತಾಗಬೇಕು. ಹೀಗೆ ಹತ್ತಾರು ಸಮಸ್ಯೆ ಗಳನ್ನು ಮುಂದಿಟ್ಟಿದ್ದು, ಇವೆಲ್ಲವೂ ಗಂಭೀರ ಸಮಸ್ಯೆಗಳೆಂದೇ ಪರಿಗಣಿಸಬೇಕಾಗುತ್ತದೆ.

***ಮಿತ್ರ:* ಪ್ರಚಾರದ ವೇಳೆ ಮತದಾರರಿಗೆ ನೀವು ಯಾವ ಯಾವ ಭರವಸೆ ನೀಡಲು ಬಯಸುತ್ತೀರಾ?**

ಕವೀಶ್: ಕ್ಷೇತ್ರದ ಜನ ಅಧಿಕ ಮತಗಳೊಂದಿಗೆ ಗೆಲ್ಲಿಸುವರೆಂಬ ವಿಶ್ವಾಸವಿದೆ. ಕುಡಿಯುವ ನೀರು, ಯುಜಿಡಿ, ರಸ್ತೆ ಇನ್ನಿತರ ಮೂಲ ಸೌಲಭ್ಯವನ್ನು ಸಮರ್ಪಕವಾಗಿ ಕಲ್ಪಿಸುವುದು. ಶಾಲಾ–ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣ ಸಿಗುವಂತೆ ಕ್ರಮ ವಹಿಸುವುದು. ಈ ನಿಟ್ಟಿನಲ್ಲಿ ಹೆಚ್ಚು ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಬೇಕು. ಆಧುನಿಕ ಸೌಲಭ್ಯವುಳ್ಳ ಆಸ್ಪತ್ರೆಗಳ ನಿರ್ಮಾಣ ಹಾಗೂ ಉದ್ಯೋಗ ಸೃಷ್ಟಿ ನನ್ನ ಆದ್ಯತೆ ಎಂದು ಜನರಿಗೆ ತಿಳಿಸಿದ್ದೇನೆ. ಯುವಕರಿಗೆ ಉದ್ಯೋಗ ಸೃಷ್ಟಿ ಮಾಡುವುದರಲ್ಲಿಯೂ ಜನಪ್ರತಿನಿಧಿಯ ಜವಾಬ್ದಾರಿ ಮುಖ್ಯವಾಗಿರುತ್ತದೆ. ಯುವಕರನ್ನು ಆರ್ಥಿಕ ಹಾಗೂ ಸಾಮಾಜಿಕವಾಗಿ ಬೆಳೆಸಬೇಕು ಎನ್ನುವ ಕಾಳಜಿ ಇದೆ. ಈ ನಿಟ್ಟಿನಲ್ಲಿ ಅವರಿಗೆ ಅಗತ್ಯವಾದ ಕೌಶಲ್ಯ ತರಬೇತಿಯನ್ನೂ ಒದಗಿಸಲಾಗುವುದು. ಅಭಿವೃದ್ಧಿ ಜೊತೆಗೆ ಶಿಕ್ಷಣ, ಆರೋಗ್ಯ, ಉದ್ಯೋಗ ಹಾಗೂ ಪರಿಸರ ಸಂರಕ್ಷಣೆ ದೃಷ್ಟಿಯಿಂದ ಸದಾ ನಿಮ್ಮೊಂದಿಗಿದ್ದು ಕೆಲಸ ಮಾಡುವುದಾಗಿ ಹೇಳಿದ್ದೇನೆ.

***ಮಿತ್ರ:* ಯುವ ಮತದಾರರ ಸೆಳೆಯಲು ಯಾವ ಕಾರ್ಯತಂತ್ರ ಅನುಸರಿಸುತ್ತಿದ್ದೀರಾ?**

ಕವೀಶ್: ನಾನು ನಿಮ್ಮಂತೆ ಒಬ್ಬ ಯುವಕ. ನಾವೆಲ್ಲಾ ಪ್ರಾಮಾಣಿಕ ಮಾರ್ಗದಲ್ಲಿ ಬೆಳೆಯುವ ಮೂಲಕ ಆದರ್ಶ ಹಾಗೂ ಉತ್ತಮ ಸಮಾಜ ಕಟ್ಟಬೇಕು. ಮುಖ್ಯವಾಗಿ ಭ್ರಷ್ಟಾಚಾರ ನಿರ್ಮೂಲನೆಗೆ ಹೋರಾಡಬೇಕು. ಒಂದು ದಿನದ ಸಂಪಾದನೆಯಷ್ಟು ಹಣ ಪಡೆದು ಮತ ಮಾರುವುದು ಬೇಡ. ಜನಪ್ರತಿನಿಧಿಗಳಾಗಲೀ, ಸರ್ಕಾರಿ ಕಚೇರಿಗಳಲ್ಲಾಗಲೀ ಭ್ರಷ್ಟಾಚಾರ ಕಂಡಲ್ಲೆಲ್ಲಾ ವಿರೋಧಿಸಿ ಹೋರಾಟ ನಡೆಸೋಣ. ಎಲ್ಲರೂ ಸೇರಿ ಬದಲಾವಣೆ ತರಲೇಬೇಕು. ಪುರುಷರು ಹಾಗೂ ಮಹಿಳೆಯರಿಗೆ ಸಮಾನ ಅವಕಾಶಗಳು ದೊರಕಬೇಕು. ಉದ್ಯೋಗ ಸೃಷ್ಟಿಯಾಗಬೇಕು. ಸ್ವಾವಲಂಬನೆಯ ಬದುಕು ಕಟ್ಟಿಕೊಳ್ಳುವ ವಾತಾವರಣ ಸೃಷ್ಟಿಯಾಗಬೇಕು. ಇದಕ್ಕಾಗಿ ಎಲ್ಲರೂ ಕೈಜೋಡಿಸಬೇಕೆಂದು ಮನವಿ ಮಾಡಿದ್ದೇನೆ.



ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಜೆಕೆ ಟೈರ್ಸ್ ಪ್ರಧಾನ ಕಾರ್ಯದರ್ಶಿ ಎಸ್ ಲೋಕೇಶ್, ಚೌಡಪ್ಪ ಅವರ ಸಮ್ಮುಖದಲ್ಲಿ ಕಾರ್ಮಿಕ ಮುಖಂಡರುಗಳಾದ ದೀಪಕ್, ಷಣ್ಮುಗ, ಚಿಕ್ಕೇಗೌಡ, ಗಿರೀಶ್ ತಿವಾರಿ, ಸೋಮಣ್ಣ, ಮೋಹನ್ ಕುಮಾರ್ ಜಿ , ವಿಜಯನಗರ ಕಾರ್ಯಪ್ಪ, ಮಂಜುನಾಥ್ ,ರವಿ ಏನ್ ಪಿ, ಸ್ವಾಮಿ ಅಣ್ಣ, ಶ್ರೀಕಾಂತ್, ಚೆಲುವಣ್ಣ, ಮಹಾಂತೇಶ, ಅಶೋಕ್ ಕೆ ಎಂ. ಅವರು ಕಾಂಗ್ರೆಸ್ ಹಾಗೂ ಜೆಡಿಎಸ್ ತೊರೆದು ಬಿಜೆಪಿ ಸೇರ್ಪಡೆಯಾದರು.

ಅಂಬೇಡ್ಕರ್ ತತ್ವಾದರ್ಶಗಳನ್ನು ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು

ಮೈಸೂರು, ಮೇ 5(ಎಸ್‌ಪಿಎನ್)– ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ತತ್ವಾದರ್ಶಗಳನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು ಎಂದು ಬೌದ್ಧ ಧಮ್ಮ ಚಿಂತಕ ಅರವಿಂದ ಬೋದ್ ಅಭಿಪ್ರಾಯಪಟ್ಟರು.

ಮೈಸೂರು ಚಾಮರಾಜಪುರಂನ ವಿಶ್ವಮೈತ್ರಿ ಬುದ್ಧ ವಿಹಾರ ವತಿಯಿಂದ ವೈಶಾಖ ಬುದ್ಧ ಪೂರ್ಣಿಮಾ ಭಗವಾನ್ ಬುದ್ಧರ 2567ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು 1956ರ ಅ.14ರಂದು ಲಕ್ಷಾಂತರ ತಮ್ಮ ಅಭಿಮಾನಿಗಳೊಂದಿಗೆ ನಾಗಪುರದಲ್ಲಿ ಬೌದ್ಧಧರ್ಮ ಸ್ವೀಕರಿಸಿದರು. ಬೌದ್ಧಧರ್ಮದ ಪಂಚಶೀಲ ತತ್ವಗಳನ್ನು ಪೂರ್ಣ ಅಧ್ಯಯನ ನಡೆಸಿದ್ದರು. ಭಾರತದಲ್ಲಿ ಹಲವು ಸ್ಥಿತ್ಯಂತರಗಳಿಂದಾಗಿ ಬೌದ್ಧಧರ್ಮ ನಶಿಸುವ ಹಂತದಲ್ಲಿತ್ತು. ಆದರೆ, ಡಾ.ಬಿ.ಆರ್.ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸಿ, ಭಾರತದಲ್ಲಿ ಇದರ ಪುನರುಜ್ಜೀವನಕ್ಕೆ ಕಾರಣೀಭೂತರಾಗಿದ್ದರು ಎಂದರು.



ಶೋಷಿತ ಸಮುದಾಯದ ಏಳಿಗೆಗೆ ಸಂವಿಧಾನದಲ್ಲಿ ವಿಶೇಷ ಕಾನೂನು ರಚಿಸುವ ಮೂಲಕ ರಕ್ಷಣೆ ನೀಡಿದ್ದರು. ಜಗತ್ತಿನ ಇತರ ರಾಷ್ಟ್ರಗಳು ಇಂತಹ ಬೃಹತ್ ಸಂವಿಧಾನ ರಚಿಸುವಲ್ಲಿ ವಿಫಲವಾಗಿವೆ. ಭಾರತದಲ್ಲಿ ಪ್ರಜಾಪ್ರಭುತ್ವ ಯಶಸ್ವಿಗೆ ಡಾ.ಬಿ.ಆರ್.ಅಂಬೇಡ್ಕರ್ ರಚಿತ ಸಂವಿಧಾನವೇ ಮೂಲ ಕಾರಣ ಎಂದರು.

ವೇದಿಕೆ ಕಾರ್ಯಕ್ರಮದ ನಂತರ ಮಹಾಬೋಧಿ ಮೈತ್ರಿ ಮಂಡಲದಿಂದ ವಿಶ್ವ ಮೈತ್ರಿ ಬುದ್ಧ ವಿಹಾರದವರೆಗೆ ಭಗವಾನ್ ಬುದ್ಧರ ಭಾವಚಿತ್ರ ಮೆರವಣಿಗೆ ಮಾಡಲಾಯಿತು. ಈ ವೇಳೆ ವಿಶ್ವ ಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಭಂತೇಜಿ, ಬೌದ್ಧ ಚಿಂತಕ ವಿ.ಪುರುಷೋತ್ತಮ್ ಉಪಸ್ಥಿತರಿದ್ದರು.

ಡಿಸ್ಸೈಫರ್ ಹೆಲ್ತ್ ರೆಕಾರ್ಡ್ಸ್ ಸಂಸ್ಥೆಯಿಂದ ಗಯಾನಾದಲ್ಲಿ ಹೆಲ್ತ್ ಕೇರ್ ಕಾಲ್ ಸೆಂಟರ್ ಆರಂಭ: 300 ಮಂದಿಗೆ ಉದ್ಯೋಗ ಸೃಷ್ಟಿ



ಮೈಸೂರು, ಮೇ 4– ಭಾರತ ಮತ್ತು ಗಯಾನಾ ನಡುವಿನ ದ್ವಿಪಕ್ಷೀಯ ಸಹಕಾರ ಸಂಬಂಧ ಮತ್ತಷ್ಟು ಹೆಚ್ಚಾಗುವ ನಿಟ್ಟಿನಲ್ಲಿ ಮಹತ್ವದ ಒಡಂಬಡಿಕೆಗೆ ಸಹಿ ಹಾಕಲಾಗಿದೆ. ಡಿಸ್ಸೈಫರ್ ಹೆಲ್ತ್ ರೆಕಾರ್ಡ್ಸ್ ಸಂಸ್ಥೆಯು ಗಯಾನಾದೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಗಯಾನಾದಲ್ಲಿ ಹೆಲ್ತ್ ಕೇರ್ ಕಾಲ್ ಸೆಂಟರ್ ಆರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಗಯಾನಾ ಸರ್ಕಾರದ ಬಂಡವಾಳ ಇಲಾಖೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಪೀಟರ್ ರಾಮ್ ಸ್ವರೂಪ್, ಡಿಸ್ಸೈಫರ್ ಹೆಲ್ತ್ ರೆಕಾರ್ಡ್ಸ್ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ವಿನಾಯಕ್ ಶಂಕರ್ ಈ ಒಡಂಬಡಿಕೆಗೆ ಸಹಿಹಾಕಿದ್ದು, ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಹಕಾರ ಸಂಬಂಧಕ್ಕೆ ಮತ್ತಷ್ಟು ಉತ್ತೇಜನ ನೀಡಲಿದೆ. ಈ ಒಪ್ಪಂದದಂತೆ ಈ ವರ್ಷದಲ್ಲಿ ಕಾಲ್ ಸೆಂಟರ್ ಆರಂಭವಾಗಲಿದೆ. ಡಿಸ್ಸೈಫರ್ ಹೆಲ್ತ್ ರೆಕಾರ್ಡ್ಸ್ ಸಂಸ್ಥೆಯು ಸ್ಥಳ ಪರಿಶೀಲನೆ ನಡೆಸಲಿದೆ.

ಪೂರ್ಣ ಪ್ರಮಾಣದಲ್ಲಿ ಕಾಲ್ ಸೆಂಟರ್ ಆರಂಭ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. 300 ಮಂದಿಗೆ ಉದ್ಯೋಗ ದೊರೆಯಲಿದೆ ಎಂದು ಗಯಾನಾ ಬಂಡವಾಳ ಹೂಡಿಕೆ ಇಲಾಖೆಯ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ಒಪ್ಪಂದ ಮೂಲಕ ದೇಶದಲ್ಲಿ ಉದ್ಯೋಗ ಸೃಷ್ಟಿಗೆ ಸರ್ಕಾರ–ಕ್ಕೆ ಇರುವ ಬದ್ಧತೆಗೆ ಸಾಕ್ಷಿಯಾಗಿದೆ. ಇದರಿಂದ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಲಿವೆ. ಇದರಿಂದ ದೇಶದ ಪ್ರಗತಿಗೆ ಪೂರಕವಾಗಲಿದೆ ಎಂದು ಡಾ. ಪೀಟರ್ ರಾಮ್ ಸ್ವರೂಪ್ ಸ್ಪಷ್ಟಪಡಿಸಿದ್ದಾರೆ. ಅಧ್ಯಕ್ಷ ಡಾ. ಇರ್ಫಾನ್ ಅಲಿ ಬಿಪಿಎ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುತ್ತಿದ್ದರು, ಅಮೆರಿಕದ ಕಾಲಾವಧಿಗೆ ಹೆಚ್ಚು ಒಗ್ಗಿಕೊಂಡಿರುವ ಗಯಾನಾ ಯುವ ಸಮೂಹಕ್ಕೆ ಉದ್ಯೋಗ ಸೃಷ್ಟಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

2025ರ ವೇಳೆಗೆ 15 ಸಾವಿರ ಉದ್ಯೋಗ ಸೃಷ್ಟಿಯಾಗುವ ನಿರೀ–ಕ್ಷೆ ಇದೆ ಎಂದು ಡಾ. ಪೀಟರ್ ರಾಮ್ ಸ್ವರೂಪ್ ವಿವರಿಸಿದ್ದಾರೆ. ಎಸ್ಸಿ ಕ್ಯೂಬೊ, ಬರ್ಬಿಸ್, ಎನ್ ಮೋ, ಟಷನ್‌ನಲ್ಲಿ ಕಾಲ್ ಸೆಂಟರ್‌ಗಳನ್ನು ಆರಂಭಿಸಲಾಗುತ್ತಿದೆ. ಲಿಂಡೆನ್‌ನಲ್ಲಿಯೂ ಆರಂಭವಾಗಲಿದೆ. ಕಳೆದ ಬಾರಿ ಸರ್ಕಾರ ರದ್ದು ಮಾಡಿದ್ದ ಸ್ಥಳದಲ್ಲಿಯೇ ಯುವಕರಿಗೆ ನಾವು ಉದ್ಯೋಗ ಕಲ್ಪಿಸುತ್ತಿದ್ದೇವೆ ಎಂದು ಡಾ. ಪೀಟರ್ ರಾಮ್ ಸ್ವರೂಪ್ ವಿವರಿಸಿದ್ದಾರೆ. ಬೆಂಗಳೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ ಡಿಸ್ಸೈಫರ್ ಹೆಲ್ತ್ ರೆಕಾರ್ಡ್ಸ್ ಸಂಸ್ಥೆಯು ಅಮೆರಿಕದಲ್ಲಿರುವ ವೈದ್ಯರಿಗೆ ಬಾಹ್ಯವಾಗಿ ತನ್ನ ಸೇವೆಯನ್ನು ನೀಡುತ್ತಿದೆ.

ಡಿಸ್ಸೈಫರ್ ಹೆಲ್ತ್ ರೆಕಾರ್ಡ್ಸ್ ಸಂಸ್ಥೆಯು ಮೈಸೂರು ಮತ್ತು ಕೊಯಮತ್ತೂರಿನಲ್ಲಿಯೂ ಕಚೇರಿಗಳನ್ನು ಹೊಂದಿದೆ. 2000 ಇಸವಿಯಲ್ಲಿ ಆರಂಭವಾದ ಡಿಸ್ಸೈಫರ್ ಹೆಲ್ತ್ ರೆಕಾರ್ಡ್ಸ್ ಸಂಸ್ಥೆಯು ಮೆಡಿಕಲ್ ಟ್ರಾನ್ಸ್ ಸ್ಕ್ರಿಪ್ಷನ್, ಆದಾಯ ನಿರ್ವಹಣೆ ಸೇವೆಯನ್ನು ಒದಗಿಸುತ್ತಿದೆ. ಭಾರತದಲ್ಲಿ ಈ ಸಂಸ್ಥೆಯು ನಾಲ್ಕು ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಒಟ್ಟು 750ಕ್ಕೂ ಹೆಚ್ಚು ಸಿಬ್ಬಂದಿ ಇದ್ದಾರೆ. ಅತ್ಯಾಧುನಿಕ ಗುಣಮಟ್ಟದ ಸೇವೆ ಹಾಗೂ ಆರೋಗ್ಯ ವಿಮಾ ಪೋರ್ಟಬಿಲಿಟಿ, ಅಕೌಂಟಬಿಲಿಟಿ ಸೇವೆ ನೀಡುವಲ್ಲಿ ಮುಂಚೂಣಿಯಲ್ಲಿದೆ.

PROMOTIONAL FEATURE



ನಕ್ಕರೆ ಅದೇ ಸ್ವರ್ಗ

ಕಂಡಕ್ಟರ್ : ಏನಯ್ಯಾ, ಹನ್ನೆರಡು ವರ್ಷ ಆಗಿರುವವರಿಗೆ ಅರ್ಧ ಚಾರ್ಜು. ನಿನ್ನ ವಯಸ್ಸು ಎಷ್ಟು?
ಆತ : ಹನ್ನೊಂದು ವರ್ಷ
ಕಂಡಕ್ಟರ್ : ಹಾಗಾದರೆ ಹನ್ನೆರಡು ಆಗೋದು ಯಾವಾಗ?
ಆತ : ಬಸ್ ಇಳಿದ ಮೇಲೆ!

ಮೈಸೂರು ಮಿತ್ರ
ಶನಿವಾರ, 6 ಮೇ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........
ಜೀವನದ ಆರಂಭದಲ್ಲಿಯೇ ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳುವವನು ಧನ್ಯ – ಎಮರ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಿರಿಯ ಮಗನಾಗ ಬೇಡ, ಕಿರಿ ಸೊಸೆಯಾಗಬೇಡ

ನಿಮ್ಮ ಪತ್ರಗಳು

ಇಎಸ್‌ಐ ಆಸ್ಪತ್ರೆಯ ಅವ್ಯವಸ್ಥೆ ಸರಿಪಡಿಸಿ

ಮಾನ್ಯರೆ,



ಮೈಸೂರಿನಲ್ಲಿರುವ ಕಾರ್ಮಿಕರ ವಿಮಾ ಆಸ್ಪತ್ರೆಯ ಅವ್ಯವಸ್ಥೆಯನ್ನು ಮೊದಲು ಸರಿಪಡಿಸಿ ಎಂದು ಸಂಬಂಧಿಸಿದ ಅಧಿಕಾರಿಗಳಲ್ಲಿ ವಿನಂತಿ ಮಾಡಿಕೊಳ್ಳುವ ಸ್ಥಿತಿ ಬಂದೊದಗಿದೆ. ಡಿಸ್ಪೆನ್ಸರಿಗಳ ಕಥೆಯೋ ದೇವರಿಗೆ ಪ್ರೀತಿ. ರೋಗಿಗಳನ್ನು ಅನುಕಂಪದಿಂದ ನೋಡುವುದರ ಬದಲಿಗೆ ಶತ್ರುಗಳನ್ನು ಕಂಡಂತೆ ರೇಗುತ್ತಾರೆ. ಸಮಾಧಾನ ಎಂಬುದೇ ಗೊತ್ತಿಲ್ಲ. ಅಲ್ಲಿರುವ ಸಿಬ್ಬಂದಿ ಸರಿಯಾದ ಸಮಯಕ್ಕೆ ಬರದೇ ರೋಗಿಗಳನ್ನು ಅವರ ಕಡೆಯವರನ್ನು ಅನ್ಯಥಾ ಕಾಯಿಸುತ್ತಾರೆ. ತಡವಾಗಿ ಬಂದಂತಹ ಆ ಶುಶ್ರೂಷಕಿಯನ್ನು ಅಲ್ಲಿರುವ ವೈದ್ಯರು ಕೇಳುವುದೇ ಇಲ್ಲ. ನಿತ್ಯವೂ ಇದೇ ಕಥೆ ಅಂತ ಅಲ್ಲಿರುವ ಕೆಲವರು ಗೊಣಗುತ್ತಾರೆ. ಜೋರುದನಿಯಲ್ಲಿ ಕೇಳಿದರೆ ಇಲ್ಲದ ಕಾನೂನು ಜಾರಿಗೆ ತರುತ್ತಾರೆ. ಬಾಯಿಗೆ ಬಂದಂತೆ ಮಾತನಾಡಿ ಅವರ ಬಾಯಿ ಮುಚ್ಚಿಸುತ್ತಾರೆ. ಡಿಸ್ಪೆನ್ಸರಿಯು ಪ್ರತಿದಿನ ಬೆಳಿಗ್ಗೆ 9ರಿಂದ 1 ಗಂಟೆಯವರೆಗೆ ಹಾಗೂ ಮಧ್ಯಾಹ್ನ 4.30ರಿಂದ 8ಗಂಟೆಯವರೆಗೆ ಕಾರ್ಯನಿರ್ವಹಿಸುತ್ತದೆ. ಇದು ರೋಗಿಗಳನ್ನು ನೋಡುವುದಕ್ಕೆ, ಮುಖ್ಯ ಆಸ್ಪತ್ರೆಗೆ ಚೀಟಿ ಬರೆದು ಕೊಡುವುದಕ್ಕೆ ಇರುವ ಅವಧಿ. ಆದರೆ ಆ ಅವಧಿಯಲ್ಲಿ ಅವರ ಜೋರು ಗದರುವಿಕೆ ವೈದ್ಯರಿಗೆ ಕೇಳದು. ಇಷ್ಟವಾದ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಇನ್ನು ಮುಖ್ಯ ಇಎಸ್‌ಐಗೆ ಹೋದರೆ, ಬೆಂಕಿಯಿಂದ ಬಾಣಲೆಗೆ ಎಂಬ ಸ್ಥಿತಿ. ಹಣದ ಬೇಡಿಕೆಯನ್ನು ಪರೋಕ್ಷವಾಗಿ ಇಡುತ್ತಾರೆ. ಮೇನ್ ಇಎಸ್‌ಐಯಲ್ಲಿ ಮರು ವೈದ್ಯರು ನಿಮಗೆ ಸ್ಕ್ಯಾನಿಂಗ್ ಮಾಡುವ ಉಪಕರಣಗಳು ನಮ್ಮಲ್ಲಿ ಲಭ್ಯವಿಲ್ಲ. ಇದನ್ನು ಹೊರಗಡೆ ಲ್ಯಾಬೋರೇಟರಿಗೆ ಬರೆದುಕೊಡುವೆ. ಇದರ ಅರ್ಧ ಹಣವನ್ನು ನೀವು ಕ್ಲೈಮ್ ಮಾಡಿಕೊಳ್ಳಬಹುದು ಅಂತ ನೇರವಾಗಿ ವೈದ್ಯರೇ ಹೇಳುತ್ತಾರೆ. ಇದನ್ನು ಪ್ರಶ್ನೆ ಮಾಡಲು ಹೋದರೆ ಇಲ್ಲದ ಕಾನೂನು ಮಾತನಾಡಿ ಹೊರದಬ್ಬುತ್ತಾರೆ. ಅಂತಹವರನ್ನು ಮುಂದಿನ ಬಾರಿ ನೋಡದೇ ನಿರ್ಲಕ್ಷ್ಯ ಮಾಡುತ್ತಾರೆ. ಇಲ್ಲಿರುವ ವೈದ್ಯರು ತಮ್ಮ ವೈಯಕ್ತಿಕ ಕ್ಲಿನಿಕ್‌ಗೆ ಬರಲು ಹೇಳಿ ಅಲ್ಲಿ ಆಸ್ಪತ್ರೆಗಿಂತ ಆರಾಮಾಗಿ ಮಾತನಾಡುತ್ತಾರೆ. ಇದರಿಂದ ಸಾಮಾನ್ಯ ಕಾರ್ಮಿಕರ ಪಾಡೇನು ನೀವೇ ಊಹಿಸಿಕೊಳ್ಳಿ.

ಆನಂತರ ಮತ್ತೊಂದು ವಿಷಯ, ಇಂತಹ ವೈದ್ಯರು ಬರೆದುಕೊಡುವ ಕೆಲವೊಂದು ಮಾತ್ರೆಗಳು, ಸಿರಪ್ ಗಳು ಅಲ್ಲಿರುವ ಮೆಡಿಕಲ್‌ನಲ್ಲಿ ಸಿಗುವುದಿಲ್ಲ. ನೋ ಸ್ಟಾಕ್ ಅಂತ ಮುದ್ರೆಯೊತ್ತಿ ಕಳಿಸಿಬಿಡುತ್ತಾರೆ. ಇನ್ನು ರಕ್ತ, ಮೂತ್ರ ಪರೀಕ್ಷೆ ಮಾಡುವ ವಿಭಾಗದಲ್ಲಂತೂ ನೂಕುನುಗ್ಗಲು. ಅಲ್ಲಿ ಮಾತನಾಡುವ ದಾದಿಯರ, ಡಿ ಗ್ರೂಪ್ ನೌಕರರ ಮಾತನ್ನೊಮ್ಮೆ ಕೇಳಿ ಪುನೀತರಾಗಬೇಕಿದೆ. ದನಗಳನ್ನು ಅದುರಿಸುವಂತೆ ಕರೆಯುತ್ತಾರೆ. ಏನೇ ಅಂದರೂ ಸುಮ್ಮನಿರಬೇಕಾದ ಅನಿವಾರ್ಯತೆ.

ಕಷ್ಟಪಟ್ಟು ಕೆಲಸ ಮಾಡಿದ ಹಣದ ವಿನಿಯೋಗ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದೆ ಆದರೆ ಅದನ್ನು ಅನುಭವಿಸಿ ಚಿಕಿತ್ಸೆ ಕೊಡುವ ಪರಿಸರ ಸಹಕಾರ ಮತ್ತು ಅನುಕಂಪದಿಂದ ಕೂಡಿರಬೇಕು. ಇಲ್ಲಿ ಹಾಗಾಗಿಲ್ಲ.

ಈ ಬಗ್ಗೆ ಯಾರೂ ಗಮನಿಸಿಲ್ಲವೇ, ಗಮನಿಸಿಯೂ ಏನೂ ಕ್ರಮ ವಹಿಸದೇ ಸುಮ್ಮನಿರುವರೇ, ಒಂದೂ ತಿಳಿಯದು. ಇನ್ನೂ ಮುಂದಾದರೂ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಮುಂದಾಗಬೇಕು ಎಂಬುದು ನೊಂದ ರೋಗಿಗಳ ಅಳಲು.

–ಎ.ಎಸ್.ಗೋವಿಂದೇಗೌಡ, ಕನ್ನಡ ಉಪನ್ಯಾಸಕರು, ಅರೇನಹಳ್ಳಿ ಗ್ರಾಮ, ಪಿ.ಪಟ್ಟಣ ತಾ.

'ಮನೆಯಲ್ಲೇ ಮತದಾನ' ಗೌಪ್ಯತೆ ಹೇಗೆ?

ಮಾನ್ಯರೆ,

ರಾಜ್ಯದ ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ಅಂಗವಿಕಲರು ಮತ್ತು 80 ವರ್ಷ ದಾಟಿದ ವೃದ್ಧರಿಗಾಗಿ 'ಮನೆಯಲ್ಲೇ ಮತದಾನ' ಎಂಬ ಅಭಿಯಾನ ಪ್ರಾರಂಭ ಮಾಡಿದೆ. ಈ ನೂತನ ವ್ಯವಸ್ಥೆಗಾಗಿ ಚುನಾವಣಾ ಆಯೋಗವನ್ನು ಅಭಿನಂದಿಸಬೇಕು. ಆದರೆ ಇದು ಎಷ್ಟರ ಮಟ್ಟಿಗೆ ಮತದಾರರ ಗೌಪ್ಯತೆಯನ್ನು ಕಾಪಾಡುತ್ತದೆ. ಚುನಾವಣೆಗೆ ಹತ್ತು ದಿನಗಳ ಮೊದಲೇ ಬ್ಯಾಲೆಟ್ ಪೇಪರ್ ಕಳುಹಿಸುವ ಅವಶ್ಯಕತೆ ಇದೆಯಾ? ಇದರ ಬದಲು ಚುನಾವಣಾ ದಿನಾಂಕದಂದೇ ಇವರನ್ನು ಸರ್ಕಾರಿ ವಾಹನದಲ್ಲೇ ಹತ್ತಿರದ ಮತದಾನ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಮತದಾನ ಮಾಡಲು ಕಾಯದೇ ವಿಶೇಷ ವ್ಯವಸ್ಥೆ ಮಾಡಿ. ಮತದಾನ ಮಾಡಿದ ನಂತರ ಸರ್ಕಾರಿ ವಾಹನದಲ್ಲೇ ಮನೆಗೆ ಬಿಟ್ಟು ಬರುವ ವ್ಯವಸ್ಥೆ ಮಾಡಿ. ಇದರಿಂದ ಚುನಾವಣಾ ಆಯೋಗ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲುಬಹುದು.

–ಬೂಕನಕೆರೆ ವಿಜೇಂದ್ರ, ಮೈಸೂರು

ಬಸ್ ಸಂಚಾರ ಸುಗಮಗೊಳಿಸಿ

ಮಾನ್ಯರೆ,

ಚುನಾವಣೆಗೆ ಕೇವಲ ನಾಲ್ಕು ದಿನ ಬಾಕಿ ಇದೆ. ಸಾರ್ವಜನಿಕರು ಮತ ಚಲಾವಣೆ ಮಾಡಲು ಎದುರು ನೋಡುತ್ತಿರುತ್ತಾರೆ. ಆದರೆ ಹಲವಾರು ಕಾರಣಗಳಿಂದ ಕೆಲಸದ ನಿಮಿತ್ತ ಪರ ಊರಿನಲ್ಲಿ ನೆಲೆಸಿರುತ್ತಾರೆ. ಅವರು ಉತ್ಸಾಹದಿಂದ ತಮ್ಮ ಊರಿಗೆ ಮತ ಚಲಾವಣೆಗೆ ಬಂದರೆ ಸಾರಿಗೆ ಸಂಪರ್ಕದ ಕೊರತೆಯಿಂದ ನಿರಾಸೆ ಅನುಭವಿಸುತ್ತಾರೆ. ಬಸ್ ಅನ್ನು ಚುನಾವಣೆಗೆ ಸಂಬಂಧ ಪಟ್ಟಂತೆ ಉಪಯೋಗಕ್ಕೆ ಬಳಸುತ್ತಾರೆ. ಇದರಿಂದ ಸಾರ್ವಜನಿಕರಿಗೆ ಸಂಚಾರಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಸಾರ್ವಜನಿಕರ ಅನುಕೂಲಕ್ಕಾಗಿ ಮತ ಚಲಾವಣೆ ಮಾಡಲು ಎಲ್ಲೆಡೆ ಬಸ್ ಸೌಕರ್ಯ ಏರ್ಪಡಿಸಿ ಇದರಿಂದ ಮತದಾರರು ಮತ ಚಲಾವಣೆ ಮಾಡಿ ಸಂಭ್ರಮಿಸುತ್ತಾರೆ. ಜೊತೆಗೆ ಮತ ಚಲಾವಣೆಯ ಅಂಕಿ ಅಂಶ ಹೆಚ್ಚಾಗುತ್ತದೆ. ಮತ ಚಲಾವಣೆ ಮಾಡಿದ ತೃಪ್ತಿಯು ಇರುತ್ತದೆ. ಆದ್ದರಿಂದ ಮತ ಚಲಾವಣೆ ಮಾಡಲು ಎಲ್ಲೆಡೆ ಬಸ್ ಸೌಕರ್ಯ ಕಲ್ಪಿಸಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ದೇಶಭಕ್ತ ನರೇಂದ್ರ ಮೋದಿಯೆಂಬ ಅನರ್ಘ್ಯ ರತ್ನ

ಮಾನ್ಯರೆ,

ಏ. 30 ರಂದು ಬಿಜೆಪಿ ಚುನಾವಣಾ ಪ್ರಚಾರಕ್ಕಾಗಿ ಮೈಸೂರಿನಲ್ಲಿ ನಡೆದ ರೋಡ್ ಶೋ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಬೆಲೆ ಕಟ್ಟಲಾಗದ ನೆಚ್ಚಿನ ಪ್ರಧಾನ ಮಂತ್ರಿ ನರೇಂದ್ರ ಮೋದಿ ಎಂಬ ರತ್ನಕ್ಕೆ ವಜ್ರಕವಚದಂತಹ ರಕ್ಷಣೆ ನೀಡಿ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಿದ ಮೈಸೂರು ನಗರ ಪೊಲೀಸ್ ಆಯುಕ್ತರು ಹಾಗೂ ಎಲ್ಲಾ ಪೊಲೀಸ್ ಸಿಬ್ಬಂದಿಗೆ ಧನ್ಯವಾದಗಳು.

–ಎನ್.ಆರ್. ವಿಜಯಕುಮಾರ್, ಮೈಸೂರು.

ಚಾಮರಾಜ ಕ್ಷೇತ್ರದಲ್ಲಿ ಅಂತಹ ಗಂಭೀರ ಸಮಸ್ಯೆಯೇ ಇಲ್ಲ ಎಂದು ಜನ ಹೇಳುತ್ತಿದ್ದಾರೆ...

–ಎಲ್.ನಾಗೇಂದ್ರ, ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ



ಸಂದರ್ಶನ: ಮೋಹನ್ ಕಾಯಕ

> “ ಶೇ.100ಕ್ಕೆ 100ರಷ್ಟು ಮತ್ತೊಮ್ಮೆ ಗೆಲ್ಲುವ ವಿಶ್ವಾಸವಿದೆ. ಕ್ಷೇತ್ರದ ಜನ ನಾನು ಮಾಡಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮೆಚ್ಚಿಕೊಂಡಿದ್ದಾರೆ. ಮತಯಾಚನೆಗೆ ಹೋದ ಕಡೆಯೆಲ್ಲಾ ಅದ್ಭುತ ಪ್ರತಿಕ್ರಿಯೆ ದೊರೆಯುತ್ತಿದೆ. ಕ್ಷೇತ್ರದ ಜನರ ಮೂಲ ಸಮಸ್ಯೆಗಳಿಗೆ ಒತ್ತು ನೀಡಿದ್ದೆ. ರಸ್ತೆ, ಚರಂಡಿ, ಒಳಚರಂಡಿ ವ್ಯವಸ್ಥೆ ಬಹಳಷ್ಟು ಸುಧಾರಿಸಿದೆ.

ಸಾಂಸ್ಕೃತಿಕ ನಗರಿ ಮೈಸೂರಿನ ಪ್ರಧಾನ ಭಾಗವೇ ಆಗಿರುವ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಅಖಾಡ ರಂಗೇರಿದ್ದು, ಒಂದೇ ಗ್ರಾಮದವರ(ಕೆ.ಜಿ. ಕೊಪ್ಪಲು) ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದೆ. ಅದರಲ್ಲಿ ಕ್ಷೇತ್ರದ ಹಾಲಿ ಶಾಸಕ ಎಲ್. ನಾಗೇಂದ್ರ(59 ವರ್ಷ) ಪುನರಾಯ್ಕೆ ಬಯಸಿ ಬಿಜೆಪಿಯಿಂದ ಮತ್ತೆ ಸ್ಪರ್ಧಿಸಿದ್ದಾರೆ. ಟಿಕೆಟ್ ಘೋಷಣೆಯಾಗುತ್ತಿದ್ದಂತೆ ಮತ ಬೇಟೆಗೆ ಇನ್ನಿಲ್ಲದ ಕಾರ್ಯತಂತ್ರ ರೂಪಿಸಿದ್ದಾರೆ. ಪ್ರತಿನಿತ್ಯ ಒಂದಲ್ಲ ಒಂದು ಭಾಗದಲ್ಲಿ ಅಂತಿಮ ಹಂತದ ಮತಯಾಚನೆಯಲ್ಲಿ ತೊಡಗಿದ್ದಾರೆ. ಜಯನಗರ, 5ನೇ ಮುಖ್ಯರಸ್ತೆ, 1ನೇ ಕ್ರಾಸ್‌ನ ಲೇಟ್ ಲಿಂಗಪ್ಪ ಅವರ ಪುತ್ರರಾದ ನಾಗೇಂದ್ರ, ಹಾರ್ಡ್ವಿಕ್ ಶಾಲೆಯಲ್ಲಿ ಆರಂಭಿಕ ಶಿಕ್ಷಣ ಪಡೆದಿದ್ದು, ಮೈಸೂರು ನಗರಪಾಲಿಕೆ ಸದಸ್ಯರಾಗಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ಜನತೆಯ ಸೇವೆ, ಆಡಳಿತ ಅನುಭವ ಉಳ್ಳವರಾಗಿದ್ದಾರೆ. ಹಾಗೆಯೇ ಕಳೆದ 2018ರ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಜಯದೊಂದಿಗೆ ಮೊದಲ ಬಾರಿ ಶಾಸಕರಾಗಿ ಆಯ್ಕೆಯಾದ ಅವರು, ಈಗ ಪುನರಾಯ್ಕೆ ಬಯಸಿದ್ದಾರೆ. ತಮ್ಮ ಅಭಿವೃದ್ಧಿ ಕಾರ್ಯಕ್ರಮಗಳೇ ನನ್ನ ಕೈಹಿಡಿದಿವೆ. ನಾನು ಗೆದ್ದೇ ಗೆಲ್ಲುತ್ತೇನೆ ಎಂಬ ವಿಶ್ವಾಸದಲ್ಲಿ ಭರ್ಜರಿ ಮತ ಪ್ರಚಾರ ನಡೆಸಿದ್ದಾರೆ. ಈ ಮಧ್ಯೆ 'ಮೈಸೂರು ಮಿತ್ರ'ನಲ್ಲಿ ತಮ್ಮ ಐದು ವರ್ಷದ ಅಭಿವೃದ್ಧಿ ಕಾರ್ಯಗಳು, ಕ್ಷೇತ್ರದ ಪ್ರಗತಿ ಬಗ್ಗೆ ಮಾತನಾಡಿದ್ದಾರೆ.

ಮೈಸೂರು ಮಿತ್ರ: ಮತ್ತೊಮ್ಮೆ ಸ್ಪರ್ಧೆಗೆ ಅವಕಾಶ ಸಿಕ್ಕಿರುವ ಬಗ್ಗೆ ತಮ್ಮ ಅನಿಸಿಕೆ?

ಶಾಸಕ ಎಲ್.ನಾಗೇಂದ್ರ: ಮೊದಲಿಗೆ ನಾನೊಬ್ಬ ಬಿಜೆಪಿಯ ನಿಷ್ಠಾವಂತ, ಪ್ರಾಮಾಣಿಕ ಕಾರ್ಯಕರ್ತ. ಕಳೆದ ಐದು ವರ್ಷಗಳಲ್ಲಿ ಚಾಮರಾಜ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿ ಮೆಚ್ಚಿ ನಮ್ಮ ಪಕ್ಷದ ರಾಷ್ಟ್ರ, ರಾಜ್ಯ ನಾಯಕರು ಮತ್ತೊಂದು ಅವಕಾಶ ಮಾಡಿಕೊಟ್ಟಿದ್ದಾರೆ. ಅವರಿಗೆ ಚಿರಋಣಿ. ಅವರ ವಿಶ್ವಾಸಕ್ಕೆ ಚ್ಯುತಿ ಬಾರದಂತೆ ನಡೆದುಕೊಳ್ಳುತ್ತೇನೆ.

ಮಿತ್ರ ಈ ಬಾರಿ ಮತದಾರರ ಸ್ಪಂದನೆ ಹೇಗಿದೆ?

ಎಲ್.ನಾಗೇಂದ್ರ: ಶೇ.100ಕ್ಕೆ 100ರಷ್ಟು ಮತ್ತೊಮ್ಮೆ ಗೆಲ್ಲುವ ವಿಶ್ವಾಸವಿದೆ. ಕ್ಷೇತ್ರದ ಜನ ನಾನು ಮಾಡಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮೆಚ್ಚಿಕೊಂಡಿದ್ದಾರೆ. ಮತಯಾಚನೆಗೆ ಹೋದ ಕಡೆಯೆಲ್ಲಾ ಅದ್ಭುತ ಪ್ರತಿಕ್ರಿಯೆ ದೊರೆಯುತ್ತಿದೆ. ಕ್ಷೇತ್ರದ ಜನರ ಮೂಲ ಸಮಸ್ಯೆಗಳಿಗೆ ಒತ್ತು ನೀಡಿದ್ದೆ. ರಸ್ತೆ, ಚರಂಡಿ, ಒಳಚರಂಡಿ ವ್ಯವಸ್ಥೆ ಬಹಳಷ್ಟು ಸುಧಾರಿಸಿದೆ.

ಮಿತ್ರ: ಬಹುಶಃ ಈಗ, ನಿಮಗೆ ಕ್ಷೇತ್ರದಲ್ಲಿನ ನಾನಾ ಸಮಸ್ಯೆಗಳ ಅರಿವಾಗಿರಬೇಕಲ್ಲವೇ?

ಎಲ್.ನಾಗೇಂದ್ರ: ಒಂದು ಊರು ಎಂದ ಮೇಲೆ ನಾಳೆ ಬೆಳಗ್ಗೆ ಎದುರಾಗುವ ಸಮಸ್ಯೆಗಳು ಇವತ್ತೇ ತಿಳಿಯುವುದಿಲ್ಲ. ಬಡಾವಣೆಗಳಿಗೆ ನಿತ್ಯವೂ ಸರಿಯಾಗಿ ನೀರು ಪೂರೈಕೆ ಆಗಿಲ್ಲ ಎಂಬುದು ಗಂಭೀರ ಸಮಸ್ಯೆ. ಅದನ್ನು ಪಾಲಿಕೆ ನಿರ್ವಹಿಸಲಿದ್ದು, ಇದು ಬಿಟ್ಟರೆ ಕ್ಷೇತ್ರದಲ್ಲಿ ಅಂತಹ ಗಂಭೀರ ಸಮಸ್ಯೆಗಳು ಈಗ ಇಲ್ಲ. ನೂರಾರು ಜನರಿಗೆ ತೊಂದರೆಯಾಗುವಂತಹ ಯಾವುದಾದರೂ ಒಂದೇ ಒಂದು ಸಮಸ್ಯೆ ಉದಾಹರಣೆಯನ್ನು ಯಾರು ಕೊಡಲಾಗದಂತೆ ಕೆಲಸ ಮಾಡಿದ್ದೇನೆ.



ಮಿತ್ರ: ಮತ್ತೆ ಗೆದ್ದರೆ ನಿಮ್ಮ ಮೊದಲ ಆದ್ಯತೆ ಯಾವುದಕ್ಕೆ?

ಎಲ್.ನಾಗೇಂದ್ರ: ಆದ್ಯತೆ ಎನ್ನುವುದಕ್ಕಿಂತ ಸಾರ್ವಜನಿಕರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿದುಕೊಂಡು ಕೆಲಸ ಮಾಡುವುದು ಮುಖ್ಯವಾಗಿದೆ. ನನ್ನ ಆದ್ಯತೆಗಿಂತ ಸಾರ್ವಜನಿಕರ ಆದ್ಯತೆಯೇ ಮುಖ್ಯವೆಂದು ಭಾವಿಸಿ, ಕೆಲಸ ಮಾಡುತ್ತಾ ಬಂದಿದ್ದೇನೆ. ಅದೇ ರೀತಿಯಾಗಿ ಮುಂದಿನ ದಿನಗಳಲ್ಲಿಯೂ ಕಾರ್ಯನಿರ್ವಹಿಸಲಿದ್ದೇನೆ. ಹಾಗಾಗಿಯೇ ಜನ ನನ್ನ ಕಾರ್ಯವೈಖರಿ ಮೆಚ್ಚಿದ್ದಾರೆ.

ಮಿತ್ರ: ಈ ಬಾರಿ ಮತದಾರರಿಗೆ ಯಾವ ಭರವಸೆ ನೀಡಲು ಬಯಸುತ್ತೀರಾ?

ಎಲ್.ನಾಗೇಂದ್ರ: ಮೈಸೂರು ನಗರ ವೇಗವಾಗಿ ಬೆಳೆಯುತ್ತಿದ್ದು, ಉದ್ಯೋಗ ಸಮಸ್ಯೆ ದಿನೇ ದಿನೆ ಗಂಭೀರಗೊಳ್ಳುತ್ತಿದೆ. ಹಾಗಾಗಿ ಇದರತ್ತ ಹೆಚ್ಚಿನ ಗಮನಹರಿಸಲಿದ್ದೇನೆ. ಜೊತೆಗೆ ಪ್ರವಾಸೋದ್ಯಮ ಅಭಿವೃದ್ಧಿಯಾಗಬೇಕು. ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆ. ಆಶ್ರಯ ಮನೆಗಳ ನಿರ್ಮಾಣ, ಹಾಗೆಯೇ ಗುಡಿಸಲು ಮುಕ್ತ ಕ್ಷೇತ್ರವನ್ನಾಗಿಸುವ ಭರವಸೆ ನೀಡುತ್ತಿದ್ದೇನೆ. ಮೇಲಾಗಿ ಚಾಮರಾಜ ಕ್ಷೇತ್ರವನ್ನು ಉನ್ನತ ನಾಗರಿಕ ಸೌಲಭ್ಯವುಳ್ಳ ವಲಯವನ್ನಾಗಿ ಮಾಡಿಯೇ ತೀರುವ ಮಹದಾಸೆ ಇದೆ. ಜನತೆ ಅದಕ್ಕೆ ಅವಕಾಶ ಮಾಡಿ ಕೊಡುವ ಪೂರ್ಣ ವಿಶ್ವಾಸವೂ ಇದೆ.

ಮಿತ್ರ: ಈಗ ಮತದಾರರು ನಿಮ್ಮ ಮುಂದಿಡುತ್ತಿರುವ ಅತ್ಯಂತ ಗಂಭೀರ ಮೂಲ ಸಮಸ್ಯೆ ಏನು?

ಎಲ್.ನಾಗೇಂದ್ರ ಸದ್ಯಕ್ಕೆ ಕ್ಷೇತ್ರದಲ್ಲಿ ಯಾವುದೇ ಗಂಭೀರ ಸಮಸ್ಯೆಗಳಿಲ್ಲ ಎಂದು ಜನರೇ ಹೇಳುತ್ತಿದ್ದಾರೆ. ಆದರೆ ನನ್ನ ಗಮನಕ್ಕೆ ಬಂದಿರುವುದು ಕೆಲವು ಬಡಾವಣೆಗಳಲ್ಲಿ ನೀರಿನ ಪೂರೈಕೆ ಸರಿಯಾಗಿ ಆಗುತ್ತಿಲ್ಲ. ಮುಖ್ಯವಾಗಿ ಮೈಸೂರು ಸಾಂಸ್ಕೃತಿಕ ನಗರಿಯಾಗಿದ್ದು, ಯುಜಿಡಿ ಸಮಸ್ಯೆಗೆ ಶಾಶ್ವತ ಪರಿಹಾರ ಹುಡುಕುವ ಪ್ರಯತ್ನದಲ್ಲಿದ್ದೇನೆ. ಖಂಡಿತ ಇದಕ್ಕೆ ಶಾಶ್ವತ ಪರಿಹಾರವಿದೆ.


ಮಿತ್ರ: ಯುವ ಮತದಾರರ ಸೆಳೆಯಲು ನಿಮ್ಮ ಕಾರ್ಯತಂತ್ರವೇನು?

ಎಲ್.ನಾಗೇಂದ್ರ: ಯುವ ಮತದಾರರು ಪ್ರಧಾನಿ ಮೋದಿ ಅವರ ಪ್ರಭಾವಕ್ಕೊಳಗಾಗಿ ಪ್ರತಿನಿತ್ಯವೂ ಪಕ್ಷಕ್ಕೆ ಸೇರುತ್ತಿದ್ದಾರೆ. ಹಾಗೆಯೇ ಕ್ಷೇತ್ರದಲ್ಲಿಯೂ ಯುವಕರು ಭಾರೀ ಸಂಖ್ಯೆಯಲ್ಲಿ ಬಿಜೆಪಿ ಸೇರಿದ್ದಾರೆ. ನನ್ನ ಪರವಾಗಿ ಅಪಾರ ಸಂಖ್ಯೆಯ ಯುವ ಮತದಾರರಿದ್ದಾರೆ. ಜೊತೆಗೆ ಯುವಮೋರ್ಚಾ ವತಿಯಿಂದ ವಿವಿಧ ಯುವ ಸಂಘಟನೆಗಳನ್ನು ಭೇಟಿ ಮಾಡಿ ಪಕ್ಷಕ್ಕೆ ಕರೆತರುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ಬಿಜೆಪಿ ಯುವ ಜನಾಂಗಕ್ಕೆ ಒಂದು ರೀತಿ ಚಿಮ್ಮುವ ಹಲಗೆಯಂತಿದ್ದು, ಅವರಿಗಾಗಿ ಸ್ವತಃ ಪ್ರಧಾನಿಗಳೇ ಕಾರ್ಯಕ್ರಮ ರೂಪಿಸುತ್ತಿದ್ದಾರೆ.

ನನ್ನ ಸರ್ಕಾರ ತೆಗೆದವರೇ ಸಿದ್ದರಾಮಯ್ಯನವರು!

● ಮಾಜಿ ಸಿಎಂ ಕುಮಾರಸ್ವಾಮಿ ಮತ್ತೊಮ್ಮೆ ಸ್ಪಷ್ಟನೆ ● ಸುಮಲತಾರ ಗೆಲ್ಲಿಸಿ ತಪ್ಪು ಮಾಡಿದೆವು ಎಂಬ ಸಿದ್ದರಾಮಯ್ಯ ಹೇಳಿಕೆಯಿಂದ ಮಂಡ್ಯ, ತುಮಕೂರಲ್ಲಿ ಜೆಡಿಎಸ್ ಸೋಲಿನ ರಹಸ್ಯ ಬಟಾಬಯಲು

ಬೆಂಗಳೂರು, ಮೇ 5(ಕೆಎಂಶಿ)– ಕಳೆದ ಲೋಕಸಭೆ ಚುನಾವಣೆಯಲ್ಲಿ ಯಾವ ರೀತಿ ಮ್ಯಾಚ್ ಫಿಕ್ಸಿಂಗ್ ಆಗಿತ್ತು ಎನ್ನುವುದನ್ನು ಸ್ವತಃ ಸಿದ್ದರಾಮಯ್ಯ ಅವರೇ ಒಪ್ಪಿ ಕೊಂಡಿದ್ದಾರೆ. ಕೊನೇ ಪಕ್ಷ ಈಗಲಾದರೂ ಸತ್ಯ ಹೊರ ಬಂತಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಟಾಂಗ್ ಕೊಟ್ಟಿದ್ದಾರೆ.



ಸಂಸದೆ ಸುಮಲತಾ ಅವರನ್ನು ಗೆಲ್ಲಿಸಿ ತಪ್ಪು ಮಾಡಿದ್ದೇವೆ ಎಂದು ನಾಗಮಂಗಲದಲ್ಲಿ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ನೀಡಿದ್ದ ಹೇಳಿಕೆ ಬಗ್ಗೆ ಮಾಧ್ಯಮಗಳು ಕೇಳಿದ ಪ್ರಶ್ನೆಗೆ ಮೇಲಿನಂತೆ ಮಾಜಿ ಮುಖ್ಯ ಮಂತ್ರಿಗಳು ಉತ್ತರಿಸಿದರು. ಈಗ ಸತ್ಯ ಹೊರಗೆ ಬಂತಲ್ಲ, ಸತ್ಯವನ್ನು ಮುಚ್ಚಿಡಲು ಸಾಧ್ಯವಿಲ್ಲ. ಮಂಡ್ಯದಲ್ಲಿ, ತುಮಕೂರಿನಲ್ಲಿ ಏನೇನು ಮಾಡಿ ದರು ಅನ್ನುವುದು ಈಗ ಅವರ ಬಾಯಿಂದಲೇ ಸತ್ಯ ಹೊರಗೆ ಬಂದಿದೆ. ಈಗ ಅದೆಲ್ಲ ಮುಗಿದು ಹೋದ ಅಧ್ಯಾಯ. ನನ್ನ ಸರಕಾರ ತೆಗೆದವರೇ ಅವರು ಎಂದು ಹೇಳಿದರು. ಶಾಸಕರನ್ನೇ ನೋಡಿಲ್ಲ, ಭೇಟಿ ಮಾಡಿಲ್ಲ ಅಂತ ಹೇಳುತ್ತಾರೆ ಇವರು. 19,000 ಕೋಟಿ ಅನುದಾನ ವನ್ನು ಕಾಂಗ್ರೆಸ್ ಪಕ್ಷದ 78 ಜನ ಶಾಸಕರಿಗೆ ನೀಡಿದ್ದೇನೆ. ಶಾಸಕರನ್ನು ಭೇಟಿ ಮಾಡದೇ ಇಷ್ಟು ಅನುದಾನ ನೀಡಲು ಸಾಧ್ಯವೇ ಎಂದು ಅವರು ಪ್ರಶ್ನಿಸಿದರು.

ಕೃಷ್ಣ ಕಚೇರಿಯಲ್ಲಿ ದಿನಕ್ಕೆ 5 ಸಾವಿರ ಜನ ಸೇರಿರುತ್ತಿದ್ದರು. ಸಾವಿರಾರು ಜನರನ್ನು ಭೇಟಿಯಾದ ಮೇಲೆ ಶಾಸಕರನ್ನು ಕೂಡ ಭೇಟಿಯಾಗಿ 10–15 ಅಭಿವೃದ್ಧಿ ಸಭೆಗಳನ್ನು ನಡೆಸುತ್ತಿದ್ದೆ. ನಾನೇನು ನಿದ್ದೆ ಮಾಡುತ್ತಿದ್ದೀನಾ? ತಪ್ಪು ಮಾಡಿದವರು ಅವರು, ಈಗ ನನ್ನ ಮೇಲೆ ಅಪಾದನೆ ಮಾಡ್ತಾರೆ ಎಂದು ಖಾರವಾಗಿ ಪ್ರತಿಕ್ರಿಯಿಸಿದರು.

ಭಾವನಾತ್ಮಕ ವಿಷಯಕ್ಕೆ ಆದ್ಯತೆ: ಎರಡೂ ರಾಷ್ಟ್ರೀಯ ಪಕ್ಷಗಳು ಜನರ ಸಮಸ್ಯೆ ಚರ್ಚೆ ಮಾಡುವ ಅಂಶಗಳನ್ನು ಇಟ್ಟುಕೊಂಡಿಲ್ಲ. ಕೇವಲ ಭಾವನಾತ್ಮಕ ವಿಷಯಗಳನ್ನು ಕೆದಕಿ ಕೊಂಡು ರಾಜಕೀಯ ಮಾಡುತ್ತಿದ್ದಾರೆ. ಇದು ಬಹಳ ದಿನ ನಡೆಯುವುದಿಲ್ಲ ಎಂದ ಅವರು, ಸ್ವಲ್ಪ ದಿನ ವಿಷಕನ್ಯೆ, ವಿಷಸರ್ಪ ಇತ್ತು. ಈಗ ಭಜರಂಗಿ ವಿಚಾರ ತಗೊಂಡು ಹೋಗುತ್ತಿದ್ದಾರೆ. ವೋಟಿಂಗ್ ದಿನ ಈ ವಿಷಯ ಮುಗಿಯುತ್ತದೆ. ಇವರು ಜನರನ್ನು ಯಾಮಾರಿಸುತ್ತಿದ್ದಾರೆ ಎಂದು ಕುಮಾರಸ್ವಾಮಿ ಅವರು ಕಟುವಾಗಿ ಟೀಕಿಸಿದರು. ನಾನು ವಿಷಯಾಧಾರಿತ ವಾಗಿ ಚುನಾವಣೆ ಎದುರಿಸುತ್ತೇನೆ. ನನಗೆ ಆರ್ಥಿಕ ಶಕ್ತಿ ಇದ್ದಿದ್ದರೆ 130 ರಿಂದ 140 ಸೀಟು ಗೆಲ್ಲುತ್ತಿದ್ದೆ. ಹಣ ಇಲ್ಲದೇ ಹಿನ್ನೆಡೆ ಆಗಿದೆ. ಜನ ದುಡ್ಡಿಗೆ ಮರಳಾಗುವುದಿಲ್ಲ ಎಂಬ ವಿಶ್ವಾಸವಿದೆ. ಮುಖ್ಯಮಂತ್ರಿ ತವರು ಕ್ಷೇತ್ರ ಶಿಗ್ಗಾವಿ ಕ್ಷೇತ್ರದಲ್ಲೇ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಜನತಾದಳಕ್ಕೆ ಉತ್ತಮ ಸ್ಪಂದನೆ ಸಿಗುವ ವಿಶ್ವಾಸವಿದೆ ಎಂದು ಅವರು ಹೇಳಿದರು. ಸಮೀಕ್ಷೆಗಳು ಏನೇ ಇದ್ದರೂ ಅದು ಕೃತಕ ವಾದುದು. ಸಮೀಕ್ಷೆಗಳಲ್ಲಿ ಯಾವುದೇ ಸತ್ಯಾಂಶಗಳಿಲ್ಲ. ಎರಡೂ ಪಕ್ಷಗಳು ಯಾವುದೇ ಕಾರಣಕ್ಕೂ 100 ಸ್ಥಾನ ದಾಟೋಕೆ ಸಾಧ್ಯವಾಗಲ್ಲ ಎಂದರು.

ವಿದ್ಯಾರ್ಥಿಗಳಿಗೆ ತೊಂದರೆ: ಇದೇ 7ರಂದು ಚುನಾವಣೆಗಾಗಿ ಹಮ್ಮಿಕೊಂಡಿರುವ ರೋಡ್ ಶೋದಿಂದ ನೀಟ್ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಲಿದೆ. ರಾಜಕೀಯ ಪಕ್ಷಗಳು ಎಚ್ಚರಿಕೆ ವಹಿಸಬೇಕೆಂದು ಇದೇ ಸಂದರ್ಭದಲ್ಲಿ ಮನವಿ ಮಾಡಿದ್ದಾರೆ. ಈ ಕಾರಣಕ್ಕೆ ಪ್ರಧಾನಿಗಳು ರೋಡ್ ಶೋ ವೇಳಾಪಟ್ಟಿಯನ್ನು ಬದಲಿ ಸಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಭಾನುವಾರ ನೀಟ್ ಪರೀಕ್ಷೆಯ ನಡುವೆಯೂ ಪ್ರಧಾನಿ ಮೋದಿ ರೋಡ್ ಶೋ ವಿಚಾರದ ಬಗ್ಗೆ ವಿದ್ಯಾರ್ಥಿಗಳ ಪೋಷಕರು ಹಾಗೂ ಸಾರ್ವಜನಿಕರಿಂದ ಬರುತ್ತಿರುವ ಟೀಕೆಗಳ ಬಗ್ಗೆ ನನಗೆ ಮಾಹಿತಿ ಇದೆ. ರೋಡ್ ಶೋ ಗಳಿಂದ ಮಕ್ಕಳ ಭವಿಷ್ಯಕ್ಕೆ ಧಕ್ಕೆ ಉಂಟಾಗಬಾರದು ಎಂದರು.

ಬಿಜೆಪಿ ಪಕ್ಷಕ್ಕೆ ನಾಡಿನ ಜನರ ಸಮಸ್ಯೆಗಳಿಗಿಂತ ಅವರಿಗೆ ಅಧಿಕಾರ ಹಿಡಿಯೋದೆ ಮುಖ್ಯವಾಗಿದೆ. ಅಧಿಕಾರಕ್ಕೋಸ್ಕರ ಅವರು ಏನು ಬೇಕಾದರೂ ಮಾಡ್ತಾರೆ. ಜನಸಾಮಾನ್ಯರ ಬದುಕಿನ ಬಗ್ಗೆ ಅವರಿಗೆ ಯಾವುದೇ ಕಾಳಜಿ ಇಲ್ಲ. ಏನಾದರೂ ಮಾಡಿ ಅಧಿಕಾರ ಹಿಡಿಯಬೇಕು ಎಂಬ ಅಜೆಂಡಾ ಇಟ್ಟುಕೊಂಡಿದ್ದಾರೆ ಎಂದು ಕುಮಾರಸ್ವಾಮಿ ಅವರು ಕಟುವಾಗಿ ಟೀಕಿಸಿದರು.

ಕಿಚ್ಚ ಸುದೀಪ್‌ಗೆ ಬೆದರಿಕೆ ಪತ್ರ ಪ್ರಕರಣ: ಆರೋಪಿ ಅರೆಸ್ಟ್

ಬೆಂಗಳೂರು, ಮೇ 5– ಸ್ಯಾಂಡಲ್‌ವುಡ್ ಖ್ಯಾತ ನಟ ಕಿಚ್ಚ ಸುದೀಪ್‌ಗೆ ಬೆದರಿಕೆ ಪತ್ರ ಬರೆದಿದ್ದ ವ್ಯಕ್ತಿಯ ಬಂಧನವಾಗಿದೆ. ಹಲವು ದಿನಗಳಿಂದ ಆರೋಪಿಯ ಬೆನ್ನು ಹತ್ತಿದ್ದ ಪೊಲೀಸರು ಕೊನೆಗೂ ಅರೆಸ್ಟ್ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಬೆದರಿಕೆ ಪತ್ರದ ಹಿಂದೆ ಡೈರೆಕ್ಟರ್ ಒಬ್ಬರ ಕೈವಾಡವಿದೆ ಎಂದು ಹೇಳಲಾಗುತ್ತಿದೆ. ಸದ್ಯ ರಮೇಶ್ ಕಿಟ್ಟಿ ಎನ್ನುವವರನ್ನು ಪೊಲೀಸರು ಬಂಧಿಸಿದ್ದಾರೆ. ಸುದೀಪ್ ಅವರ ಆತ್ಮೀಯರಾಗಿದ್ದ ರಮೇಶ್ ಕಿಟ್ಟಿ, ಸುದೀಪ್ ಚಾರಿಟಬಲ್ ಟ್ರಸ್ಟ್ ನೋಡಿಕೊಳ್ಳುತ್ತಿದ್ದರು. ಸುದೀಪ್ ಮತ್ತು ರಮೇಶ್ ನಡುವಿನ ಹಣಕಾಸು ವೈಷಮ್ಯವೇ ಬೆದರಿಕೆ ಪತ್ರಕ್ಕೆ ಕಾರಣವೆಂದು ಹೇಳಲಾಗುತ್ತಿದೆ.



ಹಣಕಾಸಿನ ವೈಷಮ್ಯವೇ ಬೆದರಿಕೆ ಪತ್ರಕ್ಕೆ ಕಾರಣವೆಂದು ಸ್ವತಃ ರಮೇಶ್ ಕಿಟ್ಟಿನೇ ಒಪ್ಪಿಕೊಂಡಿದ್ದಾನೆಂದು ಹೇಳಲಾಗುತ್ತಿದೆ. ಅಲ್ಲದೇ, ಈ ಪ್ರಕರಣದ ಹಿಂದೆ ಇನ್ನೂ ಹಲವರು ಇದ್ದಾರೆಂದು ಶಂಕಿಸಲಾಗುತ್ತಿದೆ. ಬೆದರಿಕೆ ಪತ್ರದ ಪ್ರಕರಣದ ಹಿಂದೆ ಯಾರಿದ್ದಾರೆ ಎಂಬುದು ನನಗೆ ಗೊತ್ತಿದೆ ಎಂದು ಮೊನ್ನೆಯಷ್ಟೇ ಸುದೀಪ್ ಹೇಳಿದ್ದರು. ಸಿನಿಮಾ ರಂಗದವರೇ ಈ ಪ್ರಕರಣದಲ್ಲಿ ಭಾಗಿಯಾಗಿದ್ದು, ಕಾನೂನು ಮೂಲಕವೇ ಅವರಿಗೆ ಉತ್ತರ ಕೊಡುತ್ತೇನೆ ಎಂದೂ ಹೇಳಿಕೊಂಡಿದ್ದರು. ಇದೀಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಿಟ್ಟಿ ಬಂಧನವಾಗಿದೆ.

ಡೈಮಂಡ್ ಲೀಗ್: ನೀರಜ್ ಚೋಪ್ರಾಗೆ ಚಿನ್ನ

ದೋಹಾ, ಮೇ 5– ದೋಹಾದಲ್ಲಿ ನಡೆಯುತ್ತಿರುವ ಡೈಮಂಡ್ ಲೀಗ್‌ನಲ್ಲಿ ಭಾರತದ ಜಾವೆಲಿನ್ ಥ್ರೋ ಪಟು ನೀರಜ್ ಚೋಪ್ರಾ ಚಿನ್ನದ ಪದಕ ಗೆಲ್ಲುವ ಮೂಲಕ ಸಾಧನೆ ಮಾಡಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಪುರುಷರ ಜಾವೆಲಿನ್ ಎಸೆತದಲ್ಲಿ ಚಿನ್ನ ಗೆದ್ದ ಏಷ್ಯಾದ ಮೊದಲ ಅಥ್ಲೀಟ್ ಎನಿಸಿರುವ ನೀರಜ್ ಚೋಪ್ರಾ ಅವರು ಡೈಮಂಡ್ ಲೀಗ್‌ನಲ್ಲಿ 88.67 ಮೀಟರ್ ಜಾವೆಲಿನ್ ಎಸೆಯುವ ಮೂಲಕ ಚಿನ್ನದ ಪದಕ ಗೆದ್ದಿದ್ದಾರೆ. ವಿಶ್ವ ಚಾಂಪಿಯನ್ ಆಂಡರ್‌ಸನ್ ಪೀಟರ್ಸ್ ಅವರು 85.88 ಮೀಟರ್ ಜಾವೆಲಿನ್ ಎಸೆದು ದ್ವಿತೀಯ, 85.51 ಮೀಟರ್ ಎಸೆದು ಜಾಕುಬ್ ವಾಡ್ಲೆಚ್ ತೃತಿಯ ಸ್ಥಾನಕ್ಕೆ ತೃಪ್ತಿಪಟ್ಟಿದ್ದಾರೆ. ಚಿನ್ನದ ಪದಕ ಗೆದ್ದ ನೀರಜ್ ಚೋಪ್ರಾಗೆ ಕೇಂದ್ರ ಸಚಿವ ಕಿರಣ್ ರಿಜಿಜು ಅಭಿನಂಧನೆ ಸಲ್ಲಿಸಿದ್ದಾರೆ.



ಹನಿಟ್ರ್ಯಾಪ್: ಪಾಕ್‌ಗೆ ರಹಸ್ಯ ಮಾಹಿತಿ ನೀಡಿದ ಡಿಆರ್‌ಡಿಒ ವಿಜ್ಞಾನಿ ಬಂಧನ

ಪುಣೆ, ಮೇ 5– ಹನಿಟ್ರ್ಯಾಪ್ ಒಳಗಾಗಿ ಪಾಕಿಸ್ತಾನಿ ಏಜೆಂಟರಿಗೆ ಗೌಪ್ಯ ಮಾಹಿತಿ ನೀಡಿದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ)ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಜ್ಞಾನಿಯೊಬ್ಬರನ್ನು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ(ಎಟಿಎಸ್) ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ವಿಜ್ಞಾನಿಯು ವಾಟ್ಸಾಪ್ ಮತ್ತು ವೀಡಿಯೊ ಕರೆಗಳ ಮೂಲಕ "ಪಾಕಿಸ್ತಾನ ಗುಪ್ತಚರ ಆಪರೇಟಿವ್"ನ ಏಜೆಂಟ್‌ನೊಂದಿಗೆ ಸಂಪರ್ಕದಲ್ಲಿದ್ದರು ಎಂದು ಎಟಿಎಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇದು ಹನಿಟ್ರ್ಯಾಪ್ ಪ್ರಕರಣ ಎಂದು ಅವರು ಹೇಳಿದ್ದಾರೆ. ಪ್ರಮುಖ ರಕ್ಷಣಾ ಸಂಶೋಧನಾ ಸಂಸ್ಥೆಯಲ್ಲಿ ಉನ್ನತ ಹುದ್ದೆಯಲ್ಲಿದ್ದ ಆರೋಪಿಯನ್ನು ಬುಧವಾರ ಬಂಧಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. "ಶತ್ರು ದೇಶವು ತನ್ನ ಬಳಿಯಿರುವ ಅಧಿಕೃತ ರಹಸ್ಯಗಳನ್ನು ಪಡೆದು ದೇಶದ ಭದ್ರತೆಗೆ ಅಪಾಯವನ್ನುಂಟು ಮಾಡುತ್ತದೆ ಎಂದು ತಿಳಿದಿದ್ದರೂ, ವಿಜ್ಞಾನಿ ತನ್ನ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡು, ಶತ್ರು ದೇಶಕ್ಕೆ ವಿವರಗಳನ್ನು ನೀಡಿದ್ದಾರೆ" ಎಂದು ಎಟಿಎಸ್ ಪ್ರಕಟಣೆ ತಿಳಿಸಿದೆ.

ಕೈದಿಗಳು ಚುನಾವಣೆಯಲ್ಲಿ ಸ್ಪರ್ಧಿಸಬಹುದು, ಆದರೆ ಮತದಾನದ ಹಕ್ಕು ಇಲ್ಲ

ಬೆಂಗಳೂರು, ಮೇ 5– ಜೈಲಿನಲ್ಲಿರುವ ಕೈದಿಗಳಿಗೆ ಅವರ ಹಕ್ಕು ಚಲಾಯಿಸುವುದನ್ನು ನಿರ್ಬಂಧಿಸಲಾಗಿದೆ. ಆದರೆ ಕ್ರಿಮಿನಲ್ ಆರೋಪ ಎದುರಿಸುತ್ತಿರುವ ನಾಯಕರು ಜೈಲಿನಲ್ಲಿದ್ದರೂ ಸ್ಪರ್ಧಿಸಲು ಅವಕಾಶ ನೀಡಲಾಗಿದೆ.

ಪ್ರಸ್ತುತ ರಾಜ್ಯದ ಜೈಲುಗಳಲ್ಲಿರುವ 16,000ಕ್ಕೂ ಹೆಚ್ಚು ಕೈದಿಗಳು ಮತದಾನ ಮಾಡಲು ಸಾಧ್ಯವಾಗುತ್ತಿಲ್ಲ. ಪ್ರಜಾಪ್ರತಿನಿಧಿ ಕಾಯಿದೆ, 1951ರ ಸೆಕ್ಷನ್ 62 (5)ರ ಪ್ರಕಾರ, ಯಾವುದೇ ವ್ಯಕ್ತಿಯು ಬಂಧನಕ್ಕೊಳಗಾಗಿ ಜೈಲಿನಲ್ಲಿದ್ದರೆ, ಜೈಲು ಶಿಕ್ಷೆ ಅಥವಾ ಇನ್ನಾವುದೇ ರೀತಿಯಲ್ಲಿ ಕಾನೂನುಬದ್ಧ ಬಂಧನದಲ್ಲಿದ್ದರೆ ಅವರು ಚುನಾವಣೆಯಲ್ಲಿ ಮತ ಚಲಾಯಿಸುವಂತಿಲ್ಲ. ಆದರೆ ಜಾಮೀನಿನ ಮೇಲೆ ಇರುವವರಿಗೆ ಇದು ಅನ್ವಯಿಸುವುದಿಲ್ಲ.

ಆದರೆ ಕ್ರಿಮಿನಲ್ ಆರೋಪ ಹೊತ್ತಿರುವ ವ್ಯಕ್ತಿಗಳು ಜೈಲಿನೊಳಗಿದ್ದರೂ ಚುನಾವಣೆಗೆ ಸ್ಪರ್ಧಿಸಬಹುದು" ಎಂದಿರುವ ಕರ್ನಾಟಕ ಕಾರಾಗೃಹ ಇಲಾಖೆಯ ಮಾಜಿ ಮುಖ್ಯಸ್ಥ ಡಾ.ಎಸ್.ಟಿ.ರಮೇಶ್, ಅಂಚೆ ಮತದಾನದ ಆಯ್ಕೆಯನ್ನು ಕೈದಿಗಳಿಗೂ ವಿಸ್ತರಿಸಬಹುದು ಎಂದು ಅವರು ಹೇಳಿದ್ದಾರೆ. ರಾಜ್ಯದಲ್ಲಿ 12,823 ವಿಚಾರಣಾಧೀನ ಕೈದಿಗಳು ಸೇರಿದಂತೆ 16,510 ಕೈದಿಗಳಿದ್ದಾರೆ. ಕೈದಿಗಳು ಮತದಾನ ಮಾಡಲು ಕಾನೂನಿಲ್ಲಿ ಅವಕಾಶ ಇಲ್ಲ. ಹೀಗಾಗಿ ಜೈಲುಗಳಲ್ಲಿ ಯಾವುದೇ ಮತದಾನದ ವ್ಯವಸ್ಥೆ ಮಾಡಿಲ್ಲ" ಎಂದು ಎಡಿಜಿಪಿ ಮನೀಶ್ ಖಾರ್ಬಿಕರ್ ಅವರು ತಿಳಿಸಿದ್ದಾರೆ.

ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಮಾತನಾಡಿ, 'ಜೈಲಿಗೆ ಕಳುಹಿಸಿದರೂ ವ್ಯಕ್ತಿಯ ಶಾಸನಬದ್ಧ ಹಕ್ಕುಗಳು ಹಾಗೆಯೇ ಇರುತ್ತವೆ. ಆಹಾರ, ಆರೋಗ್ಯ, ಶಿಕ್ಷಣ ಮತ್ತು ಇತರ ಮೂಲಭೂತ ಸೌಲಭ್ಯಗಳನ್ನು ಅವರಿಗೆ ನೀಡಲಾಗುತ್ತದೆ ಎಂದಿದ್ದಾರೆ.

ಕರ್ನಾಟಕ ರಾಜ್ಯದ ಮಾಜಿ ಪ್ರಾಸಿಕ್ಯೂಟರ್ ಬಿಟಿ ವೆಂಕಟೇಶ್ ಮಾತನಾಡಿ, ಕಾರಾಗೃಹಗಳು "ಸುಧಾರಣಾಶೀಲ" ಸ್ವಭಾವದ ಹೊರತಾಗಿಯೂ ಚುನಾವಣಾ ಆಯೋಗ(ಇಸಿ) ಕೈದಿಗಳಿಗೆ ಮತದಾನದ ಅವಕಾಶ ನೀಡದಿರುವುದು ತಪ್ಪು. ಅವರಿಗೆ ಮತದಾನ ಮಾಡಲು ಏಕೆ ಅವಕಾಶ ನೀಡಬಾರದು ಅವರು ಭಾರತದ ಪ್ರಜೆಗಳು ಎಂದು ಕೈದಿಗಳ ಮತದಾನದ ಮೇಲಿನ ನಿಷೇಧವನ್ನು ಪ್ರಶ್ನಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಭಜರಂಗದಳ ನಿಷೇಧ ಪ್ರಸ್ತಾಪಕ್ಕೆ ಖಂಡನೆ

ಕಾಂಗ್ರೆಸ್ ಪಕ್ಷವನ್ನೇ ನಿಷೇಧ ಮಾಡುತ್ತೇವೆ
ಹಿಂದೂ ಕಾರ್ಯಕರ್ತರ ಆಕ್ರೋಶ

ಮೈಸೂರು, ಮೇ 5– ಅಧಿಕಾರಕ್ಕೆ ಬಂದರೆ ಭಜರಂಗದಳವನ್ನು ನಿಷೇಧಿಸಿ ಕಾನೂನು ಕ್ರಮ ಕೈಗೊಳ್ಳುವುದಾಗಿ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಪ್ರಕಟಿಸಿರುವುದಕ್ಕೆ ಹಿಂದೂ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ವಿದ್ಯಾರಣ್ಯಪುರದಲ್ಲಿರುವ ಗುರು ದೇವಾಶ್ರಮದಲ್ಲಿ ಹಿಂದೂ ಕಾರ್ಯಕರ್ತರು ಹನುಮ ಭಜನೆ ಮಾಡಿ ಕಾಂಗ್ರೆಸ್ ಪ್ರಣಾಳಿಕೆ ಪ್ರತಿಯನ್ನು ಹರಿದು, ಆಕ್ರೋಶ ವ್ಯಕ್ತಪಡಿಸಿದರು.



ಇದೇ ಸಂದರ್ಭದಲ್ಲಿ ಹಿಂದೂ ಸಮಿತಿ ಅಧ್ಯಕ್ಷ ವಿಕಾಸ್ ಶಾಸ್ತ್ರಿ ಮಾತನಾಡಿ, ಬಿಜೆಪಿ ನೇತೃತ್ವದ ಸರ್ಕಾರ ಈಗಾಗಲೇ ಪಿಎಫ್ಐ ಭಯೋತ್ಪಾದಕ ಸಂಘಟನೆ ನಿಷೇಧಿಸಿ, ಅವರ ಕಾನೂನು ಬಾಹಿರ ಚಟುವಟಿಕೆಗಳನ್ನು ಹತ್ತಿಕ್ಕುತ್ತಿದ್ದರೂ, ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಪಿಎಫ್ಐ ಅನ್ನು ನಿಷೇಧಿಸುವುದಾಗಿ ಹೇಳಿರುವುದು ಹಾಸ್ಯಾಸ್ಪದವಾಗಿದೆ. ಈ ಹಿಂದೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಾವಧಿಯಲ್ಲಿ ಪಿಎಫ್ಐ ಜೊತೆಗೆ ಬಾಂಧವ್ಯ ಹೊಂದಿದ್ದು, ಅದರ ನೂರಾರು ಕಾರ್ಯಕರ್ತರನ್ನು ಜೈಲಿನಿಂದ ಬಿಡುಗಡೆ ಗೊಳಿಸಿ, ಪರೋಕ್ಷವಾಗಿ ಹಿಂದೂ ಸಂಘಟನೆಗಳ ಕಾರ್ಯಕರ್ತರ ಹತ್ಯೆಗೆ ಕಾರಣವಾಗಿತ್ತು. ಇದೀಗ ಕಾಂಗ್ರೆಸ್ ತನ್ನ ಹಿಂದೂ ದ್ವೇಷ ಪೂರಿತ ನಿಲುವಿನಿಂದ ಭಜರಂಗದಳದ ಮೇಲೆ ಸೇಡು ತೀರಿಸಿಕೊಳ್ಳಲು ಹೊರಟಂತಿದೆ. ಅವರು ಏನು ಭಜರಂಗದಳವನ್ನು ಬ್ಯಾನ್ ಮಾಡುವುದು ನಾವೇ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನೇ ಬ್ಯಾನ್ ಮಾಡುತ್ತೇವೆ ಎಂದರು.

ನಂತರ ಮಾತನಾಡಿದ ವಿಶ್ವ ಹಿಂದೂ ಪರಿಷತ್ತಿನ ಕಾನೂನು ವಿಭಾಗದ ರಾಜ್ಯ ಸಂಚಾಲಕ ಪ್ರದೀಶ್, ಭಜರಂಗದಳವು ಹಿಂದೂ ಸಮಾಜದ ಹಿತರಕ್ಷಣೆಗಾಗಿ, ಮಾನವೀಯ ನೆಲೆಯಲ್ಲಿ ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಿರುವ ದೇಶಪ್ರೇಮಿ ಸಂಘಟನೆಯಾಗಿದೆ. ಗೋ ಹತ್ಯೆ, ಮತಾಂತರ ನಿಷೇಧ, ಲವ್ ಜಿಹಾದ್ ವಿರುದ್ಧ ಸಿಡಿದೆದ್ದು, ಧರ್ಮ ವಿರೋಧಿ ಕೃತ್ಯ ನಡೆಸುವವರಿಗೆ ಸಿಂಹಸ್ವಪ್ನವಾಗಿರುವ ಯುವಕರ ಸಂಘಟನೆಯಾಗಿದೆ. ಚುನಾವಣೆಯಲ್ಲಿ ಮತಗಳಿಕೆಗಾಗಿ ಮುಸ್ಲಿಂ ಓಲೈಕೆ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್‌ಗೆ ಈ ಚುನಾವಣೆಯಲ್ಲಿ ಜನರು ತಕ್ಕ ಪಾಠ ಕಲಿಸುತ್ತಾರೆ ಎಂದು ಕಿಡಿಕಾರಿದರು

ಕಾರ್ಯಕ್ರಮದಲ್ಲಿ ಗುರುದೇವಾಶ್ರಮದ ಸುಬ್ರಹ್ಮಣ್ಯ, ಜೆಟ್ಟಪ್ಪ, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್ ಹಿಂದೂ ಮುಖಂಡ ಸೆಂದಿಲ್‌ಕುಮಾರ್, ಆತ್ಮೀಯ ಶ್ರೀಧರ್, ತೇಜಸ್, ಪ್ರದೀಪ್, ಲೋಕೇಶ್, ನಾಗಭೂಷಣ್ ಮತ್ತಿತರರು ಉಪಸ್ಥಿತರಿದ್ದರು.

ಅಂಬಾ ಭವಾನಿ ಮಹಿಳಾ ಸಮಾಜ: ಭಜರಂಗ ದಳ ನಿಷೇಧ ವಿರೋಧಿಸಿ ಅಂಬಾ ಭವಾನಿ ಮಹಿಳಾ ಸಮಾಜದವರು ಚಾಮುಂಡಿ ಬೆಟ್ಟದ ತಪ್ಪಲಲ್ಲಿರುವ ಅಂಬಾ ಭವಾನಿ ಮಹಿಳಾ ಸಮಾಜದ ಕಚೇರಿಯಲ್ಲಿ ಮಹಿಳೆಯರು ಸಾಮೂಹಿಕವಾಗಿ ಹನುಮಾನ್ ಚಾಲೀಸ ಪಠಣ ಮಾಡಿದರು. ಅಂಬಾ ಭವಾನಿ ಮಹಿಳಾ ಸಮಾಜದ ಅಧ್ಯಕ್ಷೆ ಸವಿತಾ ಘಾಟ್ಕೆ, ರೂಪ ರಾಘವೇಂದ್ರ, ನಳಿನಿ ತಮ್ಮಯ್ಯ, ವಕೀಲಾದ ಜಯಶ್ರೀ, ರತ್ನ , ಶಶಿ, ಪಾರ್ವತಿ, ಗೀತಾ ಗಣೇಶ್ ಮತ್ತಿತರರು ಹಾಜರಿದ್ದರು.

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

ಜೆಡಿಎಸ್ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ: ಹೆಚ್‌ಡಿಡಿ

ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು ಪರ ಮತಯಾಚನೆ



ಕೆಆರ್.ಪೇಟೆ, ಮೇ 5– ಕೆಲವು ಜೆಡಿಎಸ್ ಕತೆ ಮುಗಿಯಿತು ಎಂದು ಭಾವಿಸಿದ್ದಾರೆ. ಆದರೆ ಯಾರಿಂದಲೂ ಜೆಡಿಎಸ್ ಮುಗಿಸಲು ಸಾಧ್ಯವಿಲ್ಲ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ವಾಗ್ದಾಳಿ ನಡೆಸಿದರು.

ಪಟ್ಟಣದ ಪುರಸಭಾ ಕಚೇರಿ ಆವರಣದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ. ಮಂಜು ಪರ ಮತಯಾಚಿಸಿ ಮಾತನಾಡಿದ ಅವರು, ಕೆ.ಆರ್.ಪೇಟೆಯ ಓರ್ವ ಮಹಾನ್ ವ್ಯಕ್ತಿ ನಾನು ಜೆಡಿಎಸ್ ಮುಗಿಸಿಬಿಟ್ಟೆಎನ್ನುತ್ತಾರೆ. ಅವರ ಮಾತನ್ನು ಕೇಳಿದರೆ ನನ್ನ ರಕ್ತ ಕುದಿಯುತ್ತೆ ಎಂದು ಸಚಿವ ನಾರಾಯಣ ಗೌಡರ ವಿರುದ್ಧ ಪರೋಕ್ಷವಾಗಿ ಆಕ್ರೋಶ ವ್ಯಕ್ತಪಡಿಸಿದ ಅವರು ನಮ್ಮ ಹಾಗೂ ನಮ್ಮ ಪಕ್ಷದ ಬಗ್ಗೆ ಮಾತನಾಡುವಾಗ ಎಚ್ಚರಿಕೆಯಿಂದ ಮಾತನಾಡಬೇಕು ಎಂದು ಖಡಕ್ ವಾರ್ನಿಂಗ್ ನೀಡಿದರು.

ಮಂಡ್ಯ ಜನ ಈ ಬಾರಿಯೂ ಏಳು ಕ್ಷೇತ್ರಗಳಲ್ಲೂ ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸಿ ಕೊಡಲಿದ್ದಾರೆ. ಕುಮಾರ ಸ್ವಾಮಿ ಅವರು ಮತ್ತೊಮ್ಮೆ ಮುಖ್ಯ ಮಂತ್ರಿಯಾಗಲಿದ್ದು, ರಾಜ್ಯದ ಜನತೆಯ ಕಲ್ಯಾಣಕ್ಕಾಗಿ ಪಂಚರತ್ನ ಯೋಜನೆ ಜಾರಿಗೊಳಿಸಲಿದ್ದಾರೆ ಎಂದರು.

1982 ರಲ್ಲಿ ಕೆ.ಆರ್.ಪೇಟೆ ಕೆರೆ ಒಡೆದು ಹೋಗಿ, ಫಸಲುಗಳು ಮಣ್ಣು ಪಾಲಾಗಿತ್ತು. ವಿಷಯ ತಿಳಿದ ನಾನು ರಾತ್ರಿ 8 ಗಂಟೆಗೆ ದೆಹಲಿಯಿಂದ ಓಡೋಡಿ ಬಂದೆ. ಕೆ.ಆರ್.ಪೇಟೆಯಲ್ಲಿ ಒಂದು ಬ್ರಿಡ್ಜ್ ಕಟ್ಟೋಕೆ ನಾನೇ ಬರಬೇಕಾಯ್ತು ಎಂದು ಪರೋಕ್ಷವಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪಗೆ ಟಾಂಗ್ ನೀಡಿದರು.

ನನಗೀಗ 90 ವರ್ಷ. ಈ ಇಳಿ ವಯಸ್ಸಿನಲ್ಲೂ ರಾಜ್ಯ ಪ್ರವಾಸ ಮಾಡಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಮಾಡಿ, ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸುತ್ತಿದ್ದೇನೆ ಎಂದರು. ಈ ದೇವೇಗೌಡ ಇನ್ನೂ ನಿಮ್ಮ ಕಣ್ಮುಂದೆ ನಿಂತಿದ್ದೇನೆ. ಹಾಸನದಲ್ಲಿ ಸ್ವರೂಪ್ ಗೌಡರಿಗೆ ಟಿಕೆಟ್ ನೀಡಲಾಗಿದೆ. ಸಾಮಾನ್ಯ ಕಾರ್ಯಕರ್ತನನ್ನು ಜೆಡಿಎಸ್ ಪರಿಗಣಿಸಿದೆ. ಹೀಗಾಗಿ ಹಾಸನದಲ್ಲಿ ಸ್ವರೂಪ್, ಕೆ.ಆರ್.ಪೇಟೆಯಲ್ಲಿ ಹೆಚ್.ಟಿ.ಮಂಜು ಗೆಲ್ಲಬೇಕು ಎಂದರು.

ಈ ವೇಳೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು, ಮನ್‌ಮುಲ್ ಮಾಜಿ ಅಧ್ಯಕ್ಷ ಎಂ.ಬಿ.ಹರೀಶ್, ಅಲ್ಪ ಸಂಖ್ಯಾತ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ನಜ್ಮಾ ನಜೀರ್, ಮನ್‌ಮುಲ್ ನಿರ್ದೇಶಕ ಡಾಲು ರವಿ, ನೆಲ್ಲಿಗೆರೆ ಬಾಲು, ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕರಾದ ಪುಟ್ಟ ಸ್ವಾಮಿಗೌಡ, ಮೋಹನ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್, ಜೆಡಿಎಸ್ ಅಧ್ಯಕ್ಷ ಎ.ಎನ್.ಜಾನಕಿರಾಂ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ಕಿರಣ್, ಜಿಲ್ಲಾ ಉಪಾಧ್ಯಕ್ಷ ಬಿ.ವಿ.ನಾಗೇಶ್, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ವಿ.ಎಸ್.ಧನಂಜಯ ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಮಲ್ಲೇಶ್, ಮುಖಂಡರಾದ ಜಿಪಂ ಮಾಜಿ ಉಪಾಧ್ಯಕ್ಷೆ ಗಾಯತ್ರಿ, ಮುಖಂಡರಾದ ಎ.ಆರ್.ರಘು, ರಮೇಶ್, ತಾಪಂ ಮಾಜಿ ಸದಸ್ಯ ಮೋಹನ್, ಮುಖಂಡ ಸಂಜೀವಪ್ಪ ನಾಗೇಂದ್ರ, ನಂಜಪ್ಪ, ತೋಟಪ್ಪಶೆಟ್ಟರು, ಹೆಚ್.ಟಿ.ಲೋಕೇಶ್, ಲೋಕೇಶ್, ಅತೀಕ್, ಲೋಕಿ ಸೇರಿದಂತೆ ಇತರರಿದ್ದರು.

ನಮ್ಮ ಕುಟುಂಬ ಯಾರಿಗೂ ಚಿತ್ರಹಿಂಸೆ, ಮೋಸ ಮಾಡಿಲ್ಲ: ಹೆಚ್‌ಡಿಕೆ



ಕೆ.ಆರ್.ಪೇಟೆ: ನಮ್ಮ ಕುಟುಂಬ ಯಾರಿಗೂ ಚಿತ್ರಹಿಂಸೆ, ಮೋಸ ಮಾಡಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಪಟ್ಟಣದಲ್ಲಿ ಸಭೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು ಪರ ಮತಯಾಚಿಸಿ ಮಾತನಾಡಿದ ಅವರು, ಕೆ.ಆರ್.ಪೇಟೆ ಕಾಂಗ್ರೆಸ್ ಅಭ್ಯರ್ಥಿ ನನಗೆ ದೇವೇಗೌಡರ ಕುಟುಂಬದಿಂದ ಮೋಸ ಆಗಿದೆ ಎಂದರೆ ನಂಬಬೇಡಿ. ಕಳೆದ ಉಪ ಚುನಾವಣೆಯಲ್ಲಿ ಒಂದು ಬಾರಿ ನನಗೆ ಅವಕಾಶ ನೀಡಿ ಎಂದು ಬಿ.ಎಲ್.ದೇವರಾಜು ಕೇಳಿಕೊಂಡಿದ್ದರು. ನಾನು ಆಗ ದೇವರಾಜು ಅವರಿಗೆ ಟಿಕೆಟ್ ನೀಡಿ ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಹೆಚ್.ಟಿ.ಮಂಜು ಅವರಿಗೆ ಟಿಕೆಟ್ ನೀಡುವುದಾಗಿ ತಿಳಿಸಿದ್ದೆ ಎಂದರು.

ಬಿಜೆಪಿ ಅಭ್ಯರ್ಥಿ ಕೆ.ಸಿ.ನಾರಾಯಣಗೌಡರು ದೇವೇಗೌಡರ ಕುಟುಂಬ ನನಗೆ ಚಿತ್ರಹಿಂಸೆ ಕೊಟ್ಟರು ಎಂದು ಹೇಳಿದ್ದಾರೆ. ಆದರೆ ದೇವೇಗೌಡರ ಕುಟುಂಬ ಯಾರಿಗೂ ನೋವು ಕೊಟ್ಟಿಲ್ಲ. ಬದಲಿಗೆ ನಾವೇ ಬೆಳೆಸಿ ನಾವೇ ಚೂರಿ ಹಾಕಿಸಿಕೊಂಡಿದ್ದೇವೆ ಎಂದರು.

ಬಿಜೆಪಿ ಸರ್ಕಾರ 3 ಸಿಲಿಂಡರ್ ನೀಡುವುದಾಗಿ ಹೇಳಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ 5 ಸಿಲಿಂಡರ್ ಕೊಡುತ್ತೇನೆ ಎಂದು ಹೇಳಿದ್ದೆ. ನಾನು ಹೇಳಿದ ಮೇಲೆ ಅವರು ಹೇಳುತ್ತಿದ್ದಾರೆ. ಬಿಜೆಪಿ ಸರ್ಕಾರ ಅಧಿಕಾರದಲ್ಲಿದಾಗ ಏಕೆ ಕೊಡಲಿಲ್ಲ ಎಂದು ಪ್ರಶ್ನಿಸಿದರು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ರೈತರ, ಸ್ತ್ರೀಶಕ್ತಿ ಸಂಘದ ಸಾಲ ಮನ್ನಾ ಸೇರಿದಂತೆ ಪಂಚರತ್ನ ಯೋಜನೆ ಜಾರಿಗೊಳಿಸುತ್ತದೆ. ಇದಕ್ಕಾಗಿ ರಾಜ್ಯದ ಜನತೆ ಪ್ರಾದೇಶಿಕ ಪಕ್ಷವಾದ ಜೆಡಿಎಸ್‌ಗೆ ಸ್ಪಷ್ಟ ಬಹುಮತ ನೀಡಬೇಕು ಎಂದರು. ಕಳೆದ ಸಂಸತ್ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಗೆಲ್ಲಿಸಿ ಕಾಂಗ್ರೆಸ್ ನಾಯಕರು ಪಶ್ಚಾತಾಪ ಪಡುತ್ತಿದ್ದಾರೆ. ಈಗ ಚುನಾವಣೆಯಲ್ಲಿ ಅದೇ ಕೆಲಸ ಮಾಡುತ್ತಿದ್ದಾರೆ. ಜನರು ಜಾಗೃತರಾಗಿ ಜೆಡಿಎಸ್ ಗೆಲ್ಲಿಸಬೇಕು. ಬಿಜೆಪಿಗೆ ಮತ ಕೊಟ್ಟರೆ ಮಂಡ್ಯ ಅಭಿವೃದ್ಧಿ ಸಾಧ್ಯವಿಲ್ಲ ಎಂದರು.

ಇನ್ನೊಂದು ವಾರ ಆದ ಮೇಲೆ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕೊಡುತ್ತೇನೆ. ಕೆ.ಆರ್.ಪೇಟೆ ಅಭ್ಯರ್ಥಿ ಮಂಜು ಅನ್ನೋದಕ್ಕಿಂತ ನಿಮ್ಮ ಮನೆ ಮಗ ಕುಮಾರಣ್ಣ ಎಂದು ಮತ ಹಾಕಿ. ನನ್ನ 5 ವರ್ಷದ ಸರ್ಕಾರವನ್ನು ಬಿಜೆಪಿ, ಕಾಂಗ್ರೆಸ್‌ನವರು ತೆಗೆಯೋಕೆ ಆಗಲ್ಲ. ಈ ಬಾರಿ ಜೆಡಿಎಸ್ ಸ್ವತಂತ್ರವಾಗಿ ಸರ್ಕಾರ ರಚಿಸುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶ್ರೀರಂಗಪಟ್ಟಣ ಜನತೆ ರಮೇಶ್‌ಬಾಬುಗೆ ಮತ ನೀಡಿ

ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಮನವಿ



ಮಂಡ್ಯ, ಮೇ 5– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತ. ಈ ನಿಟ್ಟಿನಲ್ಲಿ ಶ್ರೀರಂಗಪಟ್ಟಣ ಕ್ಷೇತ್ರದ ಜನತೆ ಸರಳ, ಸಜ್ಜನ ಅಭ್ಯರ್ಥಿ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡಗೆ ಮತ ಕೊಡಿ ಎಂದು ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಮನವಿ ಮಾಡಿದರು.

ಶ್ರೀರಂಗಪಟ್ಟಣ ಕ್ಷೇತ್ರದ ತಗ್ಗಹಳ್ಳಿ ಜಿಪಂ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಮೇಶ್‌ಬಾಬು ಬಂಡಿಸಿದ್ದೇಗೌಡರೊಂದಿಗೆ ರೋಡ್ ಶೋ ಮೂಲಕ ಮತಯಾಚಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ರಚನೆಯಾದ ದಿನದಿಂದಲೇ ಗ್ರಾಮೀಣಾಭಿವೃದ್ಧಿ, ಕೃಷಿ, ಕೈಗಾರಿಕೆ, ಸಾರ್ವಜನಿಕ ಸೇವೆ, ಕಾನೂನು ಮತ್ತು ನ್ಯಾಯ, ನಗರಾಭಿವೃದ್ಧಿ, ಶಿಕ್ಷಣ, ಆರೋಗ್ಯ ಹೀಗೆ ಪ್ರತಿ ವಲಯವನ್ನೂ ಪ್ರತ್ಯೇಕವಾಗಿ ಅಭಿವೃದ್ಧಿ ಪಡಿಸಲು ಯೋಜನೆ ರೂಪಿಸಲಾಗುವುದು ಎಂದರು.

ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿರುವಂತೆ ಬಿಪಿಎಲ್ ಕುಟುಂಬಕ್ಕೆ 10 ಕೆಜಿ ಅಕ್ಕಿ, 200 ಯುನಿಟ್ ವಿದ್ಯುತ್, ಅಂಗನವಾಡಿ ಕಾರ್ಯಕರ್ತೆಯರ ವೇತನ 11,500 ರೂ.ನಿಂದ 15,000 ರೂ.ಗೆ ಹೆಚ್ಚಳ, ಆಶಾ ಕಾರ್ಯಕರ್ತೆಯರಿಗೆ ಮಾಸಿಕ ಗೌರವಧನ 8,000 ರೂ.ಗೆ ಹೆಚ್ಚಳ, ಬಿಸಿಯೂಟದ ಅಡುಗೆಯವರಿಗೆ ಮಾಸಿಕ ಗೌರವಧನ 6,000 ರೂ.ಗೆ ಏರಿಕೆ ಮಾಡಲಾಗುವುದು ಎಂದರು.

ಕಾಂಗ್ರೆಸ್ ಗ್ಯಾರಂಟಿ ಕಾರ್ಡ್‌ನಲ್ಲಿ ನೋಂದಣಿ ಮಾಡಿಸಿದವರಿಗೆ ಗೃಹಲಕ್ಷ್ಮಿ ಯೋಜನೆಯಡಿ 2000 ರೂ. ಪ್ರತಿ ತಿಂಗಳು, ಹಾಲಿನ ಸಬ್ಸಿಡಿ ಹೆಚ್ಚಳ, ಪೊಲೀಸ್ ಇಲಾಖೆಯಲ್ಲಿ ಶೇ.33ರಷ್ಟು ಮಹಿಳೆಯರ ನೇಮಕಾತಿ, ಶೇ.1ರಷ್ಟು ತೃತೀಯ ಲಿಂಗಿಗಳಿಗೆ ಅವಕಾಶ. ರಾತ್ರಿ ಪಾಳಿ ಸಿಬ್ಬಂದಿಗೆ 5 ಸಾವಿರ ರೂ. ವಿಶೇಷ ಮಾಸಿಕ ಭತ್ಯೆ ಮತ್ತು ಎಲ್ಲಾ ಪೊಲೀಸರಿಗೆ ವರ್ಷಕ್ಕೆ ಒಂದು ತಿಂಗಳ ಹೆಚ್ಚುವರಿ ವೇತನ ನೀಡಲಾಗುವುದು ಎಂದರು.

ಕಾಂಗ್ರೆಸ್ ಅಭ್ಯರ್ಥಿ ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ಕಳೆದ ಬಾರಿ ಸೋಲಿಸಿದ್ದೀರಿ. ಈ ಬಾರಿ ನನ್ನ ಕೈ ಹಿಡಿದು ನಿಮ್ಮ ಗ್ರಾಮಗಳ ಅಭಿವೃದ್ಧಿಗೆ ಆದ್ಯತೆ ನೀಡಿ ಎಂದರು.

ಸಾರಿಗೆ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ, ಎಸ್‌ಸಿ ಸಮುದಾಯಕ್ಕೆ ಶೇ.15– 17, ಎಸ್‌ಟಿ ಸಮುದಾಯಕ್ಕೆ ಶೇ.3– 5, ಅಲ್ಪಸಂಖ್ಯಾತರಿಗೆ ಶೇ.4ರ ಮೀಸಲಾತಿ ಮರುಸ್ಥಾಪನೆ, ಲಿಂಗತ್ವ ಅಲ್ಪಸಂಖ್ಯಾತರಿಗಾಗಿ ಮಂಗಳಮುಖಿ ಯೋಜನೆ ಜಾರಿಯಾಗಲಿವೆ ಎಂದು ನುಡಿದರು.

ಸಮುದಾಯಗಳಲ್ಲಿ ನಿರ್ಲಕ್ಷಿತ ದೇವಸ್ಥಾನಗಳಿಗೆ ವಿಶೇಷ ಪೂಜಾ ನಿಧಿ ಸ್ಥಾಪನೆ, ಸಣ್ಣ ದೇವಸ್ಥಾನ, ಮಠಗಳ ನವೀಕರಣಕ್ಕೆ 1 ಸಾವಿರ ಕೋಟಿ ರೂ, 60 ವರ್ಷ ಮೀರಿದ ಅರ್ಚಕರಿಗೆ ಮಾಸಿಕ 5 ಸಾವಿರ ರೂ. ಗೌರವ ಧನ, ಡಾ.ಪುನೀತ್ ರಾಜಕುಮಾರ್ ಹೃದಯ ಆರೋಗ್ಯ ಯೋಜನೆ ಜಾರಿಗೊಂಡು ಎಲ್ಲರಿಗೂ ಉಪಯೋಗವಾಗಲಿವೆ ಎಂದರು. ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ರಮೇಶ್ ಮಿತ್ರ, ಕೃಷ್ಣ, ಯಶೋಧ ಮತ್ತಿತರರಿದ್ದರು.

ಸುಧಾ ಶಿವರಾಮೇಗೌಡ ಅನ್ನಪೂರ್ಣೇಶ್ವರಿ ಸ್ವರೂಪಿ

ಕೇಂದ್ರ ಸಚಿವೆ ಸ್ಮೃತಿ ಇರಾನಿ



ನಾಗಮಂಗಲ, ಮೇ 5– ಬಿಜೆಪಿ ಅಭ್ಯರ್ಥಿ ಸುಧಾ ಶಿವರಾಮೇಗೌಡ ಅನ್ನಪೂರ್ಣೇಶ್ವರಿ ಸ್ವರೂಪಿ ಎಂಬುದು ಈ ಕ್ಷೇತ್ರದ ಮತದಾರರ ಮಾತು ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಸ್ಮೃತಿ ಇರಾನಿ ತಿಳಿಸಿದರು.

ಪಟ್ಟಣದ ಟಿ.ಬಿ.ಬಡಾವಣೆಯ ಪ್ರವಾಸಿ ಮಂದಿರದ ಮುಂಭಾಗ ಶುಕ್ರವಾರ ರೋಡ್ ಶೋ ಮೂಲಕ ಪ್ರಚಾರ ನಡೆಸಿ, ರೈತರಿಗೆ, ಕಾರ್ಮಿಕರಿಗೆ, ನೌಕರರಿಗೆ, ಗರ್ಭಿಣಿಯರಿಗೆ, ಬಾಣಂತಿಯರಿಗೆ, ವಿದ್ಯಾರ್ಥಿಗಳಿಗೆ, ವಿಧವೆಯರಿಗೆ ಹಾಗೂ ಯುವ ನಿರುದ್ಯೋಗಿಗಳಿಗೆ ನೀಡುವ ಸೌಲಭ್ಯಗಳ ಬಿಜೆಪಿ ಪ್ರಣಾಳಿಕೆ ಬಗ್ಗೆ ವಿವರಣೆ ನೀಡಿದ ಸಚಿವರು, ಆಯುಷ್ಮಾನ್ ಭಾರತ್ ಯೋಜನೆ ಬಗ್ಗೆ ಮಾಹಿತಿ ನೀಡುವ ಮೂಲಕ ಪಕ್ಷದ ಜನಪರ ಕಾರ್ಯಕ್ರಮಗಳ ಬಗ್ಗೆ ಮನವರಿಕೆ ಮಾಡುವ ಪ್ರಯತ್ನ ಮಾಡಿದರಲ್ಲದೆ, ಪ್ರಧಾನ ಮಂತ್ರಿ ಮೋದಿ ಅಭಿವೃದ್ಧಿ ಕಾರ್ಯಕ್ರಮಗಳ ಮಾಹಿತಿ ನೀಡಿದರು.

ಕಾಂಗ್ರೆಸ್ ಸುಳ್ಳಿನ ಸರಮಾಲೆಯಲ್ಲಿ ಚುನಾವಣೆ ಎದುರಿಸುತ್ತಿದೆ. ಭಾರತೀಯರ ಆತ್ಮಸಾಕ್ಷಿಗೆ ಚ್ಯುತಿಯಾಗುವ ಹೇಳಿಕೆ ನೀಡುವ ಮೂಲಕ ದೇಶದ ಐಕ್ಯತೆಗೆ ಮಾರಕವಾಗುತ್ತಿದೆ. ಈಶ್ವರ, ಕೃಷ್ಣ, ರಾಮ, ಹನುಮ ಎಂಬ ಮತ್ತಿತರ ಹೆಸರುಗಳ ದೇವರ ಮೇಲಿರುವ ನಂಬಿಕೆಯನ್ನು ಅಪಹಾಸ್ಯ ಮಾಡುತ್ತಿದೆ. ಜನಸಾಮಾನ್ಯರ ಧಾರ್ಮಿಕ ಭಾವನೆಗಳ ಮೇಲೆ ಕೆಸರೆರಚುವ ನಿಟ್ಟಿನಲ್ಲಿ ದಿನನಿತ್ಯ ಒಂದಲ್ಲ ಒಂದು ಹೇಳಿಕೆಗಳನ್ನು ನೀಡುತ್ತಿದೆ. ಇಂತಹ ಅಪನಂಬಿಕೆ ಕಾಂಗ್ರೆಸ್ ಪಕ್ಷವನ್ನು ಮತದಾರರು ಸಂಪೂರ್ಣವಾಗಿ ತಿರಸ್ಕರಿಸುವ ಮೂಲಕ ಕಾಂಗ್ರೆಸ್ ಮುಕ್ತ ಭಾರತ ನಿರ್ಮಿಸಬೇಕಿದೆ. ಈ ಬಾರಿ ಕರ್ನಾಟಕದಲ್ಲಿ ಬಿಜೆಪಿಯ ಅಲೆ ಸಂಪೂರ್ಣ ಬಹುಮತದ ಸರ್ಕಾರಕ್ಕೆ ಪೂರಕವಾಗಿದೆ. ಆದ್ದರಿಂದ ಅನ್ನಪೂರ್ಣೇಶ್ವರಿ ಸ್ವರೂಪಿಯಾಗಿ ತಮ್ಮ ಮುಂದೆ ನಿಂತಿರುವ ಸುಧಾ ಶಿವರಾಮೇಗೌಡರಿಗೆ ಮತ ನೀಡುವ ಮೂಲಕ ದುಷ್ಟ ಶಕ್ತಿಗಳ ನಾಶದೊಂದಿಗೆ, ಶಿಷ್ಟರ ರಕ್ಷಣೆಗೆ ಸಹಕಾರ ನೀಡಬೇಕಿದೆ ಎಂದು ಮನವಿ ಮಾಡಿದರು.

ಸಂಜೆ 4 ಗಂಟೆಗೆ ಹೆಲಿಕಾಪ್ಟರ್ ಮೂಲಕ ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ನಿರ್ಮಿಸಿದ್ದ ಹೆಲಿಪ್ಯಾಡ್‌ಗೆ ಬಂದಿಳಿದ ಸಚಿವರು ಟಿ.ಬಿ.ಸರ್ಕಲ್, ಅಂಚೆಚಿಟ್ಟನಹಳ್ಳಿ, ಹೊಸಮನೆ ಗೇಟ್, ಬೆಳ್ಳೂರು ಕ್ರಾಸ್ ಮೂಲಕ ಬೆಳ್ಳೂರು ಪಟ್ಟಣದಲ್ಲಿ ರೋಡ್ ಶೋ ನಡೆಸಿದರು. ಬಿಜೆಪಿ ಅಭ್ಯರ್ಥಿ ಸುಧಾ ಶಿವರಾಮೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂಧನ್, ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ, ಯುವ ಮುಖಂಡ ಚೇತನ್ ಶಿವರಾಮೇಗೌಡ ರೋಡ್ ಶೋ ವೇಳೆ ಇದ್ದರು.

ಒಂದನೇ ಪುಟದಿಂದ

ದುನಿಯಾ ವಿಜಿ, ಯೋಗಿ ಪ್ರಚಾರ

ಆಗಮಿಸಿದರು. ಗ್ರಾಮಕ್ಕೆ ಆಗಮಿಸುತ್ತಿದ್ದಂತೆಯೇ ಗ್ರಾಮದ ಮುಖಂಡರು, ಗ್ರಾಮಸ್ಥರು ಬೃಹತ್ ಗಾತ್ರದ ಗುಲಾಬಿ ಹಾರವನ್ನು ಕ್ರೇನ್ ಮೂಲಕ ಹಾಕಿದರು. ಇದೇ ವೇಳೆ ಸಿದ್ದರಾಮಯ್ಯ ಅವರ ರೋಡ್ ಶೋನಲ್ಲಿ ಚಿತ್ರನಟರಾದ ದುನಿಯಾ ವಿಜಿ, ಲೂಸ್ ಮಾದ ಯೋಗಿ, ನಟಿ ನಿಶ್ವಿಕಾ ನಾಯ್ಡು ಜೊತೆಯಾದರು. ಈ ವೇಳೆ ದಾರಿಯುದ್ದಕ್ಕೂ ನಿಂತಿದ್ದ ಅಪಾರ ಸಂಖ್ಯೆಯ ಅಭಿಮಾನಿಗಳು ಸಿದ್ದರಾಮಯ್ಯ ಅವರ ಮೇಲೆ ಪುಷ್ಪಾರ್ಚನೆ ಮಾಡಿ ಜೈಕಾರ ಹಾಕಿ ಸಂಭ್ರಮಿಸಿದರು.

ಬಸವಣ್ಣನವರ ಬಾವುಟ: ಚಿಕ್ಕಹಳ್ಳಿಯಿಂದ ರೋಡ್ ಶೋ ಮೂಲಕ ಭುಗತಗಳ್ಳಿಗೆ ಆಗಮಿಸಿದ ಸಿದ್ದರಾಮಯ್ಯ ಅವರಿಗೆ ಗ್ರಾಮದ ದ್ವಾರದಲ್ಲೇ ಗ್ರಾಮಸ್ಥರು ಅಭೂತಪೂರ್ವ ಸ್ವಾಗತ ಕೋರಿದರು. ರೋಡ್ ಶೋದಲ್ಲಿ ಬಸವಣ್ಣನವರ ಭಾವಚಿತ್ರವುಳ್ಳ ಕೇಸರಿ ಧ್ವಜ ರಾರಾಜಿಸಿದವು. ವಿವಿಧ ಸಮುದಾಯಗಳ ಮುಖಂಡರು, ಯುವಕರು ರೋಡ್ ಶೋಗೆ ಸಾಥ್ ನೀಡಿದರು. ಬಳಿಕ ವಾಜಮಂಗಲಕ್ಕೆ ಆಗಮಿಸಿದ ಸಿದ್ದರಾಮಯ್ಯ ಅವರಿಗೆ ಬೃಹತ್ ಹಾರ ಹಾಕಿ ಹೂಮಳೆ ಸುರಿಸುತ್ತ ಅಭಿಮಾನ ವ್ಯಕ್ತಪಡಿಸಿದರು. ಅರ್ಧ ಗಂಟೆಗೂ ಹೆಚ್ಚು ಸಮಯ ರೋಡ್ ಶೋ ನಡೆಸಿದ ಸಿದ್ದರಾಮಯ್ಯ ಬೆಂಬಲ ಕೋರಿದರು.

ಗ್ರಾಮದಲ್ಲಿ ಹಬ್ಬದ ವಾತಾವರಣ: ವಾಜಮಂಗಲದಲ್ಲಿ ರೋಡ್ ಶೋ ಮುಗಿಸಿ ಬನ್ನೂರು ರಸ್ತೆ ಮೂಲಕ ಸಿದ್ದರಾಮಯ್ಯ ಬೆಂಬಲಿಗರೊಂದಿಗೆ ಮೆಲ್ಲಹಳ್ಳಿ ಗ್ರಾಮಕ್ಕೆ ಆಗಮಿಸಿದರು. ಮೆಲ್ಲಹಳ್ಳಿ ಗೇಟ್‌ನಲ್ಲಿ ತೆರೆದ ವಾಹನ ಏರಿದ ಸಿದ್ದರಾಮಯ್ಯ, ದುನಿಯಾ ವಿಜಿ, ಲೂಸ್ ಮಾದ ಯೋಗಿ, ಶಾಸಕ ಡಾ.ಯತೀಂದ್ರ, ಗ್ರಾಮದ ಮುಖಂಡರಾದ ಗಂಗನತಿಮ್ಮಣ್ಣ ಸೇರಿದಂತೆ ಹಲವು ಮುಖಂಡರೊಂದಿಗೆ ರೋಡ್ ಶೋ ಆರಂಭಿಸಿದರು. ಬ್ಯಾಂಡ್ ವಾದನ, ಮಂಗಳವಾದ್ಯ ಸೇರಿದಂತೆ ಇನ್ನಿತರ ಜನಪದ ಕಲಾತಂಡಗಳು ಹಾಗೂ ಕಳಸಹೊತ್ತ ಮಹಿಳೆಯರು ರೋಡ್ ಶೋ ಮುಂದೆ ಸಾಗಿದರು. ದಾರಿಯುದ್ದಕ್ಕೂ ರಾಶಿ ರಾಶಿ ಹೂ ಇಟ್ಟುಕೊಂಡು ಸಿದ್ದರಾಮಯ್ಯ ಮೇಲೆರಚಿದರು. ರೋಡ್ ಶೋ ಹಿನ್ನೆಲೆಯಲ್ಲಿ ಮೆಲ್ಲಹಳ್ಳಿ ಗ್ರಾಮದ ರಸ್ತೆಯುದ್ದಕ್ಕೂ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಗ್ರಾಮದ ಒಕ್ಕಲಿಗರ ಬೀದಿಯಲ್ಲಿ ಬೃಹತ್ ಗಾತ್ರದ ದ್ರಾಕ್ಷಿ ಹಾರವನ್ನು ಕ್ರೇನ್ ಮೂಲಕ ಹಾಕಿ, ಬೆಂಬಲ ವ್ಯಕ್ತಪಡಿಸಿದರು.

ಮೆಲ್ಲಹಳ್ಳಿ, ಹಾರೋಹಳ್ಳಿ, ಶಿವಪುರ, ಹುನುಗನಹಳ್ಳಿ, ಪಟ್ಟೆ ಹುಂಡಿ, ಮಾದೇಗೌಡನ ಹುಂಡಿ ಸೇರಿದಂತೆ ಹಲವು ಗ್ರಾಮಗಳಲ್ಲಿ ತೆರಳಿ ರೋಡ್ ಶೋ ನಡೆಸಿ, ಮತಯಾಚಿಸಿದರು.

ಈ ಸಂದರ್ಭದಲ್ಲಿ ಮುಡಾ ಮಾಜಿ ಅಧ್ಯಕ್ಷ ಸಿ. ಬಸವೇಗೌಡ, ಸಿದ್ದರಾಮಯ್ಯ ಅವರ ಆಪ್ತ ಕಾರ್ಯದರ್ಶಿ ಎಂ. ರಾಮಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಕೆಪಿಸಿಸಿ ಕಾರ್ಯದರ್ಶಿ ಗುರುಪಾದಸ್ವಾಮಿ, ವರುಣ ಮಹೇಶ್, ಜಿ.ಪಂ. ಮಾಜಿ ಸದಸ್ಯರಾದ ಕೆಂಪೀರಯ್ಯ, ಲೇಖಾ ವೆಂಕಟೇಶ್, ತಾ.ಪಂ. ಮಾಜಿ ಸದಸ್ಯರಾದ ಸಿದ್ದಯ್ಯ, ಶಿವರತ್ನ ನಾಗರಾಜು, ಎಂ.ಟಿ. ರವಿಕುಮಾರ್, ಮಂಜುಳಾ ಮಂಜುನಾಥ್, ಕೆಂಚಪ್ಪ, ಶಾಂತಮ್ಮ, ಗುರುಸ್ವಾಮಿ, ನಿವೃತ್ತ ಪ್ರಾಂಶುಪಾಲ ಸಿದ್ದಯ್ಯ, ಸಾಕಣ್ಣ, ಆನಂದ, ಗಂಗನ ತಿಮ್ಮಣ್ಣ, ಗವಿಸಿದ್ದು, ಅಹಿಂದ ಜವರಪ್ಪ, ಭುಗುತಗಳ್ಳಿ ಮಣಿ, ಪುಷ್ಪ ಬೋರೇಗೌಡ, ರಮೇಶ್ ಮುದ್ದೇಗೌಡ, ಜೆ.ಜೆ. ಆನಂದ್, ನಾಡನಹಳ್ಳಿ ರವಿ, ನಟರಾಜ್, ಬಸವರಾಜು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಇಂದು, ನಾಳೆ ಬೆಂಗಳೂರಲ್ಲಿ ಬೃಹತ್ ರೋಡ್ ಶೋ

ಉಂಟು ಮಾಡುತ್ತಾರೆ ಎಂಬ ಆರೋಪಗಳು ಕೇಳಿ ಬಂದವು. ಇದರಿಂದ ಎಚ್ಚೆತ್ತ ಸರ್ಕಾರ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಮುನ್ನೆಚ್ಚರಿಕೆ ಕ್ರಮ ಕೈಗೊಂಡರೆ, ಮತ್ತೊಂದೆಡೆ ರಾಜಕೀಯ ಪಕ್ಷಗಳು ವಿದ್ಯಾರ್ಥಿಗಳ ಸಹಾಯಕ್ಕೆ ಬಂದಿವೆ.

ಪ್ರಧಾನಿ ಮೋದಿ ಅವರು, ಎರಡು ದಿನಗಳ ಕಾಲ ನಾಳೆಯಿಂದ ಬೆಂಗಳೂರಿನಲ್ಲಿ ಬೃಹತ್ ಶೋ ನಡೆಸುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂಬ ವ್ಯಾಪಕ ದೂರು ಸಾರ್ವಜನಿಕವಾಗಿ ಕೇಳಿ ಬಂದಿರುವುದರ ಜೊತೆಗೆ ವಿಚಾರ ಹೈಕೋರ್ಟ್ ಮೆಟ್ಟಿಲು ಹತ್ತಿದೆ. ಇದನ್ನು ಗಮನದಲ್ಲಿರಿಸಿಕೊಂಡ ರಾಜ್ಯ ಬಿಜೆಪಿ, ನರೇಂದ್ರಮೋದಿ ಅವರ 'ನಮ್ಮ ಬೆಂಗಳೂರು, ನಮ್ಮ ಹೆಮ್ಮೆ' ಬೃಹತ್ ರೋಡ್ ಶೋ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆ ಮಾಡಿದೆ. ಅಷ್ಟೇ ಅಲ್ಲ ರಾಜ್ಯದ ವಿವಿಧ ಭಾಗಗಳಲ್ಲೂ ಪರೀಕ್ಷಾ ಕೇಂದ್ರಗಳ ಸಮೀಪ ಇಂತಹ ರ್‍ಯಾಲಿ ಹಾಗೂ ಸಭೆಗಳಿಗೆ ಕಡಿವಾಣ ಹಾಕಿದ್ದೇವೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾನುವಾರ ಯಾವುದೇ ವಿದ್ಯಾರ್ಥಿಗಳು ತೊಂದರೆಗೆ ಸಿಲುಕಿದರೆ ಅಂತಹ ವಿದ್ಯಾರ್ಥಿಗಳು ಪ್ರವೇಶ ಪತ್ರ ತೋರಿಸಿದರೆ, ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಿಗೆ ಪೊಲೀಸರು ಬಿಡುತ್ತಾರೆ. ಈ ಕುರಿತಂತೆ ಪೊಲೀಸರೊಂದಿಗೆ, ಎಸ್‌ಪಿಜಿಯವರೊಂದಿಗೆ ಚರ್ಚಿಸಲಾಗಿದೆ ಎಂದು ತಿಳಿಸಿದರು.

ನಾಳೆಯ ರೋಡ್ ಶೋಗೆ ಅಡ್ಡಿಪಡಿಸಲು ಕಾಂಗ್ರೆಸ್ ಷಡ್ಯಂತ್ರ ಮಾಡುತ್ತಿದೆ. ಅವರದೇ ಕಾರ್ಯಕರ್ತರ ಆಂಬುಲೆನ್ಸ್‌ಗಳನ್ನು ರೋಡ್ ಶೋ ಮಾರ್ಗದಲ್ಲಿ ಓಡಿಸುವುದಾಗಿ ತಿಳಿದು ಬಂದಿದೆ. ಈ ನಿಟ್ಟಿನಲ್ಲಿ ರೋಗಿಗಳಿರುವ ಆ್ಯಂಬುಲೆನ್ಸ್‌ಗಳನ್ನು ಪೊಲೀಸರು ಖುದ್ದು ಆಸ್ಪತ್ರೆಗಳವರೆಗೆ ಬಿಡುವಂತೆ ಮನವಿ ಮಾಡಲಾಗಿದೆ ಎಂದು ಕು.ಶೋಭಾ ಕರಂದ್ಲಾಜೆ ತಿಳಿಸಿದರು.

ಪ್ರಧಾನಮಂತ್ರಿಯವರು ನಾಳೆ ಶನಿವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30ರವರೆಗೆ ಬೆಂಗಳೂರು ದಕ್ಷಿಣದ ಸೋಮೇಶ್ವರ ಭವನ ಆರ್‌ಬಿಐ ಮೈದಾನದಿಂದ ಮಲ್ಲೇಶ್ವರದ ಸ್ಯಾಂಕಿ ಟ್ಯಾಂಕ್‌ವರೆಗೆ 26.5 ಕಿ.ಮೀ. ರೋಡ್ ಶೋ ನಡೆಸುತ್ತಾರೆ. ನಾಡಿದ್ದು ಭಾನುವಾರ ಬೆಳಿಗ್ಗೆ 10ರಿಂದ ತಿಪ್ಪಸಂದ್ರದ ಕೆಂಪೇಗೌಡ ಪ್ರತಿಮೆಯಿಂದ ಟ್ರಿನಿಟಿ ವೃತ್ತದ ವರೆಗೆ 8 ಕಿ.ಮೀ. ರೋಡ್ ಶೋ ನಡೆಯಲಿದೆ ಎಂದು ವಿವರಿಸಿದರು.

ಜೆಡಿಎಸ್ ಮುಗಿಸಲು ಬರುತ್ತಿದ್ದಾರೆ

ಆದರೆ ರೈತರ ಸಂಕಷ್ಟಕ್ಕೆ ಧಾವಿಸಿದ್ದು, ಇದೇ ಮಾಜಿ ಪ್ರಧಾನಿ ದೇವೇಗೌಡರು. ಜನರ ಕಷ್ಟ ಇವರಿಗೆ ಬೇಕಿಲ್ಲ. ಕೇವಲ ಚುನಾವಣೆಗಾಗಿ ನಿಮ್ಮ ಮತ ಪಡೆಯಲು ಬಂದಿದ್ದಾರೆ. ಆದ್ದರಿಂದ ಕಾಂಗ್ರೆಸ್, ಬಿಜೆಪಿ ನಾಯಕರ ಮನಸ್ಥಿತಿ ಅರಿಯ ಬೇಕು ಎಂದು ಹೇಳಿದರು. ರಾಜ್ಯದಲ್ಲಿ ಕನ್ನಡಿಗರ ಸರ್ಕಾರ ತರಲು ಜೆಡಿಎಸ್ ಬೆಂಬಲಿಸಬೇಕು. ಪಂಚರತ್ನ ಯೋಜನೆ ಜಾರಿ ಮಾಡಲು ಸ್ವತಂತ್ರ ಸರ್ಕಾರ ರಚಿಸಬೇಕು. ಬಡಜನರು, ರೈತರು, ಮಹಿಳೆಯರು ಹಾಗೂ ಯುವಜನರ ಉದ್ಯೋಗ ಸಮಸ್ಯೆಗೆ ಪರಿಹಾರ ನೀಡಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ಸರ್ವರಿಗೂ ಸಮಾನತೆಯ ಬದುಕು ಕಲ್ಪಿಸಲಾಗುವುದು ಎಂದರು. ಮಂಡ್ಯಕ್ಕೆ ಬಜೆಟ್‌ನಲ್ಲಿ ಹಣ ಮೀಸಲಿರಿಸಿದಾಗ ಮಂಡ್ಯ ಬಜೆಟ್ ಎಂದು ಟೀಕಿಸಿದ ಬಿಜೆಪಿಯವರು ಬಳಿಕ ಅನುದಾನವನ್ನು ಬೇರೆಡೆಗೆ ನೀಡಿ ಈಗ ಚುನಾ ವಣೆಗೆ ಬಂದಿದ್ದಾರೆ. ಚುನಾವಣಾ ಪ್ರಣಾಳಿಕೆ ಯಲ್ಲಿ ವಾರ್ಷಿಕ 3 ಸಿಲಿಂಡರ್ ಕೊಡುವ ಆಶ್ವಾಸನೆ ನೀಡಿರುವ ಬಿಜೆಪಿ ಸರ್ಕಾರ ಅಧಿಕಾರದಲ್ಲಿದಾಗ ಏಕೆ ಕೊಡಲಿಲ್ಲ ಎಂದು ಪ್ರಶ್ನಿಸಿದರು.

ಪಂಚರತ್ನ, ಐದು ಯೋಜನೆಗಳನ್ನು ರಾಜ್ಯದ ಜನರಿಗೆ ಕೊಡಲು ಸಿದ್ಧನಿದ್ದೇನೆ. ಅದಕ್ಕಾಗಿ ನಿಮ್ಮ ಬೆಂಬಲ ನೀಡುವಂತೆ ಮನವಿ ಮಾಡಿದ್ದೇನೆ. ಪಂಚ ಯೋಜನೆಗಳು ಬಡವರಿಗೆ ಅನು ಕೂಲವಾಗಲಿವೆ. 75 ವರ್ಷಗಳಲ್ಲಿ ಸಮಾನತೆ ಕೊಡುವಂಥ ಯೋಜನೆಗಳು ಯಾವುದೂ ಇಲ್ಲ. ಬಡವರು ಬಡವರಾಗಿಯೇ ಉಳಿದಿದ್ದಾರೆ. ಶ್ರೀಮಂತರು ಶ್ರೀಮಂತರಾಗಿದ್ದಾರೆ. ಐದು ಕಾರ್ಯ ಕ್ರಮಗಳ ಮುಖಾಂತರ ಬಡವರಿಗೆ ನೆರವಾಗ ಲಿವೆ ಎಂದರು. ರಾಜ್ಯದ ಎಲ್ಲ ವರ್ಗದ ಮಕ್ಕಳಿಗೆ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಖಾಸಗಿ ಶಾಲೆಯಲ್ಲೂ ದೊರೆಯುವ ಶಿಕ್ಷಣವನ್ನೇ ಉಚಿತವಾಗಿ ನೀಡಲಾಗುವುದು. ಉಚಿತವಾಗಿ 24 ಗಂಟೆಗಳ ಆರೋಗ್ಯ ಸೇವೆ, 50 ಲಕ್ಷ ರೂ. ವೆಚ್ಚದ ಚಿಕಿತ್ಸೆಗೆ ನೆರವು ನೀಡಲಾಗುವುದು. ಕೃಷಿ ಕಾರ್ಮಿಕರ ಜೀವನಕ್ಕೆ ಪ್ರತಿ ತಿಂಗಳು 2 ಸಾವಿರ ರೂ. ಬೀದಿಬದಿ ವ್ಯಾಪಾರಸ್ಥರು, ಸಣ್ಣ, ಮಧ್ಯಮ ಉದ್ಯಮಿಗಳಿಗೆ ಸಾಲ ಸೌಲಭ್ಯ, ದುಡಿ ಯುವ ಕೈಗಳಿಗೆ ಕೆಲಸ ಕೊಟ್ಟು ಸ್ವಾಭಿಮಾನಿ ಬದುಕು ಕಟ್ಟಿಕೊಳ್ಳಲು ಯೋಜನೆ ರೂಪಿಸಲಾಗುವುದು ಎಂದರು. ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಮನೆ ಇಲ್ಲದವರಿಗೆ 5 ಲಕ್ಷ ರೂ. ವೆಚ್ಚದಲ್ಲಿ ಉಚಿತ ಮನೆ ನಿರ್ಮಾಣ, 65 ವರ್ಷದ ತಂದೆ–ತಾಯಿಯರಿಗೆ ಪ್ರತಿ ತಿಂಗಳು 5 ಸಾವಿರ ರೂ., ವಿಧವೆ ಹಾಗೂ ಮದುವೆಯಾಗದ ಮಹಿಳೆಯರಿಗೆ ಪ್ರತಿ ತಿಂಗಳು 2500 ರೂ., ಸ್ತ್ರೀಶಕ್ತಿ ಸಂಘಗಳ ಸಂಪೂರ್ಣ ಸಾಲಮನ್ನಾ ಮಾಡಲಾಗುವುದು, ಶಾಲೆಗಳ ಮುಗಿಸಿ ಪದವಿ ಶಿಕ್ಷಣಕ್ಕೆ ಹೋಗುವ ವಿದ್ಯಾರ್ಥಿ ನಿಯರಿಗೆ ಎಲೆಕ್ಟ್ರಿಕಲ್ ವಾಹನಗಳನ್ನು ಪ್ರತಿ ವರ್ಷ ನೀಡುವ ಯೋಜನೆ ಜಾರಿಗೆ ತರಲಾಗುವುದು ಎಂದರು. 5 ವರ್ಷದ ಆಡಳಿತ ನಡೆಸಲು 123 ಸ್ಥಾನ ಕೊಡಿಸಿದರೆ, ಜನ ಸಾಲ ಗಾರರಾಗದೆ ಉತ್ತಮ ಜೀವನ ನಡೆಸಲು ಎಲ್ಲ ರೀತಿಯ ಸೌಲಭ್ಯ ಕಲ್ಪಿಸಲಾಗುವುದು. ಪಕ್ಷಕ್ಕೆ ಬಹುಮತ ನೀಡದಿದ್ದರೆ ಪಕ್ಷವನ್ನೇ ವಿಸರ್ಜನೆ ಮಾಡುತ್ತೇನೆ. ಜಿಲ್ಲೆಯ ಜನತೆ ಜೆಡಿಎಸ್ ಪಕ್ಷಕ್ಕೆ ಶಕ್ತಿ ತುಂಬಿದ್ದಾರೆ. ಕೊಡುಗೆ ನೀಡಿದ್ದಾರೆ. ಇದನ್ನು ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು. ಜಿಲ್ಲೆಗೆ ಬಿಜೆಪಿಯ ಏನು ಕೊಡುಗೆ ನೀಡಿದ್ದಾರೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿದ್ದಾರೆ. ಗ್ಯಾಸ್ ಸಿಲಿಂಡರ್ ಬೆಲೆ ಹೆಚ್ಚಿಸಿದ್ದಾರೆ. ವರ್ಷದಲ್ಲಿ ಐದು ಸಿಲಿಂಡರ್‌ಗಳನ್ನು ಉಚಿತವಾಗಿ ನೀಡಲಾಗುವುದು ಎಂದು ನಾವು ಘೋಷಣೆ ಮಾಡಿದ ಮೇಲೆ ಬಿಜೆಪಿಯವರು 3 ಸಿಲಿಂಡರ್‌ಗಳನ್ನು ಘೋಷಣೆ ಮಾಡಿದ್ದಾರೆ. ಈಗ ಹೇಳುತ್ತಿದ್ದಾರೆ. ಅಧಿಕಾರದಲ್ಲಿದ್ದಾಗಲೇ ಕೊಡಬಹುದಾಗಿತ್ತು. ಯಾಕೆ ನೀಡಲಿಲ್ಲ ಎಂದು ಪ್ರಶ್ನಿಸಿದರು. ಎರಡು ಬಾರಿ ಸಿಎಂ ಆಗಿದ್ದಾಗಲೂ ಜನರ ಹಣ ಲೂಟಿ ಮಾಡಿಲ್ಲ. ಕಾಂಗ್ರೆಸ್, ಬಿಜೆಪಿಯವರು ಭ್ರಷ್ಟಾಚಾರದಲ್ಲಿ ಮುಳುಗಿವೆ. ಒಬ್ಬರನ್ನೊಬ್ಬರ ಕೆಸರೆರಚಾಟ ಮಾಡಿಕೊಂಡಿವೆ. ನಾವು ಭ್ರಷ್ಟಾಚಾರ ಮಾಡದೆ ನಾಡಿನ ಗೌರವ ಕಾಪಾಡಿದ್ದೇವೆ. ಅತಂತ್ರ ಸರ್ಕಾರ ಬರುವುದು ಬೇಡ. ಸಂಪೂರ್ಣ ಬಹುಮತ ನೀಡಿ ಎಂದು ಮನವಿ ಮಾಡಿದರು.

ವೇದಿಕೆಯಲ್ಲಿ ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾಖಾನ್, ಅಭ್ಯರ್ಥಿ ಬಿ.ಆರ್.ರಾಮಚಂದ್ರ, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ನಗರಸಭಾ ಅಧ್ಯಕ್ಷ ಎಚ್.ಎಸ್.ಮಂಜು, ಮೈಷುಗರ್ ಮಾಜಿ ಅಧ್ಯಕ್ಷ ಸಿದ್ದರಾಮೇಗೌಡ ಸೇರಿದಂತೆ ಹಲವರಿದ್ದರು.

ಮೇ 8ರಿಂದ 13ರವರೆಗೆ ಯೋಗ ಕಾರ್ಯಾಗಾರ



ಮೈಸೂರು, ಮೇ 5(ಪಿಎಂ)– ಆರ್ಟ್ ಆಫ್ ಲಿವಿಂಗ್ ವತಿಯಿಂದ ಮೇ 8ರಿಂದ 13ರವರೆಗೆ ಯೋಗ ಮತ್ತು ಧ್ಯಾನ ಕುರಿತು ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಹಿನಕಲ್‌ನ ದಿ ರೂಸ್ಟ್ ಆವರಣದಲ್ಲಿ ಬೆಳಗ್ಗೆ 6.30ರಿಂದ 8.30ರವರೆಗೆ ಕಾರ್ಯಾಗಾರ ನಡೆಯಲಿದ್ದು, ವಿವರಗಳಿಗೆ ಮೊ.ಸಂ. 93421 11970, 98456 85892 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಆರ್‌ಆರ್ ವಿರುದ್ಧ ಗುಜರಾತ್‌ಗೆ ಗೆಲುವು

ಜೈಪುರ, ಮೇ 5– ರಶೀದ್ ಖಾನ್ ಹಾಗೂ ನೂರ್ ಅಹಮ್ಮದ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ಗುಜರಾತ್ ಟೈಟನ್ಸ್ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಇಲ್ಲಿನ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ 17.5 ಓವರ್‌ಗಳಲ್ಲಿ 118ರನ್‌ಗಳಿಗೆ ಸರ್ವಪತನ ಕಂಡಿತು. ತಂಡದ ಪರ ಯಶಸ್ವಿ ಜೈಸ್ವಾಲ್ 14, ನಾಯಕ ಸಂಜು ಸ್ಯಾಮ್ಸನ್ 30, ದೇವದತ್ ಪಡಿಕ್ಕಲ್ 12, ಟ್ರೆಂಟ್ ಬೌಲ್ಟ್ 15ರನ್ ಗಳಿಸಿದರು. ಗುಜರಾತ್ ಪರ ರಶೀದ್ ಖಾನ್ 3, ನೂರ್ ಅಹಮ್ಮದ್ 2, ಜೋಷುವಾ ಲಿಟಲ್, ಹಾರ್ದಿಕ್ ಪಾಂಡ್ಯ ಹಾಗೂ ಮೊಹಮ್ಮದ್ ಶಮಿ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ರಾಜಸ್ಥಾನ್ ನೀಡಿದ ಸಾಧಾರಣ ಗುರಿ ಬೆನ್ನತ್ತಿದ ಗುಜರಾತ್ ಟೈಟನ್ಸ್ 13.5 ಓವರ್‌ಗಳಲ್ಲಿ 119 ರನ್ ಸಿಡಿಸುವ ಮೂಲಕ ಜಯ ಗಳಿಸಿತು. ತಂಡದ ಪರ ಶುಭ್‌ಮನ್ ಗಿಲ್ 36ರನ್ ಗಳಿಸಿ ಔಟಾದರೆ, ವೃದ್ಧಿಮಾನ್ ಸಹಾ 41, ಹಾರ್ದಿಕ್ ಪಾಂಡ್ಯ 39 ರನ್ ಗಳಿಸಿ ಅಜೇಯರಾಗಿ ಉಳಿ ಯುವ ಮೂಲಕ ತಂಡಕ್ಕೆ ಜಯ ತಂದುಕೊಟ್ಟರು. ರಾಜಸ್ಥಾನ್ ಪರ ಯಜುವೇಂದ್ರ ಚಹಲ್ 1 ವಿಕೆಟ್ ಪಡೆದರು. ರಶೀದ್ ಖಾನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ತನ್ವೀರ್ ಸೇಠ್‌ರಿಂದ ಗಾಂಧಿನಗರ ಅಭಿವೃದ್ಧಿ ನಿರ್ಲಕ್ಷ್ಯ

ಕಾರ್ಪೊರೇಟರ್ ಡಾ. ಅಶ್ವಿನಿ ಶರತ್ ಆರೋಪ

ಮೈಸೂರು,ಮೇ 5(ಜಿಎ)–ಶಾಸಕ ತನ್ವೀರ್ ಸೇಠ್ ಅವರು ವಾರ್ಡ್ ನಂ28ರ ಗಾಂಧಿನಗರವನ್ನು ಅಭಿವೃದ್ಧಿ ವಿಚಾರದಲ್ಲಿ ಕಡೆಗಣಿಸಿದ್ದಾರೆ ಎಂದು ನಗರ ಪಾಲಿಕೆ ಸದಸ್ಯೆ ಡಾ.ಅಶ್ವಿನಿ ಶರತ್ ಆರೋಪಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2018ರಿಂದ 2023ರವರೆಗೂ ಶಾಸಕ ತನ್ವೀರ್ ಸೇಠ್ ಕ್ಷೇತ್ರದ ಬೇರೆ ಎಲ್ಲಾ ವಾರ್ಡ್‌ಗಳಿಗೆ ಅನುದಾನವನ್ನು ನೀಡಿದ್ದಾರೆ. ಆದರೆ ಗಾಂಧಿನಗರಕ್ಕೆ ಮಾತ್ರ ಈವರೆಗೂ ಯಾವುದೇ ಅನುದಾನ ನೀಡಿಲ್ಲ. ಈ ಸಂಬಂಧ 2022ರ ಜೂನ್ ನಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಿಂದ ಅನುದಾನಗಳ ಬಗ್ಗೆ ಮಾಹಿತಿ ಪಡೆದಿರುವುದಾಗಿ ತಿಳಿಸಿದರು.

ವಿಪರೀತ ಮಳೆಯಿಂದ 2021ರಲ್ಲಿ ಮನೆಗಳನ್ನು ಕಳೆದುಕೊಂಡ ಗಾಂಧಿನಗರದ ನಾಗರಿಕರಿಗೆ ಸರ್ಕಾರದಿಂದ ನೆರೆ ಪರಿಹಾರ ಕೊಡಿಸಿಲ್ಲ, ಕೋವಿಡ್ ಸಂದರ್ಭದಲ್ಲಿ ಸಹಾಯ ಮಾಡಿಲ್ಲ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ವೃತ್ತವನ್ನು ಸೌಂದರ್ಯಕರಣ ಮಾಡಲು ಅನುದಾನ ಸೇರಿದಂತೆ ಯಾವುದೇ ಅನುದಾನವನ್ನು ಶಾಸಕರು ನೀಡಿಲ್ಲ. ಆದ್ದರಿಂದ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಸಂದೇಶ ಸ್ವಾಮಿ ಅವರನ್ನು ಬೆಂಬಲಿಸಿ, ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಪಡೆದು ಅಭಿವೃದ್ಧಿ ಪಡಿಸೋಣ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಅನಿಲ್ ಥಾಮಸ್, ಎಸ್.ಸಿ.ಮೋರ್ಚಾ ರಾಜ್ಯ ಕಾರ್ಯದರ್ಶಿ ಎಂ.ಎಸ್.ಪರಮಾನಂದ, ಗಾಂಧಿನಗರ ನಾಗರೀಕರ ಹಿತರಕ್ಷಣ ಸಮಿತಿ ಅಧ್ಯಕ್ಷ ಶರತ್ ಸತೀಶ್, ಪೌರಕಾರ್ಮಿಕ ಕಾಲೋನಿ ಮುಖಂಡ ಸುರೇಂದ್ರ ಉಪಸ್ಥಿತರಿದ್ದರು.



ಕೆ.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್. ಶ್ರೀವತ್ಸ ಅವರು ಶ್ರೀರಾಂಪುರ, ಕಂದಾಯನಗರ ಬಡಾವಣೆಯಲ್ಲಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿದರು. ಈ ವೇಳೆ ಕಾರ್ಪೊರೇಟರ್ ಗೀತಾ ಯೋಗಾನಂದ ಇನ್ನಿತರರಿದ್ದರು.



ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ. ಹರೀಶ್‌ಗೌಡ, ಸೊಪ್ಪಿನಕೇರಿ, ಪಟ್ಟೇಗಾರ ಬೀದಿ, ಕಾಮಾಟಗೇರಿಗಳಲ್ಲಿ ಪಾದಯಾತ್ರೆ ನಡೆಸಿ ಮತ ಯಾಚಿಸಿದರು. ಈ ಸಂದರ್ಭದಲ್ಲಿ ಸುಂದರಕುಮಾರ್, ನಂಜುಂಡಿ, ಇಮ್ರಾನ್, ಖಲೀಂ, ಪರಮೇಶ್, ವೆಂಕಟೇಶ್, ಉಮೇಶ್, ರವಿ, ಶೇಖರ, ಮಂಜಣ್ಣ, ಹೇಮಾ, ಮಂಜುಳಾ, ಮಂಜು, ಕುಮಾರಿ, ಮೆಂಕಿ, ನಿರಂಜನ್, ಬಾಲರಾಜು, ಇಬ್ರಾಹಿಂ, ವೆಂಕಟೇಶ್ ಗಾಣಿಗ ಹಾಜರಿದ್ದರು.

ಬಡವರು, ಸಂವಿಧಾನ ಉಳಿಯಲು ಕಾಂಗ್ರೆಸ್ ಬೆಂಬಲಿಸಿ: ಪ್ರೊ. ಮಹೇಶ್ ಚಂದ್ರ ಗುರು



ಮೈಸೂರು,ಮೇ 5(ಜಿಎ)– ಬಡವರು ಹಾಗೂ ಸಂವಿಧಾನ ಉಳಿಯಬೇಕಾದರೆ ಕಾಂಗ್ರೆಸ್ ಬೆಂಬಲಿಸಿ ಬಿಜೆಪಿಯನ್ನು ಸೋಲಿಸಬೇಕು ಎಂದು ಪ್ರೊ. ಮಹೇಶ್ ಚಂದ್ರ ಗುರು ಹೇಳಿದರು. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್, ಬಸವಣ್ಣ, ಲೋಹಿಯಾ, ಗಾಂಧೀಜಿ, ದೇವರಾಜ ಅರಸು, ರಾಮಕೃಷ್ಣ ಹೆಗ್ಡೆ ಸೇರಿದಂತೆ ಹಲವಾರು ಮಹನೀಯರು ರಾಜ್ಯವನ್ನು ಈಗಾಗಲೇ ಮಾದರಿ ರಾಜ್ಯವನ್ನಾಗಿ ಮಾಡಿದ್ದಾರೆ. ಆದರೆ, ಮೋದಿ ಅವರು ಭಾರತವನ್ನು ಪ್ರಭುತ್ವದ ರಾಷ್ಟ್ರ ಮಾಡುತ್ತೇನೆಂದು ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ ಎಂದು ದೂರಿದರು.

ಭಾರತವು ಮಾನವ ಅಭಿವೃದ್ಧಿ, ಲಿಂಗ ತಾರತಮ್ಯ ಸೂಚ್ಯಂಕದಲ್ಲಿ ಕಡೇ ಸ್ಥಾನದಲ್ಲಿದ್ದು, ಆರೋಗ್ಯದಲ್ಲಿ ಕಡೆಗಿಂತ ಒಂದು ಹಂತ ಕಡಿಮೆಯಲ್ಲಿದೆ. ಮುಂದಿನ ದಿನಗಳಲ್ಲಿ ಅದು ಕಡೆಯ ಹಂತಕ್ಕೆ ತಲುಪಲಿದೆ. ನೆಹರು, ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂದಿ ಅವರು ತಮ್ಮ ಅವಧಿಯಲ್ಲಿ ಅನೇಕ ಅಭಿವೃದ್ಧಿ ಮತ್ತು ವಿಶೇಷ ಯೋಜನೆಗಳ ಮೂಲಕ ಪ್ರಭುತ್ವದ ಭಾರತ ಮಾಡಿದ್ದಾರೆ. ಅದೇ ಸಾಲಿನಲ್ಲಿ ಸಿದ್ದರಾಮಯ್ಯ ಅವರು ಕಾಣಿಸುತ್ತಿದ್ದು, ಅವರನ್ನು ಬೆಂಬಲಿಸುವುದು ಉತ್ತಮವಾಗಿದೆ ಎಂದರು.

ರಾಷ್ಟ್ರೀಯ ಹಕ್ಕುಗಳು ಹಾಗೂ ಸಾಮಾಜಿಕ ನ್ಯಾಯ ಸಮಿತಿ ರಾಷ್ಟ್ರಾಧ್ಯಕ್ಷ ಮಂಟೆಲಿಂಗಯ್ಯ ಮಾತನಾಡಿ, ವಿಚಾರ ವಾದಿಗಳು ಮತ್ತು ಬುದ್ದಿ ಜೀವಿಗಳು ಮತದ ಮೌಲ್ಯದ ಬಗ್ಗೆ ಜನ ಜಾಗೃತಿ ಮೂಡಿಸುವುದರೊಂದಿಗೆ ಕಾಂಗ್ರೆಸ್‌ಅನ್ನು ಬೆಂಬಲಿ ಸುತ್ತಿದ್ದಾರೆ ಎಂದರು. ಸಂವಿಧಾನ ರಕ್ಷಣೆ, ಸಾಮಾಜಿಕ ನ್ಯಾಯ, ಶೋಷಿತ ಸಮುದಾಯಗಳ ರಕ್ಷಣೆಗಾಗಿ ಮತ ಮೌಲ್ಯದ ಬಗ್ಗೆ ಜನ ಜಾಗೃತಿ ಮೂಡಿಸುತ್ತಿದ್ದೇವೆ. ಜೊತೆಗೆ ಸಮ ಸಮಾಜದ ಆಡಳಿತಕ್ಕಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಮೈಸೂರಿನ 11 ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ರಾಜ್ಯಾಧ್ಯಕ್ಷ ಪಿ.ಕುಮಾರ್, ಜಿಲ್ಲಾಧ್ಯಕ್ಷ ಕೆ.ನಂಜಪ್ಪ, ಸತೀಶ್, ಕೆ.ವೀರಭದ್ರ ಮತ್ತು ಶ್ರೀನಿವಾಸ್ ಉಪಸ್ಥಿತರಿದ್ದರು.



ವರುಣ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಡಾ. ಭಾರತಿ ಶಂಕರ್ ತಾಯೂರು, ಬೆಳಗಲಿ, ಸುತ್ತೂರು, ಹೊಸಕೋಟೆ, ತುಂಬನೇರಳೆ. ಗ್ರಾಮಗಳಿಗೆ ಭೇಟಿ ನೀಡಿ ಮತಯಾಚಿಸಿದರು. ಈ ವೇಳೆ ವರುಣ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ತಾಯೂರು ಪ್ರಕಾಶ್, ಮತ್ತಿತರರು ಹಾಜರಿದ್ದರು.



ವರುಣಾ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಸಿಎಂ ಸಿದ್ದರಾಮಯ್ಯ ಪರ ಕೆಪಿಸಿಸಿ ಹಿಂದುಳಿದ ವರ್ಗ ವಿಭಾಗದಿಂದ ಮತಯಾಚಿಸಲಾಯಿತು. ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್, ಚಲನಚಿತ್ರ ನಟ ಎಂ.ಎಸ್.ಮುತ್ತುರಾಜ್ ಮತ್ತಿತರರಿದ್ದರು.

ಮೈಸೂರಲ್ಲಿ ಕುತೂಹಲಕಾರಿ ಮತ ಜಾಗೃತಿ; ವಿಂಟೇಜ್ ಕಾರ್ ರ್‍ಯಾಲಿ



18 ಟಾಂಗಾ, ಅಂಬಾರಿ ಬಸ್ ಭಾಗಿ







ಮೈಸೂರು, ಮೇ 5(ಆರ್‌ಕೆ)– ಮೇ 10ರಂದು ನಡೆಯಲಿರುವ 2023ರ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಮತ ಪ್ರಮಾಣ ಹೆಚ್ಚಿಸಲು ಮೈಸೂರು ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಹಲವು ಕಾರ್ಯಕ್ರಮಗಳ ಮೂಲಕ ಜನ ಜಾಗೃತಿ ಮೂಡಿಸಲಾಗುತ್ತಿದೆ.

ಅದರ ಮುಂದುವರೆದ ಭಾಗವಾಗಿ ಇಂದು ಮೈಸೂರಿನಲ್ಲಿ ವಿಂಟೇಜ್ ಕಾರ್ ರ್‍ಯಾಲಿ ನಡೆಸಲಾಯಿತು. ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಆರಂಭವಾದ ರ್‍ಯಾಲಿಗೆ ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಜಿಲ್ಲಾ ಸ್ವೀಪ್ ಕಮಿಟಿ ನೋಡಲ್ ಅಧಿಕಾರಿ ಕೆ.ಎಂ. ಗಾಯತ್ರಿ, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜು, ಪರಿಸರ ಇಂಜಿನಿಯರ್‌ಗಳಾದ ಮೈತ್ರಿ, ಶ್ರೀದೇವಿ, ಯೂತ್ ಐಕಾನ್ ಖುಷಿ, ಐಕಾನ್ ಮಹೇಂದ್ರ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದು, ವಿಂಟೇಜ್ ಕಾರುಗಳಲ್ಲಿ ಕುಳಿತು ರ್‍ಯಾಲಿಯಲ್ಲಿ ಪಾಲ್ಗೊಂಡರು.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭವಾದ ವಿಂಟೇಜ್ ಕಾರ್ ರ್‍ಯಾಲಿಯು, ಕೆ.ಆರ್. ಸರ್ಕಲ್, ಡಿ. ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ರೈಲು ನಿಲ್ದಾಣ ಸರ್ಕಲ್, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ಸಯ್ಯಾಜಿರಾವ್ ರಸ್ತೆ, ಕೆಆರ್ ಸರ್ಕಲ್ ಮೂಲಕ ಮರಳಿ ಅರಮನೆ ಉತ್ತರ ದ್ವಾರ ತಲುಪಿತು.

15 ವಿಂಟೇಜ್ ಕಾರುಗಳು, 18 ಟಾಂಗಾಗಳು, 1 ಕೆಎಸ್‌ಟಿಡಿಸಿ ಅಂಬಾರಿ ಬಸ್, 1 ಪಾಲಿಕೆ ಅಭಯ ವಾಹನ ರ್‍ಯಾಲಿಯಲ್ಲಿ ಪಾಲ್ಗೊಂಡವು. ಕೆ. ಗೋಪಿಕಿರಣ ಅವರ 1980ರ ಮಾಡೆಲ್ ಮರ್ಸಿಡಿಸ್ ಬೆನ್ಜ್ W123, 1962 ಓಕ್ಸ್‌ವ್ಯಾಗನ್ ಬೀಟಲ್, 1970ರ ಫಿಯೆಟ್–500, 1955ರ ಫಿಯೆಟ್ ಟೋಪೊಲಿನ, 1950ರ ಬೆಡ್‌ಫೋರ್ಡ್ (ಮಾಲೀಕರು ಶ್ರೀನಿವಾಸ ಚಕ್ರವರ್ತಿ), ಗೋಪಿನಾಥ ಶೆಣೈ ಅವರ 1871ರ ಮಾಡೆಲ್‌ನ ಲ್ಯಾಂಡ್ ರೋವರ್ ಸೀರೀಸ್ 3 ಪಿಕ್‌ಅಪ್, ಎಂ.ಟಿ. ಶಿವಕುಮಾರ್ ಮಾಲೀಕತ್ವದ 1972ರ ಮಾಡೆಲ್‌ನ ಪ್ರೀಮಿಯರ್ ಪ್ರೆಸಿಡೆಂಟ್, ರವಿಕಿರಣ ಅವರಿಗೆ ಸೇರಿದ 1982ರ ಮಾಡೆಲ್‌ನ ಮರ್ಸಿಡಿಸ್ ಬೆನ್ಜ್ W123, ಬಿಸ್ವೇಶ್ವರ ಪಾತ್ರ ಅವರ 1962ರ ಮಾದರಿಯ ವಿಲ್ಲಿಸ್ ಸಿಜೆ 329, ಗೋವಿಂದ ಜೆ. ಶೆಣೈ ಅವರ 1969ರ ಮಾದರಿಯ ಮಾರಿಸ್ ಕೂಪರ್, ಎನ್. ಪ್ರಸನ್ನ ಅವರ 1984 ಮಾಡೆಲ್‌ನ ಮರ್ಸಿಡಿಸ್ ಬೆನ್ಜ್ W126 300SD, ಟಿ.ಟಿ. ರಾಜೇಶ್ ಅವರ 1969 ಮಾಡೆಲ್‌ನ ಜೀಪ್, ಸಿದ್ಧಾರ್ಥ ದೇಶಕ್ ಅವರ 1985ರ ಮಾಡೆಲ್‌ನ ಪ್ರೀಮಿಯರ್ ಪದ್ಮಿನಿ, ಉಸ್ಮಾನ್ ಅವರಿಗೆ ಸೇರಿದ 1989ರ ಮಾದರಿಯ ಪ್ರೀಮಿಯರ್ ಪದ್ಮಿನಿ ಕಾರುಗಳು ಇಂದಿನ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದವು.

ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ನೇತೃತ್ವದಲ್ಲಿ ದೇವರಾಜ ಸಂಚಾರ ಠಾಣೆ ಪೊಲೀಸರು ಮಾರ್ಗದುದ್ದಕ್ಕೂ ಹಾಜರಿದ್ದು ವಿಂಟೇಜ್ ಕಾರ್ ರ್‍ಯಾಲಿ ಸುಗಮವಾಗಿ ಸಾಗಲು ಅನುವು ಮಾಡಿಕೊಟ್ಟರು. 'ತಪ್ಪದೇ ಮತದಾನ ಮಾಡಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಿ' ಎಂಬ ಸಂದೇಶ ಸಾರುವ ಘೋಷಣಾ ಫಲಕವನ್ನು ರ್‍ಯಾಲಿಯಲ್ಲಿ ಪ್ರದರ್ಶಿಸಲಾಯಿತು.

ರಾಜ್ಯದಲ್ಲಿ ಸುಭದ್ರ ಆಡಳಿತಕ್ಕೆ ಬಿಜೆಪಿ ಬೆಂಬಲಿಸಿ

ಕೆ.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸ



ಮೈಸೂರು, ಮೇ 5– ರಾಜ್ಯದಲ್ಲಿ ಸುಭದ್ರ ಆಡಳಿತಕ್ಕಾಗಿ ಬಿಜೆಪಿ ಬೆಂಬಲಿಸುವಂತೆ ಕೆ.ಆರ್.ಕ್ಷೇತ್ರದ ಪಕ್ಷದ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಮನವಿ ಮಾಡಿದರು.

ಮೈಸೂರಿನ ಇಟ್ಟಿಗೆಗೂಡು 52ನೇ ವಾರ್ಡಿನಲ್ಲಿ ಶುಕ್ರವಾರ ಪ್ರಚಾರ ನಡೆಸಿ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕೈ ಬಲಪಡಿಸಲು ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಬಾರಿ ಮತಗಳಿಂದ ಗೆಲ್ಲಿಸುವಂತೆ ಕೋರಿದರು. ಪಕ್ಷದ ಒಬ್ಬ ಸಾಮಾನ್ಯ ಕಾರ್ಯಕರ್ತನಿಗೆ ಚುನಾವಣೆಯಲ್ಲಿ ಸ್ಪರ್ಧಿಸಿ, ಜನಸೇವೆ ಮಾಡಲು ಅವಕಾಶ ನೀಡಿರುವುದು ಬಿಜೆಪಿಯಿಂದ ಮಾತ್ರ ಸಾಧ್ಯ. ಹೀಗಾಗಿ ಕಾರ್ಯಕರ್ತರ ಸಂಘಟನಾತ್ಮಕ ಹೋರಾಟದ ಮೂಲಕ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ನಗರಪಾಲಿಕ ಸದಸ್ಯರಾದ ಛಾಯಾದೇವಿ, ಗೋಕುಲ್ ಗೋವರ್ಧನ್, ವಾರ್ಡ್ ಅಧ್ಯಕ್ಷ ಜನಾರ್ಧನ್, ಪ್ರಧಾನ ಕಾರ್ಯದರ್ಶಿ ಹೊಯ್ಸಳ, ನಗರ ಉಪಾಧ್ಯಕ್ಷ ಪ್ರಸನ್ನ, ನಗರ ಪಾಲಿಕೆ ಮಾಜಿ ಸದಸ್ಯೆ ವನಿತಾ, ಮುಖಂಡರಾದ ವಿನಯ್, ನಿತಿನ್, ಹರ್ಷ, ನವೀನ್, ಕೃಷ್ಣ, ಲಕ್ಷ್ಮಣ್, ಹಾಗೂ ಇನ್ನಿತರರಿದ್ದರು.



ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಮೈಸೂರಿನ ಜಯಲಕ್ಷ್ಮಿಪುರಂ ನಿವಾಸದಲ್ಲಿ ಶುಕ್ರವಾರ ಬೌದ್ಧ ಪೌರ್ಣಮಿ ಆಚರಿಸಲಾಯಿತು.

ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ: ಗೃಹಿಣಿ ಸಾವು

ಮಲ್ಲುಂಡಿ, ಮೇ 5– ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಹಿಂಬದಿ ಕುಳಿತಿದ್ದ ಪತ್ನಿ ಸಾವನ್ನಪ್ಪಿ, ಪತಿ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಹಾಡ್ಯದಹುಂಡಿ ಗ್ರಾಮದ ಬಳಿ ನಡೆದಿದೆ.

ನಂಜನಗೂಡು ತಾಲೂಕಿನ ಹಲ್ಲರೆ ಗ್ರಾಮದ ನಿವಾಸಿ ಮದನ್ ಅವರ ಪತ್ನಿ ಪೂಜಾ(20) ಮೃತಪಟ್ಟವರು. ಕಳೆದ 2 ತಿಂಗಳ ಹಿಂದೆ ಮದನ್ ಅವರೊಂದಿಗೆ ವಿವಾಹವಾಗಿದ್ದ ಪೂಜಾ, ಶುಕ್ರವಾರ ಬೆಳಗ್ಗೆ ತನ್ನ ಪತಿ ಜೊತೆ ಬೈಕ್‌ನಲ್ಲಿ ಮುತ್ತಿಗೆಹುಂಡಿ ಗ್ರಾಮದ ಸಂಬಂಧಿಕರ ಮನೆಯಲ್ಲಿ ಆಯೋಜಿಸಿದ್ದ ಪೂಜೆಗೆಂದು ತೆರಳುತ್ತಿದ್ದರು. ಈ ವೇಳೆ ಹೆಡಿಯಾಲ ಕಡೆಯಿಂದ ಸಾರಿಗೆ ಬಸ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಪೂಜಾ ಸ್ಥಳದಲ್ಲೇ ಸಾವನ್ನಪ್ಪಿದರೇ, ಅವರ ಪತಿ ಮದನ್ ತೀವ್ರ ಗಾಯಗೊಂಡು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅತ್ಯಧಿಕ ಮತಗಳಿಂದ ಜಿಟಿಡಿ ಗೆಲ್ಲಿಸಲು ಮಾಜಿ ಸಿಎಂ ಕುಮಾರಸ್ವಾಮಿ ಮನವಿ

● ಚಾಮುಂಡೇಶ್ವರಿ ಕ್ಷೇತ್ರದ ಹಲವು ಗ್ರಾಮಗಳಲ್ಲಿ ರೋಡ್ ಶೋ ● ಜಿಟಿಡಿ, ಜಿ.ಡಿ.ಹರೀಶ್‌ಗೌಡ ಸಾಥ್

ಮೈಸೂರು, ಮೇ 5(ಎಂಕೆ)– ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹಾಗೂ ಮಾಜಿ ಸಚಿವರಾದ ಜಿ.ಟಿ.ದೇವೇಗೌಡರಿಗೆ ಮತ ನೀಡಿ, ಅವರನ್ನು ಅತೀ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮತದಾರರಲ್ಲಿ ಮನವಿ ಮಾಡಿದರು

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ರಮ್ಮನಹಳ್ಳಿ, ಉದ್ಬೂರು, ಬೋಗಾದಿ, ಹಿನಕಲ್, ಹೂಟಗಳ್ಳಿ, ಕೂರ್ಗಳ್ಳಿ, ಬೆಳವಾಡಿ ಹಾಗೂ ಇಲವಾಲದಲ್ಲಿ ಶುಕ್ರವಾರ ಭರ್ಜರಿ ರೋಡ್ ಶೋ ನಡೆಸಿದ ಅವರು, ಮೇ 10ನೇ ತಾರೀಖಿನ ಮತದಾನದ ದಿನದಂದು ಭತ್ತದ ತೆನೆ ಹೊತ್ತಿರುವ ಮಹಿಳಾ ಗುರ್ತಿಗೆ ಮತ ನೀಡುವ ಮೂಲಕ ಆಶೀರ್ವಾದ ಮಾಡಿ. ಮತ್ತೊಮ್ಮೆ ಈ ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬರಲು ಅವಕಾಶ ಮಾಡಿಕೊಡಿಕೊಡಬೇಕು ಎಂದರು.

ಪಂಚರತ್ನ ಯೋಜನೆಗಳ ಮುಖಾಂತರ ನಾಡಿನ ಪ್ರತಿ ಕುಟುಂಬಗಳ ಬದುಕಿಗೆ ಆಸರೆ ನೀಡುವುದು. ಯುವಕರ ಹಾಗೂ ಮಹಿಳೆಯರ ಸ್ವಾವಲಂಬಿ ಉದ್ಯೋಗ. ಮನೆ ಇಲ್ಲದ ಪ್ರತಿ ಕುಟುಂಬಕ್ಕೆ ಮನೆ ಕಲ್ಪಿಸಿ ಕೊಡುವುದು. ಪ್ರತಿ ಕುಟುಂಬದ ಮಕ್ಕಳಿಗೆ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ. ಆಸ್ಪತ್ರೆಯ ಖರ್ಚು ವೆಚ್ಚಗಳನ್ನು ಸರ್ಕಾರವೇ ಸಂಪೂರ್ಣವಾಗಿ ಭರಿಸುವುದು. 65 ವರ್ಷ ಮೇಲ್ಪಟ್ಟ ಹಿರಿಯ ತಂದೆ–ತಾಯಂದಿರು ಬದುಕಿರುವವರೆಗೂ 5000 ರೂ. ಗೌರವ ಧನ. ವಿದವಾ ತಾಯಂದಿರಿಗೆ ಮತ್ತು ಅಂಗವಿಕಲರಿಗೆ 2,500 ರೂ. ಗ್ಯಾಸ್ ಬೆಲೆ ಏರಿಕೆ ಹಿನ್ನೆಲೆ ಸರ್ಕಾರದಿಂದಲೇ ವರ್ಷಕ್ಕೆ 5 ಉಚಿತ ಗ್ಯಾಸ್ ಸಿಲಿಂಡರ್ ನೀಡುವುದು. ಸ್ವ–ಸಹಾಯ ಗುಂಪುಗಳ ಸಂಪೂರ್ಣ ಸಾಲಮನ್ನಾ ಸೇರಿದಂತೆ ಹತ್ತು–ಹಲವು ಯೋಜನೆಗಳನ್ನು ಜಾರಿಗೆ ತರಲು ಹೊರಟಿದ್ದೇವೆ. ಇದಕ್ಕೆ ನಿಮ್ಮೆಲ್ಲರ ಆಶೀರ್ವಾದ ಬೇಕಾಗಿದೆ ಎಂದರು.



ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಶಾಸಕ ಜಿ.ಟಿ.ದೇವೇಗೌಡರ ಪರ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಉದ್ಬೂರಿನಲ್ಲಿ ರೋಡ್ ಶೋ ನಡೆಸಿದರು. ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ 2006 ರಿಂದಲೂ ಜೆಡಿಎಸ್‌ಗೆ ಬೆಂಬಲ ನೀಡಲಾಗುತ್ತಿದೆ. ಕ್ಷೇತ್ರದ ಜನರು ನನ್ನನ್ನು ತಮ್ಮ ಕುಟುಂಬದಲ್ಲಿ ಒಬ್ಬರಂತೆ ಕಾಣುತ್ತಿದ್ದಾರೆ. ಕುಟುಂಬಸ್ಥರೆಲ್ಲರೂ ಸೇರಿ ಜಿ.ಟಿ.ದೇವೇಗೌಡರನ್ನು ಅತೀ ಹೆಚ್ಚು ಮತಗಳ ಅಂತರದಲ್ಲಿ ಜಯಶೀಲರನ್ನಾಗಿ ಮಾಡಬೇಕು. ಈ ಮೂಲಕ ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬರಬೇಕು ಎಂದು ಹೇಳಿದರು.

ದೇವರ ಹೆಸರೇಳಿ ಜೆಡಿಎಸ್‌ಗೆ ಮತ: ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಜಿ.ಟಿ.ದೇವೇಗೌಡ ಮಾತನಾಡಿ, ಮೇ 10ನೇ ತಾರೀಖು ಕ್ಷೇತ್ರದ ಪ್ರತಿಯೊಬ್ಬ ಮತದಾರರು ಮತಗಟ್ಟೆಗೆ ಬಂದು ದೇವರ ಹೆಸರೇಳಿ ಜೆಡಿಎಸ್‌ಗೆ ಮತ ನೀಡುವ ಮೂಲಕ ಕುಮಾರಣ್ಣ ಮತ್ತೆ ಮುಖ್ಯಮಂತ್ರಿಯಾಗುವಂತೆ ಆಶೀರ್ವದಿಸಿ ಎಂದು ಮನವಿ ಮಾಡಿಕೊಂಡರು.

ಹುಣಸೂರನ್ನು ಸರ್ವಾಂಗೀಣ ಅಭಿವೃದ್ಧಿ ಮಾಡುತ್ತೇನೆ...

ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 15 ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಕುಡಿಯುವ ನೀರು, ರಸ್ತೆ, ಚರಂಡಿ ಸೇರಿದಂತೆ ಹಲವಾರು ಸಮಸ್ಯೆಗಳಿವೆ. ಹಾಗಾಗಿ ಹುಣಸೂರು ತಾಲೂಕಿನ ಅಭಿವೃದ್ಧಿಗಾಗಿ ಮತದಾರರು ಬದಲಾವಣೆ ಬಯಸಿದ್ದಾರೆ. ಯುವಕರಿಗೆ ಆಶೀರ್ವಾದ ಮಾಡಲು ನಿರ್ಧರಿಸಿದ್ದಾರೆ. ಹರೀಶ್‌ಗೌಡರಿಂದ ಹುಣಸೂರು ಸರ್ವಾಂಗೀಣ ಅಭಿವೃದ್ಧಿಯಾಗಲಿದೆ ಎಂದು ಬೆಂಬಲ ನೀಡಿದ್ದಾರೆ.

– **ಜಿ.ಡಿ.ಹರೀಶ್‌ಗೌಡ,** ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ

ಉತ್ತಮ ಸ್ಪಂದನೆ...

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮತದಾರರ ಉತ್ತಮ ಸ್ಪಂದನೆ ಇದೆ. ಎಲ್ಲರೂ ಜೆಡಿಎಸ್ ಪರವಾಗಿದ್ದಾರೆ. ಜೆಡಿಎಸ್‌ನಲ್ಲಿದ್ದವರು ಬೇರೆ ಬೇರೆ ಪಕ್ಷಗಳಿಗೆ ಹೋಗುತ್ತಿದ್ದಾರೆ ಎಂಬುದೆಲ್ಲಾ ಸುಳ್ಳು. ಯಾರು ಕೂಡ ಪಕ್ಷ ಬಿಟ್ಟು ಹೋಗುತ್ತಿಲ್ಲ.

– **ಜಿ.ಟಿ.ದೇವೇಗೌಡ,** ಜೆಡಿಎಸ್ ಅಭ್ಯರ್ಥಿ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಕಿಕ್ಕಿರಿದು ತುಂಬಿದ ಜನ: ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ರಮ್ಮನಹಳ್ಳಿ, ಉದ್ಬೂರು, ಬೋಗಾದಿ, ಹಿನಕಲ್, ಹೂಟಗಳ್ಳಿ, ಕೂರ್ಗಳ್ಳಿ, ಬೆಳವಾಡಿ ಹಾಗೂ ಇಲವಾಲಕ್ಕೆ ಬರುತ್ತಿದ್ದಂತೆಯೇ ಕಿಕ್ಕಿರಿದು ತುಂಬಿದ ಗ್ರಾಮಸ್ಥರು ಆತ್ಮೀಯವಾಗಿ ಸ್ವಾಗತಿಸಿದರು. ರೋಡ್ ಶೋ ಮಾರ್ಗದುದ್ದಕ್ಕೂ ಜೈಕಾರ ಕೂಗಿ ಅಭಿಮಾನ ಮೆರೆದರು. ಕಟ್ಟಡಗಳಿಂದ ಮೇಲಿಂದ ಹೂ ಮಳೆ ಸುರಿಸಿದರಲ್ಲದೆ ಕೆಂಪು ನೀರು ಮಾಡಿ ದೃಷ್ಟಿ ತೆಗೆದರು.

ಪೊಲೀಸರು ಹೈರಾಣ: ಕಿಕ್ಕಿರಿದು ತುಂಬಿದ್ದ ಜನರನ್ನು ನಿಯಂತ್ರಿಸುವಲ್ಲಿ ಬಂದೋಬಸ್ತ್‌ನಲ್ಲಿದ್ದ ಪೊಲೀಸರು ಹೈರಾಣಾದರು. ಆಯಾ ಗ್ರಾಮ ವ್ಯಾಪ್ತಿಯ ಪೊಲೀಸ್ ಠಾಣೆಯ ಅಧಿಕಾರಿ, ಸಿಬ್ಬಂದಿಗಳು ಹಾಗೂ ಭದ್ರತೆಗಾಗಿ ನಿಯೋಜಿಸಿರುವ ಸಿಐಎಸ್‌ಎಫ್ ಸಿಬ್ಬಂದಿಗಳು ಕಾರ್ಯಕರ್ತರು, ಅಭಿಮಾನಿಗಳನ್ನು ನಿಯಂತ್ರಿಸುವಲ್ಲಿ ಸುಸ್ತಾದರು. ಮಾಜಿ ಮೇಯರ್ ರವಿಕುಮಾರ್ ಸೇರಿದಂತೆ ಜೆಡಿಎಸ್ ಮುಖಂಡರು ಸಾಥ್ ನೀಡಿದರು.

ಮೈಸೂರು ಮಿತ್ರ ಶನಿವಾರ 6 ಮೇ 2023

ಬಿಜೆಪಿಯಿಂದ 'ಗ್ರೇಟರ್ ಮಡಿಕೇರಿ ಟೂರಿಸಂ ಕಾರಿಡಾರ್' ಪ್ರಣಾಳಿಕೆ

ಪ್ರವಾಸಿ ತಾಣಗಳ ಅಭಿವೃದ್ಧಿಯೊಂದಿಗೆ ಸ್ಥಳೀಯರಿಗೆ ಸ್ವಯಂ ಉದ್ಯೋಗ ಅವಕಾಶ, ಕ್ರೀಡಾ ವಿವಿ ಸ್ಥಾಪನೆ

ಮಡಿಕೇರಿ, ಮೇ 5– ಮಡಿಕೇರಿ ಕ್ಷೇತ್ರದ ಸಮೃದ್ಧ ಭವಿಷ್ಯಕ್ಕಾಗಿ ಸುಸ್ಥಿರ ಯೋಜನೆಯ ಪರಿಕಲ್ಪನೆಯೊಂದಿಗೆ 'ಗ್ರೇಟರ್ ಮಡಿಕೇರಿ ಟೂರಿಸಂ ಕಾರಿಡಾರ್' ರಚನೆಯ ಬಿಜೆಪಿ ಮಡಿಕೇರಿ ಕ್ಷೇತ್ರದ ಚುನಾವಣಾ ಪ್ರಣಾಳಿಕೆಯನ್ನು ಅಭ್ಯರ್ಥಿ ಎಂ.ಪಿ. ಅಪ್ಪಚ್ಚು ರಂಜನ್ ಬಿಡುಗಡೆಗೊಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಡಿಕೇರಿ ಕ್ಷೇತ್ರದ ಚುನಾವಣಾ ಪ್ರಣಾಳಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅಪ್ಪಚ್ಚು ರಂಜನ್, ಮಡಿಕೇರಿ ಕ್ಷೇತ್ರದ 24 ಗ್ರಾಮಗಳನ್ನೊಳಗೊಂಡ ಗ್ರೇಟರ್ ಮಡಿಕೇರಿ ಟೂರಿಸಂ ಕಾರಿಡಾರ್ ಅನ್ನು ಮುಂದಿನ ದಿನಗಳಲ್ಲಿ ರೂಪಿಸಲಾಗುತ್ತದೆ. ಮಡಿಕೇರಿ ಕ್ಷೇತ್ರದಾದ್ಯಂತ ಪ್ರವಾಸಿ ಮತ್ತು ಧಾರ್ಮಿಕ ಕ್ಷೇತ್ರಗಳನ್ನು ಒಳಗೊಂಡ ಟೂರಿಸಂ ಕಾರಿಡಾರ್ ಇದಾಗಿರಲಿದೆ ಎಂದು ವಿವರಿಸಿದರು.

ಮಡಿಕೇರಿ, ಕೆ.ನಿಡುಗಣೆ ಭಾಗ ಮಂಡಲ, ತಲಕಾವೇರಿ, ಕೆ.ನಿಡುಗಣಿ, ಗಾಳಿಬೀಡು, ಗರ್ವಾಲೆ, ಕಿರಗಂದೂರು, ಬೆಟ್ಟದಳ್ಳಿ, ಶಾಂತಳ್ಳಿ, ಸಕಲೇಶಪುರ, ಹಾನಗಲ್ಲು, ಚೌಡ್ಲು, ಸೋಮವಾರಪೇಟೆ, ದೊಡ್ಡಮಳ್ತೆ, ಗೌಡಳ್ಳಿ, ಶನಿವಾರಸಂತೆ, ನಿಡ್ತ, ತೊರೆನೂರು, ಹೆಬ್ಬಾಲೆ, ಕೂಡುಮಗಳೂರು, ಕುಶಾಲನಗರ, ಗುಡ್ಡೆಹೊಸೂರು, ನಂಜರಾಯಪಟ್ಟಣ, ನಾಕೂರು ಶಿರಂಗಾಲ, ಕಂಬಿಬಾಣೆ ಸೇರಿದಂತೆ ಮಡಿಕೇರಿ ಕ್ಷೇತ್ರದ ಹಲವು ಗ್ರಾಮಗಳಲ್ಲಿನ ಪ್ರವಾಸೋದ್ಯಮ ತಾಣಗಳನ್ನು ಗ್ರೇಟರ್ ಮಡಿಕೇರಿ ಟೂರಿಸಂ ಕಾರಿಡಾರ್ ಮೂಲಕ ಅಭಿವೃದ್ಧಿಪಡಿಸಲಾಗುತ್ತದೆ ಎಂದು ರಂಜನ್ ತಿಳಿಸಿದರು.

'ಗ್ರೇಟರ್' ಬದಲಾವಣೆಗಳು: ಗ್ರೇಟರ್ ಮಡಿಕೇರಿ ಟೂರಿಸಂ ಕಾರಿಡಾರ್ ಯೋಜನೆಯಿಂದ ಪ್ರವಾಸಿ ತಾಣಗಳಲ್ಲಿ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ಹೋಂ ಸ್ಟೇ, ಹೋಟೆಲ್, ರೆಸ್ಟೋರೆಂಟ್, ಕ್ಯಾಂಟೀನ್ ಮೊದಲಾದವು ಪ್ರಾರಂಭವಾಗಿ, ಸ್ಥಳೀಯ ಜನತೆಗೆ ಸ್ವಯಂ ಉದ್ಯೋಗ ಸೃಷ್ಟಿಯಾಗುವುದರ ಜೊತೆಗೆ ಆಯಾ ಪಂಚಾಯಿತಿಗಳ ಆದಾಯ ಹೆಚ್ಚಳವಾಗಲಿದೆ. ಈ ಎಲ್ಲಾ ಪ್ರವಾಸಿ ತಾಣಗಳಲ್ಲಿ ಬಂಡವಾಳದ ಹರಿವು ಹೆಚ್ಚಾಗಿ ಸ್ಥಳೀಯವಾಗಿ ಎಲ್ಲಾ ವರ್ಗದ ಕಾರ್ಮಿಕರಿಗೆ ಹೆಚ್ಚಿನ ಉದ್ಯೋಗ ಸೃಷ್ಟಿಯಾಗಲಿದೆ. ಸ್ಥಳೀಯ ಆಟೋ ರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ ಹೆಚ್ಚಿನ ಅನುಕೂಲತೆಗಳಾಗಲಿದೆ. ಗೂಡಂಗಡಿ, ತಳ್ಳುಗಾಡಿ ಮೊದಲಾದ ಸಣ್ಣ ಪುಟ್ಟ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಾಗಲಿದೆ ಎಂದು ಅಪ್ಪಚ್ಚು ರಂಜನ್ ವಿಶ್ವಾಸ ವ್ಯಕ್ತಪಡಿಸಿದರು.



ಕ್ರೀಡಾ ವಿಶ್ವ ವಿದ್ಯಾನಿಲಯ: ಕೊಡಗು ಜಿಲ್ಲೆಯಲ್ಲಿ ಹಾಕಿ ಸೇರಿದಂತೆ ವಿವಿಧ ಕ್ರೀಡಾ ಪ್ರತಿಭೆಗಳಿದ್ದಾರೆ. ಈ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಕ್ರೀಡಾ ವಿಶ್ವ ವಿದ್ಯಾನಿಲಯ ಸ್ಥಾಪನೆಗೆ ಚಿಂತನೆ ನಡೆಸಲಾಗಿದೆ. ಇದರಿಂದಾಗಿ ಕೊಡಗು ಸೇರಿದಂತೆ ನೆರೆಹೊರೆ ಜಿಲ್ಲೆಗಳ ನೂರಾರು ಕ್ರೀಡಾ ಪ್ರತಿಭೆಗಳಿಗೆ ಅನುಕೂಲವಾಗಲಿದೆ ಎಂದು ಹೇಳಿದರು. ತಾವು ಈ ಹಿಂದೆ 11 ತಿಂಗಳ ಕಾಲ ಕ್ರೀಡಾ ಸಚಿವನಾಗಿದ್ದ ಸಂದರ್ಭ ಇಡೀ ದೇಶದಲ್ಲಿಯೇ ಮೊಟ್ಟ ಮೊದಲ ಬಾರಿಗೆ ರಾಜ್ಯದ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಮೂಲಕ ಯುವ ನೀತಿಗೆ ಸುಧಾರಣೆ ತಂದಿದ್ದೆ ಎಂದು ಅಪ್ಪಚ್ಚು ರಂಜನ್ ಹೇಳಿದರು.

ಕೊನೆ ಚುನಾವಣೆ: ಇದು ತಮ್ಮ ಕೊನೆಯ ಚುನಾವಣೆ ಎಂದು ಘೋಷಿಸಿದ ಅಪ್ಪಚ್ಚು ರಂಜನ್ ಭವಿಷ್ಯದಲ್ಲಿ ಯುವ ಪೀಳಿಗೆಗೆ ಅಧಿಕಾರ ವಹಿಸಿಕೊಡಲಾಗುತ್ತದೆ ಎಂದು ತಮ್ಮ ಪಕ್ಷದಲ್ಲೇ ಆಸೀನರಾಗಿದ್ದ ಹಾಲಿ ಟಿಕೆಟ್ ಆಕಾಂಕ್ಷಿಯಾಗಿದ್ದ ಬಿ.ಬಿ. ಭಾರತೀಶ್ ಅವರ ಕಡೆ ಸನ್ನೆ ಮಾಡಿದರು. ಮುಂದಿನ 20 ವರ್ಷಗಳ ಕಾಲ ಕೊಡಗು ಜಿಲ್ಲೆಯಲ್ಲಿ ಕಾಂಗ್ರೆಸ್ ಸೇರಿದಂತೆ ಯಾವುದೇ ಪಕ್ಷ ಅಧಿಕಾರಕ್ಕೆ ಬಾರದ ರೀತಿಯಲ್ಲಿ ಪಕ್ಷ ಸಂಘಟನೆ ಮಾಡಲಾಗುತ್ತದೆ ಎಂದು ಅಪ್ಪಚ್ಚು ರಂಜನ್ ದೃಢವಾಗಿ ನುಡಿದರು. ಈಗಾಗಲೇ ಗುದ್ದಲಿ ಪೂಜೆ ಮಾಡಿರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತದೆ. ಟೆಂಡರ್ ಕರೆಯಲಾಗಿರುವ ಎಲ್ಲಾ ಕಾಮಗಾರಿಗಳನ್ನು ಮುಕ್ತಾಯ ಮಾಡಲಾಗುತ್ತದೆ ಎಂದು ಅಪ್ಪಚ್ಚು ರಂಜನ್ ಹೇಳಿದರು.

ಗುಂಡಿ ತೋಡಿದ ಕಾಂಗ್ರೆಸ್: ದೇಶ ಭಕ್ತ ಸಂಘಟನೆಯಾದ ಭಜರಂಗದಳವನ್ನು ಬ್ಯಾನ್ ಮಾಡುವುದಾಗಿ ಕಾಂಗ್ರೆಸ್ ತನ್ನ ಪ್ರನಾಳಿಕೆಯಲ್ಲಿ ಪ್ರಟಿಸಿದೆ. ಆ ಮೂಲಕ ತನ್ನ ಗುಂಡಿಯನ್ನು ತಾನೇ ತೋಡಿಕೊಂಡಿದೆ ಎಂದು ರಂಜನ್ ಲೇವಡಿ ಮಾಡಿದರು. ಜಿಲ್ಲೆ ಸೇರಿದಂತೆ ರಾಜ್ಯದಲ್ಲಿ 130 ಸೀಟ್‌ಗಳು ಬಿಜೆಪಿ ಪಾಲಾಗಲಿದೆ. ಭಜರಂಗದಳ ಬ್ಯಾನ್ ವಿಚಾರ ಕೂಡ ಬಿಜೆಪಿಯ ಪಾಲಿಗೆ ವರದಾನವಾಗಲಿದೆ ಎಂದು ಹೇಳಿದರು. ಮಡಿಕೇರಿ ಕ್ಷೇತ್ರದಲ್ಲಿ ತಮಗೆ ಯಾವುದೇ ಎದುರಾಳಿ ಇಲ್ಲ. ಈ ಬಾರಿ ಕನಿಷ್ಟ 30 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸುವುದಾಗಿ ಅಪ್ಪಚು ರಂಜನ್ ವಿಶ್ವಾಸ ವ್ಯಕ್ತಪಡಿಸಿದರು. ಮಾಜಿ ಸಚಿವ ಬಿ.ಎ. ಜೀವಿಜಯ ಸ್ಥಳೀಯ ಅಭ್ಯರ್ಥಿಗೆ ಮತ ಕೇಳಿದ್ದಾರೆ. ಆ ಮೂಲಕ ಅವರು ಕೂಡ ತಮಗೆ ಬೆಂಬಲ ನೀಡುವ ವಿಶ್ವಾಸ ಇದೆ ಎಂದು ರಂಜನ್ ಹೇಳಿದರು. ಈವರೆಗೆ ಯಾರನ್ನು ಕೂಡ ದ್ವೇಷ ಮಾಡದೇ ಎಲ್ಲರನ್ನು ಒಟ್ಟಾಗಿ ಕರೆದುಕೊಂಡು ಹೋಗಿದ್ದೇನೆ. ಹೀಗಾಗಿ ಬಿಜೆಪಿ ಮಾತ್ರವಲ್ಲದೇ, ಕಾಂಗ್ರೆಸ್, ಜೆಡಿಎಸ್ ಸಹಿತ ಎಲ್ಲಾ ಪಕ್ಷದ ಮತಗಳು ತಮಗೆ ಚಲಾವಣೆ ಆಗಲಿದೆ ಎಂದು ರಂಜನ್ ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೇಸಿಗರು ಬಿಜೆಪಿ ಸೇರ್ಪಡೆ: ಕಾಂಗ್ರೆಸ್ ಉಪಾಧ್ಯಕ್ಷ ಅನಂತ ಕುಮಾರ್ ಬಿಜೆಪಿಗೆ ತನ್ನ ಅಪಾರ ಬೆಂಬಲಿಗರೊಂದಿಗೆ ಸೇರಲಿರುವುದು ಮತ್ತಷ್ಟು ಬಲ ನೀಡಲಿದೆ ಎಂದು ರಂಜನ್ ನುಡಿದರು. ಕಾಂಗ್ರೆಸ್ ಮುಖಂಡರಾದ ಅನಂತ ಕುಮಾರ್ ಶನಿವಾರಸಂತೆಯಲ್ಲಿ ಶನಿವಾರ ಬಿಜೆಪಿ ಸೇರಲಿದ್ದು, ಸಚಿವ ಸಿ.ಟಿ.ರವಿ. ಅಸ್ಸಾಂ ಮುಖ್ಯಮಂತ್ರಿ ಈ ಸಂದರ್ಭ ಪಾಲ್ಗೊಳ್ಳಲಿದ್ದಾರೆ. ಕೊಡ್ಲಿಪೇಟೆಯಿಂದ ಶನಿವಾರಸಂತೆಯವರೆಗೆ ಬೈಕ್ ಜಾಥಾ ಆಯೋಜಿತವಾಗಿದೆ ಎಂದು ರವಿಕಾಳಪ್ಪ ಮಾಹಿತಿ ನೀಡಿದರು. ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷರಾಗಿದ್ದವರೋರ್ವರು ಬಿಜೆಪಿಗೆ ಸದ್ಯದಲ್ಲಿಯೇ ಸೇರಲಿದ್ದಾರೆ. ಕಾಂಗ್ರೆಸ್ ಈಗ ನಾಯಕರಿಲ್ಲದ ಮನೆಯಂತಾಗಿದೆ ಎಂದು ರಂಜನ್ ಲೇವಡಿ ಮಾಡಿದರು.

ಪ್ರಣಾಳಿಕೆ ಬಿಡುಗಡೆ ಸಂದರ್ಭ ಬಿಜೆಪಿ ಪ್ರಮುಖರಾದ ಬಿ.ಬಿ.ಭಾರತೀಶ್, ಡಾ.ಬಿ.ಸಿ.ನವೀನ್ ಕುಮಾರ್, ನಾಪಂಡ ರವಿಕಾಳಪ್ಪ, ಮಹೇಶ್ ಜೈನಿ, ಮನು ಮಂಜುನಾಥ್ ಹಾಜರಿದ್ದರು.

ಬಿಜೆಪಿಯಿಂದ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಅಪಪ್ರಚಾರ

ಜಂಟಿ ಸುದ್ದಿಗೋಷ್ಠಿಯಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸ್ ಮುಖಂಡರ ವಾಗ್ದಾಳಿ

ವಿರಾಜಪೇಟೆ, ಮೇ 5– ಕಳೆದ 20 ವರ್ಷಗಳಿಂದ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೆ ವಿರಾಜಪೇಟೆ ಶಾಸಕ ಕೆ.ಜಿ. ಬೋಪಯ್ಯ ವಿಫಲರಾಗಿದ್ದು, ಓಟು ಕೇಳಲು ಯಾವುದೇ ವಿಷಯವಿಲ್ಲದ ಕಾರಣ ಬಿಜೆಪಿಯವರು ಕಾಂಗ್ರೆಸ್ ಅಭ್ಯರ್ಥಿ ಎ.ಎಸ್. ಪೊನ್ನಣ್ಣ ವಿರುದ್ಧ ಅಪಪ್ರಚಾರ ಮಾಡುತ್ತಿರುವುದು ಸರಿಯಲ್ಲ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ, ವಕ್ತಾರ ಸಂಕೇತ್ ಪೂವಯ್ಯ, ಚುನಾವಣಾ ವಕ್ತಾರ ಬಿದ್ದಟಂಡ ತಮ್ಮಯ್ಯ ಅವರುಗಳು ಖಂಡಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಎ.ಎಸ್.ಪೊನ್ನಣ್ಣ ಅವರ ಕಚೇರಿಯಲ್ಲಿ ಕರೆಯಲಾಗಿದ್ದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮೊದಲಿಗೆ ಮಾತನಾಡಿದ ಧರ್ಮಜ ಉತ್ತಪ್ಪ ಅವರು, ರಂಗಾಯಣದಲ್ಲಿ ನಾಟಕ ಮಾಡುವ ವ್ಯಕ್ತಿಯೊಬ್ಬರು ನಿಜಜೀವನದಲ್ಲಿ ನಾಟಕ ಮಾಡುತ್ತಿದ್ದಾರೆ. ಮುಂದಿನ ದಿನದಲ್ಲಿ ಅನುಭವಿಸುವ ಕಾಲ ದೂರವಿಲ್ಲ ಎಂದರಲ್ಲದೆ ಕಾಂಗ್ರೆಸ್ ಅಭ್ಯರ್ಥಿ ಪೊನ್ನಣ್ಣ ಅವರ ಬಗ್ಗೆ ಇಲ್ಲಸಲ್ಲದ ಅಪವಾದಗಳನ್ನು ಮಾಡುತ್ತಿರುವುದು ಅವರಿಗೆ ಶೋಭೆಯಲ್ಲ ಎಂದರು.



ಆ ವ್ಯಕ್ತಿ ಏನು ಎಂಬುದು ಕೊಡಗಿನ ಜನರಿಗೆ ತಿಳಿದಿದೆ. ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ 24 ಅಂಶಗಳನ್ನು ಮುಂದಿಟ್ಟು ಈ ಕ್ಷೇತ್ರದ ಅಭಿವೃದ್ಧಿಗೆ ಜನರ ಬಳಿ ಹೋಗಿದ್ದೇವೆ. 20 ವರ್ಷಗಳಿಂದ ಜನರು ಕಷ್ಟ ಅನುಭವಿಸಿದ್ದಾರೆ. ಇನ್ನು ಮುಂದೆ ಕಟ್ಟ ಕಡೆಯ ಜನರಿಗೂ ಸೌಲಭ್ಯ ಗಳು ದೊರಕುವಂತೆ ಮಾಡಲು ಅಭ್ಯರ್ಥಿ ಪೊನ್ನಣ್ಣ ಮುಂದಾಗಿರುವುದರಿಂದ ಅವರು ಚುನಾವಣೆಯಲ್ಲಿ ಗೆಲುವು ಸಾಧಿಸಲಿದ್ದಾರೆ ಎಂದರು.

ರಾಜ್ಯ ವಕ್ತಾರ ಮೇರಿಯಂಡ ಸಂಕೇತ್ ಪೂವಯ್ಯ ಮಾತನಾಡಿ, ಅಭಿವೃದ್ಧಿ ವಿಚಾರವನ್ನು ಮುಂದಿಟ್ಟುಕೊಂಡು ಮತದಾರರ ಮುಂದೆ ಹೋಗುವುದನ್ನು ಬಿಟ್ಟು ಜಾತಿ, ಧರ್ಮ, ಕೋಮುವಾದದ ಜೊತೆಗೆ ಖಾಸಗಿ ವಿಚಾರಗಳನ್ನು ಮುಂದಿಟ್ಟುಕೊಂಡು ಮತ ಕೇಳಲು ಬಿಜೆಪಿ ಹೊರಟಿದೆ. ಇಲ್ಲಿನ ಶಾಸಕರು ಹಲವು ವರ್ಷಗಳಿಂದ ಕುಗ್ರಾಮಗಳಿಗೆ ಭೇಟಿ ನೀಡಿಲ್ಲ. ವಿರಾಜಪೇಟೆ ಕ್ಷೇತ್ರದಲ್ಲಿ ಕಳೆದ 20 ವರ್ಷಗಳಿಂದ ಅಭಿವೃದ್ಧಿ ಕಾರ್ಯ ಆಗದಿರುವುದರಿಂದ ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದತ್ತ ಮತದಾರರು ಒಲವು ತೋರಿದ್ದಾರೆ ಎಂದರು.

ಎ.ಎಸ್.ಪೊನ್ನಣ್ಣ ಚುನಾವಣೆ ಸಂದರ್ಭದಲ್ಲಿ ಬಂದವರಲ್ಲ. ಹಲವಾರು ವರ್ಷಗಳಿಂದ ಜನರ ಸೇವೆಗಾಗಿ ಬಂದು ಈ ಕ್ಷೇತ್ರದ ಜನರ ಕಷ್ಟಗಳಿಗೆ ಸ್ಪಂದಿಸಿದ್ದಾರೆ. ಆದ್ದರಿಂದ ಜನರು ಅವರನ್ನು ಮೆಚ್ಚಿದ್ದಾರೆ. ಈ ಚುನಾವಣೆಯಲ್ಲಿ ಬಹುಮತದಿಂದ ಗೆಲುವು ಸಾಧಿಸಲಿದ್ದಾರೆ ಎಂದ ಸಂಕೇತ್ ಪೂವಯ್ಯ ಬಿಜೆಪಿಯ ದೊಂಬರಾಟಕ್ಕೆ ಜಗದೀಶ್ ಶೆಟ್ಟರ್ ಮತ್ತು ಮಾಜಿ ಸಚಿವ ಲಕ್ಷ್ಮಣ್ ಸವದಿ ಅವರು ಪಕ್ಷದಿಂದ ಹೊರಬಂದು ಈಗಾಗಲೇ ಉತ್ತರ ನೀಡಿದ್ದಾರೆ ಎಂದರು.

ಕಾಂಗ್ರೆಸ್‌ನ ಜಿಲ್ಲಾ ಚುನಾವಣಾ ವಕ್ತಾರ ಬಿದ್ದಟಂಡ ತಮ್ಮಯ್ಯ ಅವರು ಮಾತನಾಡಿ ಕೊಡಗು ಕೊಡಗಾಗಿಯೇ ಉಳಿಯಬೇಕು. ಜಾತಿ–ಜಾತಿ ಮಧ್ಯೆ ವಿಷ ಬೀಜ ಬಿತ್ತುವ ವ್ಯಕ್ತಿ ಬಗ್ಗೆ ಪೊಲೀಸರು ಕ್ರಮ ಕೈಗೊಳ್ಳಬೇಕು. ಬಿಜೆಪಿ ಪಕ್ಷದಲ್ಲಿ ಸ್ಪರ್ಧೆಗೆ ಅಭ್ಯರ್ಥಿಗಳೇ ಇಲ್ಲ. ಕೆ.ಜಿ. ಬೋಪಯ್ಯ ಹುಟ್ಟಿದ ದಿನಾಂಕವನ್ನೇ ತಪ್ಪಾಗಿ ಕೊಟ್ಟಿದ್ದಾರೆ. ಈ ಕ್ಷೇತ್ರದವರೇ ಆದ ಬಿಜೆಪಿಯ ಮನುಮುತ್ತಪ್ಪ, ರವಿಂದ್ರ, ಅಡ್ಡಂಡ ಕಾರ್ಯಪ್ಪ ಅಭ್ಯರ್ಥಿಗಳಾಗಿ ಸ್ಪರ್ಧಿಸಬಹುದಿತ್ತು. ಆ ಧೈರ್ಯ ಅವರಿಗಿಲ್ಲ. ಬಿಜೆಪಿ ಅವರು ಭಜರಂಗದಳದ ಹೆಸರೇಳಿ ಗಲಾಟೆಗೆ ಅವಕಾಶ ಮಾಡುತ್ತಿರುವುದು ಸರಿಯಲ್ಲ ಎಂದರು. ಜಿಲ್ಲಾ ಸಮಿತಿಯ ಕೊಲ್ಲಿರ ಬೋಪಣ್ಣ ಮಾತನಾಡಿ, ಕೊಡಗಿನ ವಿಧಾನಸಭಾ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಲಿದೆ ಎಂದರು.

19ನೇ ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ವಾರ್ಷಿಕ ತರಬೇತಿ ಶಿಬಿರ ಉದ್ಘಾಟನೆ

ಮಡಿಕೇರಿ, ಮೇ 5– 19ನೇ ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ವಾರ್ಷಿಕ ತರಬೇತಿ ಶಿಬಿರ ಗೋಣಿಕೊಪ್ಪಲಿನ ಕೂರ್ಗ್ ಪಬ್ಲಿಕ್ ಸ್ಕೂಲ್‌ನಲ್ಲಿ ನಡೆಯಿತು.

ಹಿರಿಯ ವಿಭಾಗ(ಸೀನಿಯರ್ ವಿಂಗ್) ಎನ್‌ಸಿಸಿ ಕೆಡೆಟ್‌ಗಳು ಮತ್ತು ಜೂನಿಯರ್ ವಿಭಾಗ (ಜೂನಿಯರ್ ವಿಂಗ್) ಎನ್‌ಸಿಸಿ ಕೆಡೆಟ್‌ಗಳಿಗೆ 10 ದಿನಗಳ ಶಿಬಿರವನ್ನು ಮಡಿಕೇರಿಯ 19 ಕರ್ನಾಟಕ ಬಿಎನ್ ಎನ್‌ಸಿಸಿಯ ಕಮಾಂಡಿಂಗ್ ಆಫೀಸರ್ ಕರ್ನಲ್ ಜೆಫಿರಿನ್ ಗಿಲ್ಬರ್ಟ್ ಅರಾನ್ಹಾ, ಲೆಫ್ಟಿನೆಂಟ್ ಕರ್ನಲ್ ಚಾಕೋ ಹಾಗೂ ಹಲವಾರು ಎನ್‌ಸಿಸಿ ಮೇಲುಸ್ತುವಾರಿಗಳ ನೇತೃತ್ವದಲ್ಲಿ ನಡೆಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಮತ್ತು ಸುಳ್ಯ ತಾಲೂಕುಗಳ ಜೊತೆಗೆ ಕೊಡಗು ಜಿಲ್ಲೆಯ ವಿವಿಧ ಸಂಸ್ಥೆಗಳಿಂದ 520 ಕೆಡೆಟ್‌ಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು. ಶಿಬಿರದಲ್ಲಿ ನಾಯಕತ್ವದ ಗುಣ, ಶಿಸ್ತು, ಕರ್ತವ್ಯನಿಷ್ಠೆ, ಸಮಯಪಾಲನೆ, ಕ್ರಮಬದ್ಧತೆ, ನ್ಯಾಯಸಮ್ಮತ ಅಧಿಕಾರ, ಮೌಲ್ಯ, ಆತ್ಮ ವಿಶ್ವಾಸ ಮತ್ತು ಸ್ವಾವಲಂಬನೆಯ ಮಟ್ಟವನ್ನು ಹೆಚ್ಚಿಸುವ ಬಗ್ಗೆ ತರಬೇತಿ ನೀಡಲಾಯಿತು.




ಮಡಿಕೇರಿಯ 19ನೇ ಕರ್ನಾಟಕ ಬಿಎನ್‌ಎನ್‌ಸಿಸಿಯ ಕಮಾಂಡಿಂಗ್ ಆಫೀಸರ್ ಕರ್ನಲ್ ಜೆಫಿರಿನ್ ಗಿಲ್ಬರ್ಟ್ ಅರಾನ್ಹಾ ಶಿಬಿರವನ್ನು ಉದ್ಘಾಟಿಸಿ, ಎನ್‌ಸಿಸಿಯ ಗುರಿ ಮತ್ತು ಧ್ಯೇಯವಾಕ್ಯಗಳ ಕುರಿತು ತಿಳಿಸಿ, ಶಿಬಿರದ ವಿವಿಧ ಅಂಶಗಳ ಬಗ್ಗೆ ವಿವರಿಸಿದರು. ಶಿಬಿರದ ಅವಧಿಯಲ್ಲಿ ಕೆಡೆಟ್‌ಗಳು ಅನುಸರಿಸಬೇಕಾದ ಜವಾಬ್ದಾರಿಗಳು, ಶಿಬಿರದ ಶಿಸ್ತು, ವೈಯಕ್ತಿಕ ನೈರ್ಮಲ್ಯ ಮತ್ತು ಭದ್ರತೆ, ಶಸ್ತ್ರಾಸ್ತ್ರ ಬಳಕೆ ಕುರಿತು ತಿಳಿಸಲಾಯಿತು. ಅಲ್ಲದೆ ವಿಶೇಷ ಅವಧಿಯಲ್ಲಿ ಕೈಗೊಳ್ಳಬೇಕಾದ ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಶಿಬಿರದ ಸಮಾರೋಪ ಸಮಾರಂಭದಂದು ಕ್ಯಾಂಪ್ ಫೈರ್, ಕೆಡೆಟ್‌ಗಳಿಂದ ಡ್ರಿಲ್ ನಡೆಯಿತು. ಅತ್ಯುತ್ತಮ ಶೂಟರ್, ಅತ್ಯುತ್ತಮ ಡ್ರಿಲ್ ಹಾಗೂ ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದವರಿಗೆ ಬಹುಮಾನ ಮತ್ತು ಪದಕಗಳನ್ನು ವಿತರಿಸಲಾಯಿತು.

ಚಾಮರಾಜನಗರ ಜಿಲ್ಲಾ ವಿಧಾನಸಭಾ ಚುನಾವಣೆ

ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ನಡುವೆ ತ್ರಿಕೋನ ಸ್ಪರ್ಧೆ

ವರದಿ
ಸಿದ್ದಲಿಂಗಸ್ವಾಮಿ



ಚಾಮರಾಜನಗರ, ಮೇ 5– ವಿಧಾನಸಭಾ ಚುನಾವಣೆಗೆ ಇನ್ನೂ ಕೇವಲ ನಾಲ್ಕು ದಿನಗಳು ಮಾತ್ರ ಬಾಕಿ ಉಳಿದಿದೆ. ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಗೆಲುವಿಗಾಗಿ ಎಲ್ಲಾ ಪ್ರಮುಖ ಪಕ್ಷಗಳು ಹೋರಾಟ ನಡೆಸುತ್ತಿವೆ. ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಹಾಗೂ ಹನೂರು ಕ್ಷೇತ್ರದಲ್ಲಿ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು, ಫಲಿತಾಂಶ ತೀವ್ರ ಕುತೂಹಲ ಕೆರಳಿಸಿದೆ.




ವಿ. ಸೋಮಣ್ಣ ಸಿ.ಪುಟ್ಟರಂಗಶೆಟ್ಟಿ

ಚಾಮರಾಜನಗರ: ಈ ಕ್ಷೇತ್ರದಿಂದ ಆಯ್ಕೆ ಬಯಸಿ ಬಿಜೆಪಿ ಅರ್ಭ್ಯಥಿಯಾಗಿ ಸಚಿವ ವಿ. ಸೋಮಣ್ಣ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಯಾಗಿ ಕ್ಷೇತ್ರದಿಂದ ಕಳೆದ ಮೂರು ಚುನಾವಣೆಗಳಿಂದ ಗೆಲುವು ಸಾಧಿಸಿರುವ ಶಾಸಕ ಸಿ. ಪುಟ್ಟರಂಗಶೆಟ್ಟಿ ಸ್ಪರ್ಧಾಳಾಗಿದ್ದಾರೆ. ಜೆಡಿಎಸ್ ಅಭ್ಯರ್ಥಿ ಎ.ಎಂ. ಮಲ್ಲಿಕಾರ್ಜುನಸ್ವಾಮಿ (ಆಲೂರು ಮಲ್ಲು) ಕೂಡ ಕಣದಲ್ಲಿದ್ದು, ಪೈಪೋಟಿ ನೀಡುತ್ತಿದ್ದಾರೆ. ಬಿಎಸ್‌ಪಿ ಅಭ್ಯರ್ಥಿಯಾಗಿ ಪ್ರೊ.ಹ.ರಾ. ಮಹೇಶ್ ಸ್ಪರ್ಧಿಸಿದ್ದಾರೆ. ವಾಟಾಳ್ ಪಕ್ಷದಿಂದ ಮಾಜಿ ಶಾಸಕ ವಾಟಾಳ್ ನಾಗರಾಜ್ ಮತ್ತೊಮ್ಮೆ ತಮ್ಮ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಉಳಿದಂತೆ ಇನ್ನೂ 10 ಮಂದಿ ಸ್ಪರ್ಧಿಸಿದ್ದಾರೆ. (ಒಟ್ಟು 15 ಮಂದಿ ಕಣದಲ್ಲಿದ್ದಾರೆ)

ಕ್ಷೇತ್ರವನ್ನು ಅವಲೋಕಿಸಿದರೆ ಗೆಲುವಿಗಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿರುವುದು ಕಂಡು ಬರುತ್ತದೆ. ಗೆಲುವಿಗಾಗಿ ಈ ಎರಡು ಪಕ್ಷಗಳೂ ಎಲ್ಲಾ ರೀತಿಯ ತಂತ್ರಗಾರಿಕೆಯಲ್ಲಿ ತೊಡಗಿರುವುದು ಕಂಡು ಬರುತ್ತದೆ. ಇವರಿಬ್ಬರಲ್ಲಿ ಯಾರೇ ಗೆದ್ದರೂ ಸಹ ಕಡಿಮೆ ಮತಗಳ ಅಂತರದಿಂದ ಗೆಲುವು ಸಾಧಿಸುತ್ತಾರೆ ಎಂಬ ವಾತಾವರಣ ನಿರ್ಮಾಣವಾಗಿದೆ.

ಬಿಎಸ್‌ಪಿಗೆ ಎಸ್‌ಡಿಪಿಐ ಬೆಂಬಲ ಸೂಚಿಸಿರುವುದರಿಂದ ಕ್ಷೇತ್ರದಲ್ಲಿ ಆನೆಯ ಘರ್ಷಣೆ ಜೋರಾಗಿದೆ. ಇವರು ಎಷ್ಟು ಮತಗಳನ್ನು ಪಡೆಯುತ್ತಾರೆ ಎಂಬುದು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ. ಇವರು ಹೆಚ್ಚಿಗೆ ಮತಗಳನ್ನು ಪಡೆದಷ್ಟು ಕಾಂಗ್ರೆಸ್‌ಗೆ ಹಿನ್ನಡೆಯಾಗುತ್ತದೆ ಎಂದು ಹೇಳಲಾಗುತ್ತಿದೆ.

ಗುಂಡ್ಲುಪೇಟೆ: ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಹಾಲಿ ಶಾಸಕ ಸಿ.ಎಸ್. ನಿರಂಜನಕುಮಾರ್ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಯಾಗಿ ಮಾಜಿ ಸಚಿವರಾದ ದಿ. ಎಚ್.ಎಸ್. ಮಹದೇವಪ್ರಸಾದ್ ಅವರ ಪುತ್ರ ಎಚ್.ಎಂ. ಗಣೇಶಪ್ರಸಾದ್ ಮೊದಲ ಬಾರಿಗೆ ಚುನಾವಣೆಗೆ ನಿಂತಿದ್ದಾರೆ.




ನಿರಂಜನ್‌ಕುಮಾರ್ ಗಣೇಶ್‌ಪ್ರಸಾದ್

ಜೆಡಿಎಸ್ ಅಭ್ಯರ್ಥಿಯಾಗಿ ಕಡಬೂರು ಮಂಜುನಾಥ್ ಸ್ಪರ್ಧಿಸಿದ್ದಾರೆ. ಚಾಮುಲ್ ನಿರ್ದೇಶಕ ಎಂ.ಪಿ. ಸುನೀಲ್ ಪಕ್ಷೇತರರಾಗಿ ಸ್ಪರ್ಧಿಸಿ ಗಮನ ಸೆಳೆದಿದ್ದಾರೆ. ಸುನೀಲ್ ಬಿಜೆಪಿಯಿಂದ ಟಿಕೆಟ್ ಬಯಸಿದ್ದರು. ಹೀಗಾಗಿ, ಅವರನ್ನು ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ ಎಂಬ ಮಾತು ಕ್ಷೇತ್ರದಲ್ಲಿ ಕೇಳಿ ಬರುತ್ತಿದೆ. ಉಳಿದಂತೆ ಇನ್ನೂ 11 ಮಂದಿ ಕಣದಲ್ಲಿದ್ದಾರೆ. (ಒಟ್ಟು 15 ಮಂದಿ ಕಣದಲ್ಲಿದ್ದಾರೆ)

ಗೆಲುವಿಗಾಗಿ ನಿರಂಜನಕುಮಾರ್ ಹಾಗೂ ಗಣೇಶಪ್ರಸಾದ್ ಅವರ ನಡುವೆ ತೀವ್ರ ಹಣಾಹಣಿ ಏರ್ಪಟ್ಟಿದೆ. ಕಳೆದ ಐದು ವರ್ಷಗಳಲ್ಲಿ ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳನ್ನು ನೋಡಿ ನನ್ನನ್ನು ಬೆಂಬಲಿಸುವಂತೆ ನಿರಂಜನ ಕುಮಾರ್ ಅವರು ಮತದಾರರಲ್ಲಿ ಮನವಿ ಮಾಡುತ್ತಿದ್ದಾರೆ. ಗಣೇಶಪ್ರಸಾದ್ ಅವರು ಕಳೆದ 5 ವರ್ಷದಲ್ಲಿ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ನಿರೀಕ್ಷಿಸಿದ ಪ್ರಮಾಣದಲ್ಲಿ ನಡೆದಿಲ್ಲ. ನಮ್ಮ ತಂದೆ ಹೆಚ್.ಎಸ್. ಮಹದೇವಪ್ರಸಾದ್ ಅವರ ಕಾಲದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ನನಗೆ ಅವಕಾಶ ನೀಡುವಂತೆ ಮತದಾರರಲ್ಲಿ ವಿನಂತಿಸುತ್ತಿದ್ದಾರೆ. ಕ್ಷೇತ್ರದಲ್ಲಿ ಇವರಿಬ್ಬರು ಪ್ರಚಾರದ ಅಬ್ಬರ ಬಹಳ ಜೋರಾಗಿದ್ದು, ಫಲಿತಾಂಶ ತೀವ್ರ ಕುತೂಹಲ ಕೆರಳಿಸಿದೆ.

ಎಂ.ಪಿ. ಸುನೀಲ್ ಮತಗಳಿಸಿದಷ್ಟು ಅದು ಬಿಜೆಪಿಗೆ ತೊಡಕಾಗಬಹುದು ಎಂದು ವಿಶ್ಲೇಷಿಸಲಾಗುತ್ತದೆ. ಇನ್ನೂ ಜೆಡಿಎಸ್ ಅಭ್ಯರ್ಥಿ ಎಷ್ಟು ಮತಗಳನ್ನು ಗಳಿಸುತ್ತಾರೆ ಎಂಬುದು ಚರ್ಚೆಗೆ ಗ್ರಾಸವಾಗಿದೆ.

ಕೊಳ್ಳೇಗಾಲ: ಮೀಸಲು ಕ್ಷೇತ್ರವಾಗಿರುವ ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕ್ಷೇತ್ರದ ಹಾಲಿ ಶಾಸಕ ಎನ್. ಮಹೇಶ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಹುರಿಯಾಳಾಗಿ ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಜೆಡಿಎಸ್‌ನಿಂದ ಪುಟ್ಟಸ್ವಾಮಿ, ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಕಿನಕನಹಳ್ಳಿ ರಾಚಯ್ಯ ಸ್ಪರ್ಧಿಸಿದ್ದಾರೆ. ಉಳಿದಂತೆ ಇನ್ನೂ 9 ಮಂದಿ ಕಣದಲ್ಲಿದ್ದಾರೆ. (ಒಟ್ಟು 13 ಮಂದಿ ಕಣದಲ್ಲಿದ್ದಾರೆ)




ಎನ್. ಮಹೇಶ್ ಎ.ಆರ್.ಕೃಷ್ಣಮೂರ್ತಿ

ಕಳೆದ ಚುನಾವಣೆಯಲ್ಲಿ ಕ್ಷೇತ್ರದಿಂದ ಬಿಎಸ್‌ಪಿಯಿಂದ ಸ್ಪರ್ಧಿಸಿದ್ದ ಎನ್. ಮಹೇಶ್ ಗೆಲುವು ಸಾಧಿಸಿದರು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅವರು ಆ ಪಕ್ಷ ತೊರೆದು ಬಿಜೆಪಿ ಸೇರಿ ಈಗ ಅವರು ಮತ್ತೊಮ್ಮೆ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಯಾಗಿ ಎ.ಆರ್. ಕೃಷ್ಣಮೂರ್ತಿ ಕಣದಲ್ಲಿದ್ದರೆ. ಗೆಲುವಿಗಾಗಿ ಇವರಿಬ್ಬರ ನಡುವೆ ಹಣಾಹಣಿ ಏರ್ಪಟ್ಟಿದೆ.

ಎನ್. ಮಹೇಶ್ ಅವರ ಸೋಲನ್ನು ಗುರಿಯಾಗಿಸಿಕೊಂಡಿರುವ ಬಿಎಸ್‌ಪಿ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿಲ್ಲ. ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿರುವುದು ಎನ್, ಮಹೇಶ್‌ಗೆ ಹಿನ್ನೆಡೆಯನ್ನುಂಟು ಮಾಡಿದೆ ಎಂದು ವಿಶ್ಲೇಷಿಸಲಾಗಿದೆ. ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಲ್ಲಿ ಕಾರ್ಯಗಳನ್ನು ಮಾಡಿದ್ದೇನೆ ಮತ್ತಷ್ಟು ಅಭಿವೃದ್ಧಿ ಕೆಲಸ ಮಾಡಲಿ ಈ ಬಾರಿಯೂ ನನ್ನನ್ನು ಬೆಂಬಲಿಸುವಂತೆ ಮಹೇಶ್ ಮತದಾರರಲ್ಲಿ ಮನವಿ ಮಾಡುತ್ತಿದ್ದಾರೆ. ಎ.ಆರ್. ಕೃಷ್ಣಮೂರ್ತಿ ಅವರು ಕಳೆದ 19 ವರ್ಷಗಳಿಂದ ನಡೆದ ಆರು ಚುನಾ ವಣೆಗಳಲ್ಲಿ ಸೋತಿದ್ದೇನೆ. ಈ ಬಾರಿಯಾ ದರೂ ನನ್ನನ್ನು ಗೆಲ್ಲಿಸಿ ಕ್ಷೇತ್ರವನ್ನು ಸಮಗ್ರ ಅಭಿವೃದ್ಧಿಪಡಿಸುತ್ತೇನೆ. ನನ್ನ ಮೇಲೆ ಒಂದೇ ಒಂದು ಕಪ್ಪು ಚುಕ್ಕೆಯೂ ಇಲ್ಲದ ಕಾರಣ ಕ್ಷೇತ್ರದ ಮತದಾರರು ಈ ಬಾರಿ ನನ್ನ 'ಕೈ' ಹಿಡಿಯುವಂತೆ ಮನವಿ ಮಾಡುತ್ತಿದ್ದಾರೆ.

ಇನ್ನೂ ಪುಟ್ಟಸ್ವಾಮಿ ಹಾಗೂ ಕಿನಕನಹಳ್ಳಿ ರಾಚಯ್ಯ ಅವರು ಎಷ್ಟು ಮತಗಳನ್ನು ಪಡೆಯುತ್ತಾರೆ ಎಂಬುದು ಕುತೂಹಲ ಕೆರಳಿಸಿದೆ.

ಹನೂರು: ಕಾಂಗ್ರೆಸ್ ಅಭ್ಯರ್ಥಿಯಾಗಿ ಹಾಲಿ ಶಾಸಕ ಆರ್. ನರೇಂದ್ರ ಸ್ಪರ್ಧಿಸಿದ್ದಾರೆ. ಬಿಜೆಪಿ ಅಭ್ಯರ್ಥಿಯಾಗಿ ದಿ.ಹೆಚ್. ನಾಗಪ್ಪ ಅವರ ಪುತ್ರ ಪ್ರೀತನ್ ನಾಗಪ್ಪ ಸ್ಪರ್ಧಿಸಿದ್ದಾರೆ. ಜೆಡಿಎಸ್ ಅಭ್ಯರ್ಥಿಯಾಗಿ ಪಕ್ಷದ ಜಿಲ್ಲಾ ಅಧ್ಯಕ್ಷ ಎಂ.ಆರ್. ಮಂಜುನಾಥ್ ಕಣದಲ್ಲಿದ್ದಾರೆ.




ಆರ್.ನರೇಂದ್ರ ಪ್ರೀತನ್



ಮಂಜುನಾಥ್


ಇನ್ನುಳಿದಂತೆ 15 ಮಂದಿ ಸ್ಪರ್ಧಿಸಿ (ಒಟ್ಟು 18 ಮಂದಿ ಕಣದಲ್ಲಿ ದ್ದಾರೆ)

ಕ್ಷೇತ್ರವನ್ನು ಒಮ್ಮೆ ಅವಲೋಕಿಸಿ ನೋಡಿದರೆ ಇಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಅಭ್ಯರ್ಥಿಗಳು ನಡುವೆ ಗೆಲುವಿಗಾಗಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಆರ್. ನರೇಂದ್ರ ಕ್ಷೇತ್ರದಲ್ಲಿ ಕಳೆದ 15 ವರ್ಷ ಗಳಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳನ್ನು ಮುಂದಿಟ್ಟುಕೊಂಡು ಮತಯಾಚಿಸುತ್ತಿದ್ದಾರೆ. ಪ್ರೀತನ್ ನಾಗಪ್ಪ ಕಳೆದ ಎರಡು ಚುನಾವಣೆಗಳಲ್ಲಿ ಸೋತಿದ್ದೇನೆ. ಕ್ಷೇತ್ರದ ಅಭಿವೃದ್ಧಿಗಾಗಿ ನನ್ನನ್ನು ಬೆಂಬಲಿಸುವಂತೆ ಕೋರುತ್ತಿದ್ದಾರೆ.

ಇನ್ನೂ ಮುಂಜುನಾಥ್ ಅವರು ಕಳೆದ ಚುನಾವಣೆಯಲ್ಲಿ ಸೋತರು ಸಹ ಕ್ಷೇತ್ರದ ಜನರ ಜೊತೆ ನಿಕಟ ಸಂಪರ್ಕದಲ್ಲಿ ಇದ್ದು, ಜನಸೇವೆಯಲ್ಲಿ ನಿರತರಾಗಿದ್ದಾರೆ. ಹೀಗಾಗಿ ನನಗೊಮ್ಮೆ ಅವಕಾಶ ನೀಡುವಂತೆ ವಿನಂತಿಸುತ್ತಿದ್ದಾರೆ. ಈ ಮೂವರ ನಡುವೆ ಗೆಲುವಿಗಾಗಿ ಜಿದ್ದಾಜಿದ್ದಿ ನಡೆದಿದ್ದು, ಯಾರು ಗೆಲ್ಲುತ್ತಾರೆ ಎಂಬುದು ಕುತೂಹಲಕ್ಕೆ ಎಡೆ ಮಾಡಿಕೊಟ್ಟಿದೆ

ಚಾಮರಾಜನಗರ ಕ್ಷೇತ್ರ	
ಒಟ್ಟು ಮತದಾರರು	209494
ಪುರುಷರು	102588
ಮಹಿಳೆಯರು	106891
ಇತರೆ	15
ಗುಂಡ್ಲುಪೇಟೆ ಕ್ಷೇತ್ರ	
ಒಟ್ಟು ಮತದಾರರು	213836
ಪುರುಷರು	105020
ಮಹಿಳೆಯರು	108797
ಇತರೆ	19
ಕೊಳ್ಳೇಗಾಲ ಕ್ಷೇತ್ರ	
ಒಟ್ಟು ಮತದಾರರು	216602
ಪುರುಷರು	106979
ಮಹಿಳೆಯರು	109604
ಇತರೆ	19
ಹನೂರು ಕ್ಷೇತ್ರ	
ಒಟ್ಟು ಮತದಾರರು	221557
ಪುರುಷರು	111960
ಮಹಿಳೆಯರು	109581
ಇತರೆ	16
ಒಟ್ಟು ಮತದಾರರು	8,61,489
ಪುರುಷರು	4,26,547
ಮಹಿಳೆಯರು	4,34,873
ತೃತೀಯ ಲಿಂಗಿಗಳು	69

ಗುಂಡ್ಲುಪೇಟೆಯಲ್ಲಿ ಸುದೀಪ್ ಭರ್ಜರಿ ರೋಡ್ ಶೋ



ಗುಂಡ್ಲುಪೇಟೆ, ಮೇ 5– ಇಲ್ಲಿನ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಹಾಗೂ ಹಾಲಿ ಶಾಸಕ ಸಿ.ಎಸ್.ನಿರಂಜನ ಕುಮಾರ್ ಪರವಾಗಿ ಚಿತ್ರನಟ ಸುದೀಪ್ ಪಟ್ಟಣದಲ್ಲಿ ಭರ್ಜರಿ ರೋಡ್ ಶೋ ನಡೆಸಿ ಮತಯಾಚಿಸಿದರು.

ಶುಕ್ರವಾರ ಬೆಳಗ್ಗೆ ಪಟ್ಟಣದ ಮಡಹಳ್ಳಿ ವೃತ್ತದಿಂದ ಆರಂಭವಾದ ರೋಡ್ ಶೋ ಸಾರಿಗೆ ಬಸ್ ನಿಲ್ದಾಣ, ಗುರುಭವನದ ಎದುರು ಸಾಗಿ ಬಸವೇಶ್ವರ ವೃತ್ತದಲ್ಲಿ ಮುಕ್ತಾಯಗೊಂಡಿತು. ತಾಲೂಕಿನ ನಾನಾ ಭಾಗಗಳಿಂದ ಆಗಮಿಸಿದ್ದ ಸುದೀಪ್ ಅಭಿಮಾನಿಗಳು ಹಾಗೂ ಬಿಜೆಪಿ ಕಾರ್ಯಕರ್ತರು ರಸ್ತೆಯುದ್ದಕ್ಕೂ ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದರು. ಮಡಹಳ್ಳಿ ವೃತ್ತದಲ್ಲಿ ಸುದೀಪ್ ತೆರೆದ ವಾಹನವನ್ನು ಏರುತ್ತಿದ್ದಂತೆ ಕೈಯಲ್ಲಿ ಧ್ವಜ ಹಿಡಿದಿದ್ದ ಅಭಿಮಾನಿಗಳು ಕಿಚ್ಚ ಕಿಚ್ಚ ಎಂದು ಮುಗಿಲು ಮುಟ್ಟುವಂತೆ ಘೋಷಣೆ ಕೂಗಿದರು. ರಸ್ತೆ ಉದ್ದಕ್ಕೂ ನಿಂತಿದ್ದ ಅಭಿಮಾನಿಗಳು ಹಾಗೂ ಬಿಜೆಪಿ ಕಾರ್ಯಕರ್ತರತ್ತ ಸುದೀಪ್ ಕೈ ಬೀಸುತ್ತಾ ವೀರಮದಕರಿ ಚಿತ್ರದ ಡೈಲಾಗ್ ಹೇಳಿ ಅಭಿಮಾನಿಗಳನ್ನು ರಂಜಿಸುವುದರ ಜತೆಗೆ ಬಿಜೆಪಿಯ ಪರವಾಗಿ ಭರ್ಜರಿ ಪ್ರಚಾರ ನಡೆಸಿದರು.

ನಂತರ ಬಸವೇಶ್ವರ ವೃತ್ತದ ಬಳಿ ತೆರೆದ ವಾಹನದಲ್ಲಿ ನಿಂತು ಮಾತನಾಡಿದರು. ಗೆದ್ದೇ ಗೆಲ್ಲುವೆ ಒಂದು ದಿನ ಗೆಲ್ಲಲೇ ಬೇಕು ಒಳ್ಳೆತನ ಎಂಬುದಕ್ಕೆ ನಿರಂಜನ ಕುಮಾರ್ ಸಾಕ್ಷಿಯಾಗಿದ್ದಾರೆ. ಮೂರು ಬಾರಿ ಕ್ಷೇತ್ರದಲ್ಲಿ ಸೋತರೂ ನಂತರ ನಾಲ್ಕನೇ ಬಾರಿ ಜಯಗಳಿಸುವುದರೊಂದಿಗೆ ತಮ್ಮ ಒಳ್ಳೆತನವನ್ನು ಪ್ರದರ್ಶನ ಮಾಡಿದ್ದಾರೆ. ತಮ್ಮ ಮೊದಲ ಅವಧಿಯಲ್ಲಿಯೇ ಉತ್ತಮ ಕೆಲಸಗಳನ್ನು ಮಾಡಿ ಜನತೆಯ ನಡುವೆ ಇದ್ದಾರೆ. ಯಾವುದೇ ಕಾರಣಕ್ಕೂ ಇಂತಹ ಒಳ್ಳೆಯ ವ್ಯಕ್ತಿಯನ್ನು ಕ್ಷೇತ್ರದ ಜನತೆ ಕೈಬಿಡಬಾರದು ಎಂದು ಅಭಿಮಾನಿಗಳು ಮತ್ತು ಬಿಜೆಪಿ ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಈ ವೇಳೆ ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಮುಖಂಡರಾದ ಎನ್.ಮಲ್ಲೇಶ್, ಜಗದೀಶ್, ಪ್ರಾಯ್, ಎಸ್.ಸಿ.ಮಂಜುನಾಥ್ ಸೇರಿದಂತೆ ಹಲವರು ಇದ್ದರು.

ಆಡಳಿತ ವಿರೋಧಿ ಅಲೆ, ಕೊಳ್ಳೇಗಾಲದಲ್ಲಿ ಕಾಂಗ್ರೆಸ್ ಗೆಲುವು



ಯಳಂದೂರು, ಮೇ 5– ಈ ಬಾರಿ ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಆಡಳಿತ ವಿರೋಧಿ ಅಲೆ ಎದ್ದಿದೆ. ಇಲ್ಲಿನ ಶಾಸಕ ಎನ್. ಮಹೇಶ್ ಜನರ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಹಾಗಾಗಿ ಕ್ಷೇತ್ರದಲ್ಲಿ ಈ ಬಾರಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಎ.ಆರ್. ಕೃಷ್ಣಮೂರ್ತಿ ಅಭೂತಪೂರ್ಣ ಜಯ ಸಾಧಿಸಲಿದ್ದಾರೆ ಎಂದು ಮಾಜಿ ಶಾಸಕ ಎಸ್. ಜಯಣ್ಣ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಟಿ. ಹೊಸೂರು ಗ್ರಾಮದಲ್ಲಿ ಪಕ್ಷದ ಅಭ್ಯರ್ಥಿ ಎ.ಆರ್. ಕೃಷ್ಣಮೂರ್ತಿ ಪರ ಮತಯಾಚನೆ ಮಾಡಿ ಮಾತನಾಡಿದರು. ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಸಾಮಾನ್ಯ ಜನರ ಬದುಕನ್ನು ಮೂರಾಬಟ್ಟೆ ಮಾಡಿದೆ. ಅಗತ್ಯ ಪದಾರ್ಥಗಳ ಬೆಲೆ ಏರಿಕೆ ಕಂಡಿದೆ. ಜಾತಿ, ಧರ್ಮ ಎತ್ತಿ ಕಟ್ಟುವ ಕೆಲಸವಾಗುತ್ತಿದೆ. ಎಲ್ಲೆಡೆ ಆಡಳಿತ ವಿರೋಧಿ ಅಲೆ ಎದ್ದಿದೆ. ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಯನ್ನು ಈಡೇರಿಸುವ ಪಕ್ಷವಾಗಿದೆ. ಹಾಗಾಗಿ ಮತ್ತೊಮ್ಮೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಚುಕ್ಕಾಣಿಯನ್ನು ಹಿಡಿಯಲಿದ್ದು ಎಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಮತವನ್ನು ನೀಡಬೇಕು ಎಂದು ಮನವಿ ಮಾಡಿದರು.

ಅಭ್ಯರ್ಥಿ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ನಾನು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಸತತವಾಗಿ 2ನೇ ಬಾರಿ ಸ್ಪರ್ಧಿಸುತ್ತಿದ್ದೇನೆ. ಈ ಬಾರಿ ಎಲ್ಲೆಡೆ ಅಭೂತಪೂರ್ವ ವಿಶ್ವಾಸ ವ್ಯಕ್ತವಾಗಿದ್ದು ಜನಾಶೀರ್ವಾದ ನನ್ನ ಮೇಲೆ ಹೆಚ್ಚಾಗಿ ಇದೆ. ನನ್ನನ್ನು ಈ ಬಾರಿ ಮತದಾರರು ಆರಿಸಿ ಕಳುಹಿಸಿದ್ದೆ ಅದಲ್ಲಿ ಇಲ್ಲಿನ ಸಮಸ್ಯೆಗಳ ನಿವಾರಣೆಗೆ ಪ್ರಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ವಾಲೆ ಮಹದೇವ, ಜಿಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್, ಕಿನಕಹಳ್ಳಿ ಸಿದ್ಧರಾಜು, ಕೆಸ್ತೂರು ಸಿದ್ದರಾಜು, ಗಣಿಗನೂರು ಬಂಗಾರು, ನಂಜುಂಡಸ್ವಾಮಿ, ವೈಕೆ ಮೋಳೆನಾಗರಾಜು, ಗೌತಮ್ ನಂಜುಂಡಸ್ವಾಮಿ, ಸುರೇಶ್, ಮಹದೇವೇಗೌಡ, ಮಲ್ಲು, ವೈ.ವಿ. ಉಮಾಶಂಕರ್ ಸೇರಿದಂತೆ ಅನೇಕರು ಇದ್ದರು.

ಒಂದನೇ ಪುಟದಿಂದ

ಸಿಎಂ ಬೊಮ್ಮಾಯಿ ಪ್ರಚಾರ

ಅಭಿವೃದ್ಧಿ ಮಾಡುವ ಸಲುವಾಗಿ ಸೋಮಣ್ಣ ಇಲ್ಲಿಗೆ ಬಂದಿದ್ದಾರೆ. ಅವರಿಗೆ ನಿಮ್ಮೆಲ್ಲರ ಆಶೀರ್ವಾದ ಬೇಕಿದೆ. ಅವರನ್ನು ಈ ಬಾರಿ ಗೆಲ್ಲಿಸುತ್ತೀರೆಂಬ ನಂಬಿಕೆ ನನಗಿದೆ ಎಂದರು. ಕಾಂಗ್ರೆಸ್‌ನವರು ಚುನಾವಣೆ ಗೆಲ್ಲಲು 10 ಕೆಜಿ ಅಕ್ಕಿ ಕೊಡುವ ಭರವಸೆ ನೀಡುತ್ತಿದ್ದಾರೆ. ಆದರೆ ಬಿಜೆಪಿ ಅವರ ಭರವಸೆಗೂ ಮೊದಲೇ ಅಕ್ಕಿ ಕೊಡುತ್ತಿದೆ. ಅಲ್ಲದೇ ಪ್ರತಿ ಕುಟುಂಬದ ಗೃಹಿಣಿಗೆ 2 ಸಾವಿರ ರೂ. ಕೊಡುವ ಗ್ಯಾರಂಟಿ ಕಾರ್ಡ್ ಸಹ ಹಂಚುತ್ತಿದೆ. ಆದರೆ ಆ ಕಾರ್ಡ್‌ನ ಗ್ಯಾರಂಟಿ 10ನೇ ತಾರೀಖಿನವರೆಗೆ ಮಾತ್ರ. ನಂತರ ಅದು ಬೋಗಸ್ ಕಾರ್ಡ್ ಎಂದು ವ್ಯಂಗ್ಯವಾಡಿದರು.

ಜನತೆಗೆ ಸುಳ್ಳು ಭರವಸೆಗಳನ್ನು ನೀಡುತ್ತಿರುವ ಕಾಂಗ್ರೆಸ್ ಪಕ್ಷವನ್ನು ಕೇಂದ್ರದಲ್ಲಿ ಈಗಾಗಲೇ ಕಿತ್ತು ಹಾಕಲಾಗಿದೆ. ಇನ್ನು ರಾಜ್ಯದಲ್ಲಿಯೂ ಬೇರು ಸಮೇತ ಕಿತ್ತು ಹಾಕುವ ಕೆಲಸವನ್ನು ರಾಜ್ಯದ ಮತದಾರರು ಮಾಡಲಿದ್ದಾರೆ ಎಂದರು.

ವರುಣ ಕ್ಷೇತ್ರದಲ್ಲಿ ಸೋಮಣ್ಣನವರು ಆಯ್ಕೆಯಾಗುವುದು ಶತಸಿದ್ಧ ಎಂದು ವಿಶ್ವಾಸ ವ್ಯಕ್ತಪಡಿಸಿದ ಮುಖ್ಯಮಂತ್ರಿಗಳು ಇಡೀ ಕಾಂಗ್ರೆಸ್ ಪಕ್ಷವನ್ನು ಸೋಲಿಸುವಂತಹ ದೊಡ್ಡ ಕೆಲಸವನ್ನು ಸೋಮಣ್ಣ ಮಾಡಲಿದ್ದಾರೆ ಎಂದರು.

ಕಿಚ್ಚ, ದರ್ಶನ್ ಬೆಂಬಲ: ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನೋಪಯೋಗಿ ಕಾರ್ಯಕ್ರಮ ಮೆಚ್ಚಿ ಕಿಚ್ಚ ಸುದೀಪ್ ಹಾಗೂ ದರ್ಶನ್ ಸಹ ನಮಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಹಾಗಾಗಿ ಕ್ಷೇತ್ರದ ಕಾರ್ಯಕರ್ತರು ಮನೆ ಮನೆಗೆ ಹೋಗಿ ಸೋಮಣ್ಣ ಹಾಗೂ ಡಾ.ರೇವಣ್ಣ ಪರ ಮತಯಾಚಿಸಿ ಎಂದು ಮನವಿ ಮಾಡಿದರು.

ವರುಣ ಅಭ್ಯರ್ಥಿ ವಿ.ಸೋಮಣ್ಣ ಮಾತನಾಡಿ, ಮುಖ್ಯಮಂತ್ರಿಯಾಗಿದ್ದವರ ಕ್ಷೇತ್ರ ಅಭಿವೃದ್ಧಿಯಲ್ಲಿ ಇಷ್ಟು ಕೆಳ ಮಟ್ಟದಲ್ಲಿದೆ ಎಂದು ಗೊತ್ತಿರಲಿಲ್ಲ. ನನ್ನ 45 ವರ್ಷಗಳ ರಾಜಕೀಯ ಜೀವನದಲ್ಲಿ ಇಂತಹ ಅವ್ಯವಸ್ಥೆಯನ್ನು ಯಾವ ಕ್ಷೇತ್ರದಲ್ಲಿಯೂ ಕಂಡಿಲ್ಲ. ಈಗಲೂ ನೀವು ಕ್ಷೇತ್ರವನ್ನು ಸರಿ ಮಾಡಿಕೊಳ್ಳದಿದ್ದರೆ ಮುಂದೆಯೂ ಸರಿಯಾಗುವುದಿಲ್ಲ. ಪ್ರಧಾನಿ, ಗೃಹ ಸಚಿವರು, ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಶ್ರೀನಿವಾಸ ಪ್ರಸಾದ್ ಒತ್ತಾಯದಿಂದ ನಾನೀ ಕ್ಷೇತ್ರಕ್ಕೆ ಬಂದಿದ್ದೇನೆ. ನಿಮ್ಮ ಓಟಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಓಟಿಗೆ ಇರುವ ಬೆಲೆ ಏನಿದೆ ಎಂಬುದನ್ನು ಬೆಂಗಳೂರಲ್ಲಿ ಸೋಮಣ್ಣ ಮಾಡಿದ್ದಾನೆ. ನಾನು ಯಾರಿಗೂ ಹೆದರುವವನಲ್ಲ. ಎದೆಗುಂದುವುದೂ ಇಲ್ಲ. ಯಾರೊಬ್ಬರಿಗೂ ಹೆದರಿ ಓಡಿ ಹೋಗುವವನೂ ಅಲ್ಲ. ನನಗೊಮ್ಮೆ ಅವಕಾಶ ಮಾಡಿಕೊಡಿ ನಂತರ ಕ್ಷೇತ್ರದಲ್ಲಾಗುವ ಅಭಿವೃದ್ಧಿ ಪರ್ವ ನೋಡಿ. ಭಗವಂತ ಒಳ್ಳೆಯ ಅವಕಾಶ ಕೊಟ್ಟಿದ್ದಾನೆ. ಅದನ್ನು ದುರುಪಯೋಗವಾಗಲು ಬಿಡಬೇಡಿ. ನಾನೇನು ಎಲ್ಲವನ್ನು ಮಾಡುತ್ತೇನೆಂದು ದುರಹಂಕಾರದಿಂದ ಮಾತನಾಡುವವನಲ್ಲ. ಕೆಲಸ ಮಾಡಿ ತೋರಿಸುತ್ತೇನೆ ಎಂದರು.

ಇದಕ್ಕೂ ಮೊದಲು ಶ್ರೀಗುಂಜಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ರೋಡ್ ಶೋಗೆ ಚಾಲನೆ ನೀಡಲಾಯಿತು. ಸಂಸದ ವಿ.ಶ್ರೀನಿವಾಸ ಪ್ರಸಾದ್, ಚಿತ್ರನಟ ಶಶಿಕುಮಾರ್, ಅಭ್ಯರ್ಥಿಗಳಾದ ಸೋಮಣ್ಣ, ಎಂ.ರೇವಣ್ಣ, ನಾಯಕ ಸಮುದಾಯದ ಮುಖಂಡ ಅಪ್ಪಣ್ಣ ತೆರೆದ ವಾಹನದಲ್ಲಿ ರೋಡ್ ಶೋಗೆ ಸಿಎಂರಿಗೆ ಸಾಥ್ ನೀಡಿದರು.

ಮಾರುಕಟ್ಟೆ ರಸ್ತೆ, ಲಿಂಕ್ ರಸ್ತೆ, ಖಾಸಗಿ ಬಸ್ ನಿಲ್ದಾಣ, ಕಾಲೇಜು ರಸ್ತೆ ಮೂಲಕ ಸಾಗಿದ ರೋಡ್ ಶೋ ನಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರು. ರೋಡ್ ಷೋನಿಂದ ರಸ್ತೆ ಸಂಚಾರದಲ್ಲಿ ಏರು ಪೇರಾಯಿತು. ರೋಡ್ ಶೋನಲ್ಲಿ ಜಿಪಂ ಮಾಜಿ ಸದಸ್ಯ ಸದಾನಂದ್, ಕ್ಷೇತ್ರ ಬಿಜೆಪಿ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಪಿಎಸಿಎಸ್ ಅಧ್ಯಕ್ಷ ಬಿ.ವೀರಭದ್ರಪ್ಪ, ಮಡವಾಡಿ ಮಹೇಶ್, ದೇವನೂರು ಪ್ರತಾಪ್ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು.

ಬಿಜೆಪಿ ಪರ ಭರ್ಜರಿ ರೋಡ್ ಶೋ

ಗಾತ್ರದ ಸೇಬಿನ ಹಾರಹಾಕಿ ಕಿಚ್ಚ ಸುದೀಪ್ ಅವರನ್ನು ಸ್ವಾಗತಿಸಲಾಯಿತು.

ಜಾರಿದ ಸೋಮಣ್ಣ: ವಾಹನದ ಮೇಲೆ ಸುದೀಪ್ ಮತ್ತು ಸೋಮಣ್ಣ ನಿಂತಿದ್ದಾಗ ಅಭಿಮಾನಿಯೊಬ್ಬರು ವಾಹನದ ಮೇಲೆ ಹತ್ತಲು ಯತ್ನಿಸಿದರು. ಈ ಸಂದರ್ಭದಲ್ಲಿ ಸೋಮಣ್ಣ ಜಾರಿದರು. ತಕ್ಷಣ ಸುದೀಪ್ ಹಾಗೂ ಅವರ ಅಂಗರಕ್ಷಕರು ಅವರನ್ನು ಹಿಡಿದುಕೊಂಡರು.

ಕಿಕ್ಕಿರಿದು ಸೇರಿದ ಅಭಿಮಾನಿಗಳು: ನೆಚ್ಚಿನ ನಟನನ್ನು ನೋಡಲು ತಾಲೂಕಿನ ಹಳ್ಳಿಗಳಿಂದ ಬಂದಿದ್ದ ಅಭಿಮಾನಿಗಳು, ಕಾರ್ಯಕರ್ತರು ಮರ, ಮಹಡಿ ಮನೆ, ಬಸ್ ಹಾಗೂ ಇನ್ನಿತರ ವಾಹನಗಳನ್ನೇರಿ ಸುದೀಪ್ ನೋಡಿ ಸಂತಸಪಟ್ಟರು.

ಬಿಜೆಪಿ ಬಾವುಟ ಹಾಗೂ ಸುದೀಪ್ ಭಾವಚಿತ್ರವುಳ್ಳ ಬಾವುಟ ಹಿಡಿದು ಕಿಚ್ಚ ಸುದೀಪ್ ಪರ ಘೋಷಣೆ ಕೂಗಿ ಸಂಭ್ರಮಿಸಿದರು. ಕೆಲವರು ಸುದೀಪ್ ಅವರನ್ನು ನೋಡುವ ಭರದಲ್ಲಿ ಪಾದರಕ್ಷೆ ಕಳೆದುಕೊಂಡರು. ಸುದೀಪ್ ನೋಡಲು ಸಾವಿರಾರು ಸಂಖ್ಯೆಯಲ್ಲಿ ಜನ ಸೇರುವ ಮೂಲಕ ದಾಖಲೆ ನಿರ್ಮಿಸಿದರು. ಪ್ರಚಾರದಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಮುಖಂಡ ಕೆಲ್ಲಂಬಳ್ಳಿ ಸೋಮನಾಯಕ, ಬಿಜೆಪಿ ಜಿಲ್ಲಾಧ್ಯಕ್ಷ ಜಿ. ನಾರಾಯಣ್ ಪ್ರಸಾದ್, ಪ್ರಧಾನ ಕಾರ್ಯದರ್ಶಿ ಮಂಗಲ ಶಿವಕುಮಾರ್, ನಗರಸಭಾ ಸದಸ್ಯ ಶಿವರಾಜ್, ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಶಿವು ವಿರಾಟ್, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ಮುಖಂಡರಾದ ನಟರಾಜು, ಕೃಷ್ಣನಾಯಕ, ಚಂದ್ರಶೇಖರ್ ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಅಭಿಮಾನಿಗಳು, ಕಾರ್ಯಕರ್ತರು ಇದ್ದರು.

ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ: ಇದಕ್ಕೂ ಮೊದಲು ಜಿಲ್ಲೆಯ ಗುಂಡ್ಲುಪೇಟೆಗೆ ಆಗಮಿಸಿದ ಸುದೀಪ್ ಪ್ರಚಾರ ವಾಹನವೇರಿ ಪಟ್ಟಣದ ಪ್ರಮುಖ ರಸ್ತೆಯಲ್ಲಿ ರೋಡ್ ಶೋ ನಡೆಸಿದರು. ಇದೇ ವೇಳೆ ಬಿಜೆಪಿ ಅಭ್ಯರ್ಥಿ ಸಿ.ಎಸ್. ನಿರಂಜನಕುಮಾರ್ ಪರವಾಗಿ ಮತಯಾಚಿಸಿದರು. ಬಳಿಕ ಚಾಮರಾಜನಗರದಲ್ಲಿ ವಿ.ಸೋಮಣ್ಣ ಪರವಾಗಿ ಮತಯಾಚಿಸಿ, ನಂತರ ಸಂತೇಮರಹಳ್ಳಿ, ಯಳಂದೂರು, ಕೊಳ್ಳೇಗಾಲದಲ್ಲಿ ಬಿಜೆಪಿ ಅಭ್ಯರ್ಥಿ ಎನ್.ಮಹೇಶ್ ಹಾಗೂ ಹನೂರಿನಲ್ಲಿ ಪ್ರೀತನ್ ನಾಗಪ್ಪ ಪರವಾಗಿ ಮತಯಾಚಿಸಿ, ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು. ಸುದೀಪ್‌ಗೆ ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಸಾಥ್ ನೀಡಿದರು.

ಸರ್ವ ಜನಾಂಗದ ಶಾಂತಿಯ ತೋಟ

ನನ್ನನ್ನು ಗೆಲ್ಲಿಸಿ, ವಿರೋಧ ಪಕ್ಷದ ನಾಯಕನಾಗಿ ಮಾಡಿದ್ದೀರಿ. 2013ರಲ್ಲಿ ಗೆಲ್ಲಿಸಿ ಮುಖ್ಯಮಂತ್ರಿ ಆಗಲು ಕಾರಣರಾಗಿದ್ದೀರಿ. ಕ್ಷೇತ್ರದ ಜನರು ನನಗೆ ನೀಡಿರುವ ಆಶೀರ್ವಾದ ಹಾಗೂ ಪ್ರೀತಿಗೆ ನಾನು ಚಿರಋಣಿ. ಎರಡು ಬಾರಿ ನನ್ನನ್ನು ಹಾಗೂ ಕಳೆದ ಬಾರಿ ನನ್ನ ಮಗ ಡಾ.ಯತೀಂದ್ರನಿಗೆ ನೀವು ಆಶೀರ್ವಾದ ಮಾಡಿದ್ದೀರಿ. ನೀವು ನಮ್ಮ ಮೇಲೆ ಇಟ್ಟಿರುವ ವಿಶ್ವಾಸದಿಂದಾಗಿ ವರುಣ ಕ್ಷೇತ್ರವನ್ನು ಸಮಗ್ರ ಅಭಿವೃದ್ಧಿ ಮಾಡಿ, ರಾಜ್ಯದಲ್ಲೇ ಮಾದರಿ ಕ್ಷೇತ್ರವಾಗಿ ಮಾಡಿದ್ದೇವೆ. ರಾಜಕಾರಣಕ್ಕಾಗಿ ವಿರೋಧ ಪಕ್ಷದವರು ಕ್ಷೇತ್ರದ ಬಗ್ಗೆ ಟೀಕೆ ಮಾಡಬಹುದು. ಆದರೆ ವಾಸ್ತವ ಸಂಗತಿ ಕ್ಷೇತ್ರದ ಜನರಿಗೆ ತಿಳಿದಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಮತ್ತೊಮ್ಮೆ ನನಗೆ ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು.

ನನ್ನ ಸುದೀರ್ಘ ರಾಜಕೀಯ ಪಯಣದಲ್ಲಿ ಎಂದಿಗೂ ಜಾತೀಯತೆಗೆ ಆದ್ಯತೆ ನೀಡಲಿಲ್ಲ. ಎಲ್ಲಾ ಜಾತಿ, ಧರ್ಮೀಯರನ್ನು ಒಟ್ಟಾಗಿ ಕೊಂಡೊಯ್ಯುವುದೇ ನನ್ನ ಉದ್ದೇಶ. ಆ ನಿಟ್ಟಿನಲ್ಲಿ ಸರ್ವರ ಹಿತಕಾಯುವ, ಸಾಮಾಜಿಕ ನ್ಯಾಯದ ಆಧಾರದಲ್ಲಿ ಸವಲತ್ತು ನೀಡುವುದಕ್ಕೆ ಆದ್ಯತೆ ನೀಡಿದ್ದೇನೆ ಎಂದರು. ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಂಡ ಕೂಡಲೇ ಅನ್ನಭಾಗ್ಯ, ಕ್ಷೀರಭಾಗ್ಯ, ಮನಸ್ವಿನಿ, ಕೃಷಿಭಾಗ್ಯ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದೇನೆ. ಈ ಎಲ್ಲಾ ಯೋಜನೆಗಳು ಎಲ್ಲಾ ಜಾತಿಯ ಬಡವರಿಗೆ ಉಪಯೋಗವಾಗಿವೆ. ಇದು ಗೊತ್ತಿದ್ದರೂ, ಇಂದು ಸಿದ್ದರಾಮಯ್ಯ ಆ ಜಾತಿ, ಈ ಜಾತಿ ವಿರೋಧಿ ಎಂದು ಆರೋಪ ಮಾಡುತ್ತಿದ್ದಾರೆ. ನಾನು ಎಂದಿಗೂ ಜಾತಿ ರಾಜಕಾರಣ ಮಾಡಿದವನಲ್ಲ. ವರುಣ ಕ್ಷೇತ್ರ ಸರ್ವಜನಾಂಗದ ಶಾಂತಿಯ ತೋಟವಿದ್ದಂತೆ. ಇಲ್ಲಿ ಎಲ್ಲರೂ ಸಮಾನರು. ಆ ಶಾಂತಿಯ ತೋಟಕ್ಕೆ ಬೆಂಕಿ ಹಚ್ಚುವ ಕೆಲಸ ಬಿಜೆಪಿ ಮಾಡುತ್ತಿದೆ. ಅದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಕೋರಿದರು. ನಾನು ಬಸವಣ್ಣನವರ ಪ್ರಭಾವಕ್ಕೆ ಒಳಗಾದವನು. ಅವರ ತತ್ವ ಸಿದ್ಧಾಂತವನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದೇನೆ. 2013ರಲ್ಲಿ ಬಸವ ಜಯಂತಿ ದಿನವೇ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದೇನೆ. ಬಸವಣ್ಣನವರ ತತ್ವ ಸಿದ್ಧಾಂತದ ಮೇಲೆ ಅಪಾರವಾದ ನಂಬಿಕೆ ಇಟ್ಟುಕೊಂಡಿದ್ದೇನೆ. ಆದರೆ, ನನ್ನ ವಿರುದ್ಧ ಮಾತನಾಡುವುದಕ್ಕೆ ಏನು ಸಿಗಲಿಲ್ಲ ಎಂಬ ಕಾರಣದಿಂದ ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ಇದಕ್ಕೆ ವೀರಶೈವ ಲಿಂಗಾಯತ ಸಮುದಾಯ ಕಿವಿಗೊಡಬಾರದು. ಕೆಲವರು ಮಾಡುತ್ತಿರುವ ಸಂಚನ್ನು ಬಯಲು ಮಾಡಬೇಕು ಎಂದು ಮನವಿ ಮಾಡಿದರು.

ಈ ಬಾರಿ ಅಧಿಕಾರಕ್ಕೆ ಬರುವುದು ಖಚಿತ. ಈಗಾಗಲೇ ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ ಮಾಡಲಾಗಿದೆ. 10 ಕೆಜಿ ಅಕ್ಕಿ, ಪ್ರತಿ ಮನೆಗೆ 200 ಯುನಿಟ್ ಉಚಿತ ವಿದ್ಯುತ್, ಮನೆಯೊಡತಿಗೆ ಮಾಸಿಕ 2 ಸಾವಿರ ರೂ. ಪ್ರೋತ್ಸಾಹ ಧನ, ನಿರುದ್ಯೋಗಿ ಯುವಕರಿಗೆ ಭತ್ಯೆ, ಮಹಿಳೆಯರಿಗೆ ಉಚಿತ ಬಸ್‌ಪಾಸ್ ನೀಡುವ ಭರವಸೆ ನೀಡಿದ್ದೇನೆ. ನಾವು ಕೊಟ್ಟಿರುವ ಭರವಸೆಗಳನ್ನು ಈಡೇರಿಸುತ್ತೇವೆ. ಇದರಿಂದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ನನಗೆ ಆಶೀರ್ವದಿಸಬೇಕೆಂದು ಮನವಿ ಮಾಡಿದರು.

ಅಧಿಕ ಸ್ಥಾನಗಳನ್ನು ಬಿಜೆಪಿ ಗೆಲ್ಲಲಿದೆ: ಸಿಎಂ

ಪ್ರಕಟಿಸಿರುವ ಬಗ್ಗೆ ಪ್ರತಿಕ್ರಿಯಿಸಿ, ಸಂಘಟನೆ ನಿಷೇಧಿಸುವುದಾಗಿ ಹೇಳಿ ನಂತರ ಅತಿಯಾದ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಕಾಂಗ್ರೆಸ್ ಅಭದ್ರತೆಗೆ ಇದೊಂದು ಸಾಕ್ಷಿ. ಭಜರಂಗದಳ ನಿಷೇಧಿಸುವ ಪ್ರಸ್ತಾಪಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದ್ದರಿಂದ ಪ್ರತಿ ಗ್ರಾಮದಲ್ಲೂ ಹನುಮ ದೇವಾಲಯ ನಿರ್ಮಿಸುತ್ತೇವೆ, ಅಭಿವೃದ್ಧಿ ಮಂಡಳಿ ರಚಿಸುತ್ತೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಮೊದಲು ಡ್ಯಾಮೇಜ್ ಮಾಡುವುದು ನಂತರ, ಡ್ಯಾಮೇಜ್ ಕಂಟ್ರೋಲ್‌ಗೆ ಯತ್ನಿಸುವುದು ಕಾಂಗ್ರೆಸ್‌ನವರ ಕೆಲಸವಾಗಿದೆ. ಲಿಂಗಾಯತರ ವಿಚಾರದಲ್ಲೂ ಇದೇ ಆಗಿದ್ದು. ಆದರೆ ಈಗ ಇದೆಲ್ಲಾ ನಡೆಯುವುದಿಲ್ಲ. ಎಲ್ಲರ ಕೈಯ್ಯಲ್ಲೂ ಮೊಬೈಲ್ ಇದೆ. ಜನರಿಗೆ ಎಲ್ಲವೂ ಸ್ಪಷ್ಟವಾಗಿ ತಿಳಿಯುತ್ತದೆ. ಸ್ಪಷ್ಟೀಕರಣ ನೀಡಿ ಸರಿ ಮಾಡುತ್ತೇವೆ ಎನ್ನುವುದು ಅಸಾಧ್ಯ ಎಂದು ತಿಳಿಸಿದರು.

ಡೆಲ್ಲಿಯಲ್ಲಿ ಸುಳ್ಳಿನ ಸರ್ಕಾರ, ಬೆಂಗಳೂರಲ್ಲಿ ಲೂಟಿ ಸರ್ಕಾರ

ಡಬಲ್ ಇಂಜಿನ್ ಸರ್ಕಾರಕ್ಕೆ ವ್ಯಾಖ್ಯಾನ ನೀಡಿದ ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್



ಮೈಸೂರು,ಮೇ 5(ಪಿಎಂ)– ಡೆಲ್ಲಿಯಲ್ಲಿ ಸುಳ್ಳಿನ ಸರ್ಕಾರ, ಬೆಂಗಳೂರಲ್ಲಿ ಲೂಟಿ ಸರ್ಕಾರ ಎಂಬುದೇ 'ಡಬಲ್ ಇಂಜಿನ್ ಸರ್ಕಾರ'ದ ಅರ್ಥ ಎಂದು ಕೇಂದ್ರದ ಮಾಜಿ ಸಚಿವರೂ ಆದ ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್ ಟೀಕಿಸಿದ್ದಾರೆ.

40 ಪರ್ಸೆಂಟ್ ರಾಜ್ಯ ಬಿಜೆಪಿ ಸರ್ಕಾರದಿಂದ ಮುಕ್ತಿ ಪಡೆಯಲು ರಾಜ್ಯದ ಜನ ಬಯಸಿದ್ದು, ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ದೊರೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಬಲ್ ಇಂಜಿನ್ ಸರ್ಕಾರ ಎಂದು ಬಿಜೆಪಿಯಿಂದ ಒಂದೇ ವಾಕ್ಯದ ಪ್ರಚಾರ ಮಾಡಲಾಗುತ್ತಿದೆ. ಅವರ ಮನಸ್ಸಿನಲ್ಲಿ ಡಬಲ್ ಇಂಜಿನ್ ಸರ್ಕಾರ ಎಂದರೆ ಡೆಲ್ಲಿ ಮತ್ತು ಬೆಂಗಳೂರು ಎರಡರಲ್ಲೂ ಮೋದಿ ಆಡಳಿತ ಇರಬೇಕು ಎಂಬುದಾಗಿದೆ. ಅಂದರೆ ಅದು ಕೇಂದ್ರದ ಕೈಗೊಂಬೆ ಸರ್ಕಾರ ಆಗಿರಬೇಕೆಂಬುದಾಗಿದೆ ಎಂದರು.

ಕರ್ನಾಟಕ ರಾಜ್ಯಕ್ಕೆ ಶೇ.94ರಷ್ಟು ಸ್ವಂತ ಆದಾಯವಿದೆ. ಹಾಗಾಗಿ ಇಲ್ಲಿ ಒಂದೇ ಇಂಜಿನ್‌ಗೆ ಚುನಾವಣೆ ನಡೆಯುತ್ತಿದ್ದು, ಅದು ಬೆಂಗಳೂರು ಇಂಜಿನ್ ಆಗಿದ್ದು, ಡಬಲ್ ಇಂಜಿನ್ ಸರ್ಕಾರ ಎಂಬುದು ಅರ್ಥಹೀನ ಎಂದು ಹೇಳಿದರು.

ರಾಹುಲ್ ಗಾಂಧಿಯವರ ನೇತೃತ್ವದ ಭಾರತ ಐಕ್ಯತಾ ಯಾತ್ರೆಯು 23 ದಿನಗಳ ಕಾಲ ಕರ್ನಾಟಕದಲ್ಲಿ ನಡೆಯಿತು. ಈ ಯಾತ್ರೆ ಸಂದರ್ಭದಿಂದಲೇ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುವ ಆತ್ಮವಿಶ್ವಾಸ ಮೂಡಿತ್ತು. ಯಾತ್ರೆ ಸಂದರ್ಭದಲ್ಲಿ 40 ಪರ್ಸೆಂಟ್ ರಾಜ್ಯ ಬಿಜೆಪಿ ಸರ್ಕಾರದಿಂದ ಮುಕ್ತಿ ನೀಡಬೇಕೆಂಬ ಅಭಿಪ್ರಾಯವನ್ನು ಜನತೆ ವ್ಯಕ್ತಪಡಿಸುತ್ತಿದ್ದರು. ಟಿಕೆಟ್ ಹಂಚಿಕೆ ವಿಚಾರದಲ್ಲಿ ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯ ಕಡಿಮೆ. ಆದರೆ ಬಿಜೆಪಿಯಲ್ಲಿ ಅಧಿಕವಾಗಿದೆ. ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ರಾಜ್ಯದ ಪ್ರಾದೇಶಿಕವಾರು ಅಭಿವೃದ್ಧಿಯ ದೃಷ್ಟಿಕೋನ ನೀಡಲಾಗಿದೆ ಎಂದು ವಿವರಿಸಿದರು.

ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಪದೇ ಪದೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡುತ್ತಿರುವ ಸಂಬಂಧ ಪ್ರತಿಕ್ರಿಯಿಸಿ, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹಸಚಿವ ಅಮಿತ್ ಶಾ ಕೇವಲ ಚುನಾವಣಾ ಪ್ರಚಾರಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ವಿಧಾನಸಭಾ ಚುನಾವಣೆ ಮಾತ್ರವಲ್ಲ ಬೇಕಿದ್ದರೆ ಪಂಚಾಯಿತಿ ಚುನಾವಣೆಗೂ ಬರುತ್ತಾರೆ. 24x7 ಇವರು ಚುನಾವಣೆ ಪ್ರಚಾರದಲ್ಲಿ ನಿರತರಾಗಿದ್ದಾರೆ. ಕನಿಷ್ಠ ಆಡಳಿತ, ಗರಿಷ್ಠ ಚುನಾವಣಾ ಪ್ರಚಾರಕ್ಕೆ ಇವರ ಆದ್ಯತೆಯಾಗಿದೆ ಎಂದು ಟೀಕಿಸಿದರು.

ರಾಜ್ಯದಲ್ಲಿ ಅಮುಲ್ ಉತ್ಪನ್ನ ಮಾರಾಟಕ್ಕೆ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ ನಮ್ಮ ಬಳಿ ದಾಖಲೆ ಇದೆ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ಇದ್ದರೆ ದಾಖಲೆ ಬಿಡುಗಡೆ ಮಾಡಲಿ. ಕೇಂದ್ರದಲ್ಲಿ ಸಹಕಾರ ಸಚಿವಾಲಯ ಸೃಜಿಸಿ ಆಯಾ ರಾಜ್ಯ ಸರ್ಕಾರಗಳ ನಿಯಂತ್ರಣದಲ್ಲಿದ್ದ ಸಹಕಾರಿ ಸಂಘಗಳನ್ನು ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗಿದೆ ಎಂದು ದೂರಿದರು.

ರಾಜ್ಯ ಬಿಜೆಪಿ ಸರ್ಕಾರದ ಎಸ್‌ಸಿ–ಎಸ್‌ಟಿ ಮೀಸಲಾತಿ ಹೆಚ್ಚಳದ ಕ್ರಮ ಈ ಚುನಾವಣೆಯಲ್ಲಿ ಕಾಂಗ್ರೆಸ್ ಮೇಲೆ ವ್ಯತಿರಿಕ್ತ ಪರಿಣಾಮ ಉಂಟು ಮಾಡಲಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಚುನಾವಣೆಯಲ್ಲಿ ಗೆಲ್ಲಲು ಈ ತಂತ್ರ ನಡೆಸಿದ್ದಾರೆ. ಆದರೆ ಅದು ಯಶಸ್ವಿಯಾಗುವುದಿಲ್ಲ. ಮೂರು ವರ್ಷ ಕಾಲ ಸುಮ್ಮನಿದ್ದು, ಈಗ ಮಾಡಿದ್ದಾರೆ. ಇವರ ಉದ್ದೇಶ ಜನಕ್ಕೆ ಅರ್ಥವಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭಜರಂಗದಳ ಸಂಘಟನೆ ನಿಷೇಧ ಪ್ರಸ್ತಾಪ ಕುರಿತು ಪ್ರತಿಕ್ರಿಯಿಸಿ, 2014ರಲ್ಲಿ ಗೋವಾದಲ್ಲಿ ಅಲ್ಲಿನ ಬಿಜೆಪಿ ಸರ್ಕಾರವೇ ಶ್ರೀರಾಮ ಸೇನೆ ನಿಷೇಧಿಸಿತ್ತು. ಆಗ ಪ್ರಧಾನಿ ನರೇಂದ್ರ ಮೋದಿಯವರು ಏನೂ ಮಾತನಾಡಲಿಲ್ಲ. ಆದರೆ ಭಜರಂಗದಳದ ವಿಚಾರದಲ್ಲಿ ಮಾತನಾಡುತ್ತಿದ್ದಾರೆ. ಇದು ಇಬ್ಬಗೆಯ ನೀತಿ. ಭಜರಂಗದಳ ಎಂಬುದನ್ನು ಉದಾಹರಣೆಗಾಗಿ ಉಲ್ಲೇಖಿಸಲಾಗಿದೆ ಅಷ್ಟೇ. ಸಂವಿಧಾನ–ಕಾನೂನು ಉಲ್ಲಂಘಿಸಿದರೆ ಯಾವುದೇ ಸಂಘಟನೆಯಾದರೂ ಕ್ರಮ ಕೈಗೊಳ್ಳುವುದು ನಮ್ಮ ಉದ್ದೇಶ ಎಂದು ತಿಳಿಸಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಗೋಷ್ಠಿಯಲ್ಲಿದ್ದರು.

ಚಿಣ್ಣರ ಸಂತೆಯಲ್ಲಿ ವ್ಯಾಪಾರ ಬಲು ಜೋರು



ಇದೇ ಮೊದಲ ಬಾರಿ ನಾನು ಮೇಳದಲ್ಲಿ ಭಾಗವಹಿಸಿದ್ದು, ನಾಟಕ, ಅಭಿನಯ, ಸಂಗೀತ ನೃತ್ಯ ಸೇರಿದಂತೆ ವಿವಿಧ ಅನುಭವನ್ನು ಪಡೆದು ಕೊಂಡಿದ್ದೇನೆ. ಇಂದು ಏರ್ಪಡಿಸಿರುವ ಸಂತೆಯಿಂದ ಸಂತೆ ಮತ್ತು ಮಾರು ಕಟ್ಟೆಯಲ್ಲಿ ಹೇಗೆ ಮಾರಾಟ ಮಾಡು ತ್ತಾರೆ ಎಂಬುದರ ಬಗ್ಗೆ ತಿಳಿಕೊಂಡೆ
–ಉಜ್ವಲ್ ಎಚ್.ವಿ. ಶಿಬಿರಾರ್ಥಿ

ಮೈಸೂರು,ಮೇ5(ಜಿಎ)–ಸೊಪ್ಪು, ತರಕಾರಿ ತಗೋಳಿ... ಚಿರಮುರಿ, ಕಡ್ಲೇಪುರಿ, ಕಲ್ಬುರ್ಗಿ ಹೋಳಿಗೆ ಸವಿಯಿರಿ ಬನ್ನಿ.... ಬನ್ನಿ... ಎಂದು ಪುಟ್ಟಾಣಿಗಳು ಕೂಗಿ ವ್ಯಾಪಾರ ಮಾಡುವ ಮೂಲಕ ವಿಶೇಷ ಅನುಭವವನ್ನು ಈ ಬಾರಿಯ ಚಿಣ್ಣರ ಸಂತೆಯಲ್ಲಿ ಪಡೆದುಕೊಂಡರು.

ಮೈಸೂರಿನ ರಂಗಾಯಣದ ವತಿಯಿಂದ ರಂಗಾಯಣದ ಆವರಣದಲ್ಲಿ ಆಯೋಜಿಸಿರುವ ಚಿಣ್ಣರ ಮೇಳದಲ್ಲಿ ಶುಕ್ರವಾರ ಮಕ್ಕಳಲ್ಲಿ ವ್ಯವಹಾರಿಕ ಜ್ಞಾನವನ್ನು ಹೆಚ್ಚಿಸಲು ಏರ್ಪಡಿಸಿರುವ ಚಿಣ್ಣರ ಸಂತೆಯನ್ನು ರಂಗಾಯಣದ ಉಪ ನಿರ್ದೇಶಕಿ ನಿರ್ಮಲಾ ಮಠಪತಿ ಅವರು ಮಕ್ಕಳ ಬಳಿ ಸೊಪ್ಪು ಖರೀದಿಸುವ ಮೂಲಕ ಸಂತೆಗೆ ಚಾಲನೆ ನೀಡಿದರು.

ಪುಟ್ಟ ಪುಟ್ಟ ವ್ಯಾಪಾರಿಗಳಿಂದ ರಂಗಾಯಣದ ಆವರಣದಲ್ಲಿ ಗೃಹಬಳಕೆ, ಕೃಷಿ, ಸೌಂದರ್ಯ ವರ್ಧಕ, ಪೇಯಿಂಟಿಂಗ್ಸ್ ಮಾರಾಟ ಜೋರಾಗಿತ್ತು.

ಮಕ್ಕಳು ಬಹಳ ಇಷ್ಟದಿಂದಲೇ ಮೇಳದಲ್ಲಿ ಭಾಗವಹಿಸಿದ್ದು, ಒಂದು ದಿನವು ಇಷ್ಟವಿಲ್ಲ ಎಂಬ ಮಾತನ್ನು ಹೇಳಿಲ್ಲ. ಪ್ರತಿನಿತ್ಯ ಅವರು ಮೇಳದಲ್ಲಿ ಪಡೆದುಕೊಂಡ ವಿಶೇಷ ಅನುಭವವನ್ನು ಮನೆಯಲ್ಲಿ ಹಂಚುಕೊಳ್ಳುತ್ತಿದ್ದರು.
–ಸಿಂಧು, ಪೋಷಕರು

ಚಿಣ್ಣರ ಮೇಳದಲ್ಲಿ 300 ವಿದ್ಯಾರ್ಥಿಗಳು ಭಾಗವಹಿಸಿದ್ದು, ಇದರಲ್ಲಿ 100ಕ್ಕೂ ಹೆಚ್ಚು ಪುಟ್ಟಾಣಿಗಳು ಪ್ರತ್ಯೇಕ ಮಳಿಗೆಗಳನ್ನು ತೆರೆದು ವ್ಯಾಪಾರ ಮಾಡಿದರು.

ಬಿಸಿಲ ಬೇಗೆ ಹೆಚ್ಚಿರುವುದರಿಂದ ಹೆಚ್ಚಿನ ಮಕ್ಕಳು ಬೆಲ್ಲದ ಜೂಸ್, ಮಸಾಲ ಮಜ್ಜಿಗೆ, ಕರಬೂಜ ಜೂಸ್, ಮಾವಿನ ಹಣ್ಣಿನ ಜೂಸ್‌ಗಳನ್ನು ತಯಾರಿಸಿ ಒಂದು ಲೋಟಕ್ಕೆ 10 ರೂ ನಂತೆ ಮಾರಾಟ ಮಾಡಿದರು, ಮತ್ತೊಂದೆಡೆ ಸಂತೆಯ ಮಾದರಿಯಂತೆ ಆಲೂಗಡ್ಡೆ, ಕ್ಯಾರೆಟ್, ಈರುಳ್ಳಿ, ಬೀನ್ಸ್ ಸೇರಿದಂತೆ ವಿವಿಧ ತರಕಾರಿಗಳನ್ನು ಗುಡ್ಡೆಗೆ 10 ರೂ ನಂತೆ ಮಾರಾಟ ಮಾಡುವ ಮೂಲಕ ಗಮನ ಸೆಳೆದರು.

ಈ ವೇಳೆ ನಿರ್ಮಲಾ ಮಠಪತಿ ಮಾತನಾಡಿ, ಮಕ್ಕಳು ಸಂತೆಯಲ್ಲಿ ಅತ್ಯಂತ ಸಂತೋಷದಿಂದ ಭಾಗವಹಿಸಿದ್ದು, ಮಾರಾಟ ಬಗ್ಗೆ ಅನುಭವ ಪಡೆದುಕೊಳ್ಳುತ್ತಿದ್ದಾರೆ. ನಮ್ಮ ದೇಶವು ಕೃಷಿಪ್ರಧಾನ ದೇಶವಾಗಿರುವುದರಿಂದ ಅದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಇದರೊಟ್ಟಿಗೆ ಅವರು ಗೃಹಉಪಯೋಗಿ, ಸೌಂದರ್ಯ ವರ್ಧಕ, ಚಿತ್ರ ಕಲೆಗಳ ಮಾರಾಟವನ್ನು ಮಾಡುತ್ತಿದ್ದಾರೆ. "ಚಿಣ್ಣರ ಮೇಳಕ್ಕೆ ಉತ್ತಮ ಪ್ರಕ್ರಿಯೆ ವ್ಯಕ್ತವಾಗಿದ್ದು, ಪೋಷಕರು ಮಕ್ಕಳು ಬಹಳ ಸಂತೋಷ ವ್ಯಕ್ತವಾಗಿದೆ ಎಂದರು.

ಶಾಸಕ ಎಲ್.ನಾಗೇಂದ್ರ ಪರ ಪತ್ನಿಯಿಂದ ಮತಯಾಚನೆ



ಮೈಸೂರು, ಮೇ 5– ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯೂ ಆದ ಶಾಸಕ ಎಲ್.ನಾಗೇಂದ್ರ ಪರ ಮೈಸೂರಿನ ವಿಜಯನಗರದಲ್ಲಿ ಅವರ ಪತ್ನಿ ಶೀಲಾ ನಾಗೇಂದ್ರ ಬಿಜೆಪಿ ಮಹಿಳಾ ಮೋರ್ಚಾ ಜೊತೆಗೂಡಿ, ಮನೆ ಮನೆಗೆ ತೆರಳಿ ಬಿರುಸಿನ ಪ್ರಚಾರ ನಡೆಸಿದರು.


ನಂತರ ಮಾತನಾಡಿದ ಶೀಲಾ ನಾಗೇಂದ್ರ, ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಮುಖ್ಯವಾಹಿನಿಗೆ ಬರುತ್ತಿರುವುದು ಸಂತಸದ ವಿಚಾರ. ಅದೇ ರೀತಿಯಲ್ಲಿ ಮತದಾನದ ಪ್ರಕ್ರಿಯೆಯಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಮತಗಟ್ಟೆಗೆ ಬಂದು ಮತ ಚಲಾಯಿಸುವಲ್ಲಿ ಮುಂದಾಗ ಬೇಕೆಂದು ಮನವಿ ಮಾಡಿದರು.

ಚಾಮರಾಜ ಕ್ಷೇತ್ರದಲ್ಲಿ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಸವಲತ್ತುಗಳನ್ನು ಮನೆ ಮನೆಗೆ ತಲುಪಿಸುವಲ್ಲಿ ಬಿಜೆಪಿ ಸರ್ಕಾರ ಯಶಸ್ವಿಯಾಗಿದ್ದು, ಈ ಬಾರಿಯ ಅಭಿವೃದ್ಧಿಯ ಪ್ರಗತಿಯನ್ನು ನೋಡಿ ಮತ್ತೊಮ್ಮೆ ಬಿಜೆಪಿಗೆ ಮತ ನೀಡುವ ಮೂಲಕ ಜನಸಾಮಾನ್ಯರು ಆಶೀರ್ವದಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು

ಈ ವೇಳೆ ಚೈತ್ರ ಚೌಡಪ್ಪ, ಬಿಜೆಪಿ ಮಹಿಳಾ ಮೋರ್ಚಾ ನಗರಾಧ್ಯಕ್ಷೆ ಹೇಮಾ ನಂದೀಶ್, ಉಪಾಧ್ಯಕ್ಷೆ ಸರಸ್ವತಿ ಪ್ರಸಾದ್, ಪ್ರಮೋದಿನಿ ಸುರೇಶ್, ನಾಗಮಣಿ ಜೆ ಹರ್ಷ, ಕಾವೇರಿ, ಪುಷ್ಪ ಬಾಬು, ರೇಖಾ, ಚಂದನ, ವೇದಾವತಿ, ರಚನಾ ಇನ್ನಿತರರಿದ್ದರು.



ಮೇಯರ್ ಶಿವಕುಮಾರ್ ಅವರು ಕೆ.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಪರವಾಗಿ ಕುವೆಂಪುನಗರ ಹುಡ್ಕೋ ಕಾಲೋನಿ ಮುಂತಾದೆಡೆ ಮನೆಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ಮುಡಾ ಸದಸ್ಯೆ ಲಕ್ಷ್ಮೀದೇವಿ, ವಕೀಲ ಶಿವರಾಜ್, ಮುಖಂಡರಾದ ಶಾಂತವೀರಪ್ಪ, ಸಂಪತ್, ಶ್ರೀನಿವಾಸ್, 47ನೇ ವಾರ್ಡಿನ ಪಕ್ಷದ ಅಧ್ಯಕ್ಷರು ಪದಾಧಿಕಾರಿಗಳು ಭಾಗವಹಿಸಿದ್ದರು.



ಮೈಸೂರಿನ ನಜರ್‌ಬಾದ್ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ರವಿ ನಾಯಕ್ ಅವರು ಶಾಸಕ ಎಲ್.ನಾಗೇಂದ್ರ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಯಾದರು. ಈ ವೇಳೆ ರಮೇಶ್ ಗೌಡ, ದೇವರಾಜು, ನಂಜುಂಡ, ಜೆಸಿಬಿ ರವಿ, ಶಿವಕುಮಾರ್ ಇನ್ನಿತರರಿದ್ದರು.

ನಾನು ಮತ ಚಲಾಯಿಸುವೆ

ಬ್ಯಾನರ್ ಮೇಲೆ ಚಿತ್ರ ಬಿಡಿಸಿ ಮತದಾನ ಜಾಗೃತಿ ಮೂಡಿಸಿದ ಕಾವಾ ವಿದ್ಯಾರ್ಥಿಗಳು





ಮೈಸೂರು, ಮೇ 5(ಆರ್‌ಕೆ)– ನಾನು ಮತ ಚಲಾಯಿಸುವೆ, ನೀವೂ ಮತದಾನ ಮಾಡಿ ಪ್ರಜಾಪ್ರಭುತ್ವ ಹಬ್ಬವನ್ನು ಸಂಭ್ರಮದಿಂದ ಆಚರಿಸೋಣ ಬನ್ನಿ ಎಂಬ ಸಂದೇಶ ನೀಡುವ ಮೂಲಕ ಕಾವಾ ವಿದ್ಯಾರ್ಥಿಗಳು ಇಂದು ಮೈಸೂರಿನಲ್ಲಿ ಜನ ಜಾಗೃತಿ ಮೂಡಿಸಿದರು.

ಮೈಸೂರಿನ ದೇವರಾಜ ಮಾರುಕಟ್ಟೆಯ ಚಿಕ್ಕಗಡಿಯಾರ ಬಳಿ ಬಿಳಿ ಬ್ಯಾನರ್‌ಗಳ ಮೇಲೆ ಮತದಾನದ ಸಂದೇಶಗಳು, ಚಿಹ್ನೆಯ ಚಿತ್ರ ಬಿಡಿಸುವ ಮೂಲಕ ಸಾರ್ವಜನಿಕರ ಗಮನ ಸೆಳೆದ ವಿದ್ಯಾರ್ಥಿಗಳು, 2023ರ ಮೇ 10ರಂದು ನಡೆಯಲಿರುವ ಚುನಾವಣೆಯಲ್ಲಿ ಪಾಲ್ಗೊಂಡು ತಮ್ಮ ಸಾಂವಿಧಾನಿಕ ಹಕ್ಕು ಚಲಾಯಿಸುವಂತೆ ಜಾಗೃತಿ ಮೂಡಿಸಿದರು.

ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆಎಂ. ಗಾಯತ್ರಿ, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಪರಿಸರ ಇಂಜಿನಿಯರ್‌ಗಳಾದ ಮೈತ್ರಿ, ಶ್ರೀದೇವಿ ಸೇರಿದಂತೆ ಹಲವರು ಈ ಸಂದರ್ಭ ಪಾಲ್ಗೊಂಡು ಚಿತ್ರ ಬಿಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

'ಉಜ್ವಲ' ಒಂದು ಬೋಗಸ್ ಯೋಜನೆ : ಪುಷ್ಪಾ ಅಮರನಾಥ್ ಆರೋಪ



ಮೈಸೂರು,ಮೇ 5(ಪಿಎಂ)– ಕೇಂದ್ರ ಸರ್ಕಾರದ 'ಉಜ್ವಲ' ಒಂದು ಬೋಗಸ್ ಯೋಜನೆ. ಕಳೆದ 9 ವರ್ಷಗಳಲ್ಲಿ ಅಡುಗೆ ಅನಿಲದ ಸಿಲಿಂಡರ್ ಸೇರಿದಂತೆ ಎಲ್ಲವೂ ದುಬಾರಿಯಾಗಿದ್ದು, ಮತದಾರರು ಇದನ್ನೆಲ್ಲಾ ಅವಲೋಕಿಸಬೇಕು. ಅದರಲ್ಲೂ ಮಹಿಳಾ ಸಮುದಾಯ ಚಿಂತಿಸಿ ಈ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಬೇಕು ಎಂದು ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಬಿ.ಪುಷ್ಪಾ ಅಮರನಾಥ್ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಬೆಲೆ ಏರಿಕೆ ಜನತೆಯನ್ನು ತತ್ತರಿಸುವಂತೆ ಮಾಡಿದೆ ನಿರುದ್ಯೋಗ ಸಮಸ್ಯೆ ವ್ಯಾಪಕವಾಗಿದೆ. ಬಿಜೆಪಿ ಆಡಳಿತದಲ್ಲಿ ದೇಶದಲ್ಲಿ ಕೊಲೆ–ಸುಲಿಗೆ ಹೆಚ್ಚಾಗಿದೆ. ಮಹಿಳಾ ಸಮುದಾಯ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ರಾಜ್ಯ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಹಲವು ಗ್ಯಾರಂಟಿ ಯೋಜನೆಗಳನ್ನು ರೂಪಿಸಿದ್ದು, ಮಹಿಳಾ ಸಮುದಾಯ ಈ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ನೀಡಬೇಕೆಂದು ಮನವಿ ಮಾಡಿದರು.

ಮಹಿಳೆಯರ ನಿತ್ಯದ ಜೀವನ ಶುರುವಾಗುವುದೇ ಅಡುಗೆ ಮನೆಯಿಂದ. ದುರಂತವೆಂದರೆ ಇಂದು ಅಡುಗೆ ಅನಿಲದ ಸಿಲಿಂಡರ್ ಬೆಲೆ ಸಾವಿರ ರೂಪಾಯಿ ಗಡಿ ದಾಟಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ರಾಜ್ಯ ಅಭಿವೃದ್ಧಿಯಾಗಿದ್ದು, ವಿಶೇಷವಾಗಿ ಮೈಸೂರಿನ ಪ್ರಗತಿಗೆ ಮಹತ್ವದ ಕೊಡುಗೆ ನೀಡಲಾಗಿದೆ. ಆದರೆ ಕಳೆದ 4 ವರ್ಷಗಳಲ್ಲಿ ರಾಜ್ಯ ಬಿಜೆಪಿ ಸರ್ಕಾರದ ಅಭಿವೃದ್ಧಿ ಕಾರ್ಯ ಶೂನ್ಯ. ಇವರು ನೀಡಿದ 600 ಭರವಸೆಗಳಲ್ಲಿ ಶೇ.10ರಷ್ಟನ್ನೂ ಈಡೇರಿಸಿಲ್ಲ. ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಅಭಿವೃದ್ಧಿಯಡಿ ಮತ ಯಾಚಿಸಲಾಗದೇ ನರೇಂದ್ರ ಮೋದಿಯವರ ಹೆಸರು ಹೇಳಿಕೊಂಡು ಮತದಾರರ ಬಳಿ ಹೋಗುತ್ತಿದ್ದಾರೆ ಎಂದು ಟೀಕಿಸಿದರು.

ಸ್ವಾರ್ಥಕ್ಕಾಗಿ ಅಪಪ್ರಚಾರ: ಕೆಲ ದಲಿತ ಮುಖಂಡರು ತಮ್ಮ ಸ್ವಾರ್ಥಕ್ಕಾಗಿ ದಲಿತ ವಿರೋಧಿ ಎಂದು ಸಿದ್ದರಾಮಯ್ಯರನ್ನು ಬಿಂಬಿಸಿ ಕರಪತ್ರ ಹಂಚುತ್ತಿದ್ದಾರೆ. ದಲಿತ ಸಮುದಾಯದ ಶ್ರೇಯೋಭಿವೃದ್ಧಿ ಸಿದ್ದರಾಮಯ್ಯ ಶ್ರಮಿಸಿದ್ದಾರೆ. ಹಾಗಾಗಿ ಮತದಾರರು ಇಂತಹ ಅಪಪ್ರಚಾರಕ್ಕೆ ಕಿವಿಗೊಡಬಾರದು ಎಂದು ಮನವಿ ಮಾಡಿದರು.

ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯರನ್ನು ಸೋಲಿಸಬೇಕೆಂದು ಇಡೀ ರಾಜ್ಯದ ಬಿಜೆಪಿ ನಾಯಕರು ಬಂದು ಇಲ್ಲಸಲ್ಲದ ಮಾತುಗಳನ್ನು ಆಡುತ್ತಿದ್ದಾರೆ. ಇನ್ನು ಮೈಸೂರಿನ ಸಂಸದರು ಅಭಿವೃದ್ಧಿ ಮುಂದಿಟ್ಟುಕೊಂಡು ಮತ ಕೇಳುತ್ತಿಲ್ಲ. ಜೊತೆಗೆ ಇವರು ವರುಣ ಬಿಟ್ಟು ಬೇರೆಡೆ ಹೋಗುತ್ತಿಲ್ಲ. ಬೇರೆ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಇಲ್ಲವೇ? ಎಂದು ಪ್ರಶ್ನಿಸಿದರು.

ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಪರ ನಟ ಶಿವರಾಜ್‌ಕುಮಾರ್ ಪ್ರಚಾರ ಸಂಬಂಧ ಸಂಸದ ಪ್ರತಾಪ್‌ಸಿಂಹ ಬೇಸರ ವ್ಯಕ್ತಪಡಿಸಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಶಿವರಾಜ್ ಕುಮಾರ್ ಸ್ವ ಇಚ್ಛೆಯಿಂದ ಸಿದ್ದರಾಮಯ್ಯ ಪರ ಪ್ರಚಾರ ಮಾಡಿದರೆ ಇವರಿಗೇಕೆ ಹೊಟ್ಟೆ ಉರಿ. ನೀವು ಇದರಲ್ಲಿಯೂ ಬೇಳೆ ಬೇಯಿಸಿಕೊಳ್ಳುತ್ತೀರಾ ಎಂದರೆ ನಿಮ್ಮ ದಿವಾಳಿತನ ಅರ್ಥವಾಗುತ್ತದೆ ಎಂದು ವಿರುದ್ಧ ಕಿಡಿಕಾರಿದರು.

ಮಾಜಿ ಸಚಿವೆ ರಾಣಿ ಸತೀಶ್ ಮಾತನಾಡಿ, ಮತದಾರರು ಆಸೆ ಆಮಿಷಗಳಿಗೆ ಒಳಗಾಗದೆ ಅಭಿವೃದ್ಧಿ ನೋಡಿ ಕಾಂಗ್ರೆಸ್ ಪರ ಮತ ನೀಡಬೇಕು. ಬಿಜೆಪಿ ಅವಧಿಯಲ್ಲಿ ನಡೆದ ಭ್ರಷ್ಟಾಚಾರ ಸರಿಪಡಿಸುವ ಬದಲು ನರೇಂದ್ರ ಮೋದಿ ಮೌನವಾಗಿದ್ದಾರೆ. ಸರ್ಕಾರದ ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಪದೇಪದೆ ರಾಜ್ಯಕ್ಕೆ ಭೇಟಿ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಂಜುಳಾ, ಮಹಿಳಾ ಕಾಂಗ್ರೆಸ್ ರಾಜ್ಯ ಉಪಾಧ್ಯಕ್ಷೆ ಪುಷ್ಪವಲ್ಲಿ, ನಗರಾಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ ಗೋಷ್ಠಿಯಲ್ಲಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಹೋಟೆಲ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ
(ಕುವೆಂಪುನಗರ ಮತ್ತು ಡಿ.ಡಿ.ಅರಸು ರಸ್ತೆ)
ಕ್ಯಾಶಿಯರ್, ದೋಸೆಭಟ್ಟರು, ಅಡುಗೆ ಭಟ್ಟರು, ಕೌಂಟರ್ ಕೆಲಸಕ್ಕೆ, ಚಾಟ್ಸ್ ಮತ್ತು ಜ್ಯೂಸ್ ಮಾಡುವವರು, ಕಾಫೀ/ಟೀ ಮಾಡುವವರು
ಹೌಸ್ ಕೀಪಿಂಗ್ ಕೆಲಸ ಅನುಭವವುಳ್ಳವರಿಗೆ ಆಕರ್ಷಣೀಯ ಸಂಬಳ ನೀಡಲಾಗುತ್ತದೆ.
ಇ.ಎಸ್.ಐ ಮತ್ತು ಪಿ.ಎಫ್ ಹಾಗೂ ವಸತಿ ಸೌಲಭ್ಯವಿದೆ.
9916256503, 9986205777

CCTV & LAPTOPS
Available @ best price.
Contact:
Mob: 7348977948

ಹಾಸ್ಟೆಲ್ & PG ಗಳಿಗೆ ಊಟ ಉಪಹಾರ
ಶಾಲಾ ಕಾಲೇಜು, ಇಂಜಿನಿಯರಿಂಗ್ ಕಾಲೇಜು ನರ್ಸಿಂಗ್ ಕಾಲೇಜ್ ಹಾಸ್ಟೆಲ್‌ಗೆ ಮತ್ತು PG ಹಾಸ್ಟೆಲ್‌ಗಳಿಗೆ ಊಟ ಮತ್ತು ಉಪಹಾರ ಅವರ ಸ್ಥಳದಲ್ಲಿ ಕಡಿಮೆ ಖರ್ಚಿನಲ್ಲಿ ಮಾಡಿಕೊಡಲಾಗುತ್ತದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9380394364

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

OFFICE / SHOP FOR RENT
#1351/4, Vinoba Road, Shivarampet, Mysore
• Shop -1 220.0sq.ft.,
• Shop - 2 185.0sq.ft.,
Beside SBI ATM
Call : 89048 58127 / 85535 08007

S.K.CONSTRUCTION
ಹೊಸ ಮನೆ ಕಟ್ಟಬೇಕೆ, ಚಿಂತೆ ಬೇಡ Engineering Plan ವಾಸ್ತುಪ್ರಕಾರ, 3D elevation ಸಹಿತ ನಿಮ್ಮ ಕೈಗೆ ಎಟಕುವ ಬೆಲೆಯಲ್ಲಿ ಉತ್ತಮ ಗುಣಮಟ್ಟದಲ್ಲಿ Construction ಮಾಡಿ ಕೊಡುತ್ತೇವೆ.
9620528490

ಬೇಕಾಗಿದ್ದಾರೆ
ಶ್ರೀ ಛಾಯಾದೇವಿ ದತ್ತು ಕೇಂದ್ರ ಮೈಸೂರು ಇಲ್ಲಿ ಚಿಕ್ಕ ಚಿಕ್ಕ ಮಕ್ಕಳನ್ನು ಸಂಸ್ಥೆಯಲ್ಲೇ ಉಳಿದುಕೊಂಡು ನೋಡಿಕೊಳ್ಳುವವರು ಕೆಲಸಕ್ಕೆ ಬೇಕಾಗಿದ್ದಾರೆ. ಉಚಿತ ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ.
8618770716

ಬೇಕಾಗಿದ್ದಾರೆ
ಮೈಸೂರು ನಗರದ ಮಹೇಶ ಪ್ರಸಾದ ಸಸ್ಯಾಹಾರಿ (ಬಲ್ಲಾಳ್ ಸರ್ಕಲ್) ರೆಸ್ಟೋರೆಂಟ್‌ಗೆ ಅನುಭವಿ ಸೌತ್ ಅಡುಗೆ/ಅಸಿಸ್ಟೆಂಟ್, ಕ್ಯಾಪ್ಟನ್‌ಗಳು, ಸಪ್ಲೈಯರ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ
9449621989
(10 AM to 5.30 PM)

WANTED
Writers or Supervisor for Construction Company
Qual: Any Degree
9844439360

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಬೇಕಾಗಿದ್ದಾರೆ
Part / Full Time- Job, M/F
For a Direct Selling Company. No Age Limit, No Education Qualification, On Commission Basis, No Targets. For More Details, Contact : -
93414 42690
81979 45400

WANTED TEACHERS
GURUKULA ACADEMY
Pre Primary and Primary School (English Medium)
Wanted teachers for the subject ENGLISH, MATHS, SCIENCE and also Montessori teachers.
Preferable lady teacher and English fluency.
Contact:
98861 42884

ಡಿಸ್ಟ್ರಿಬ್ಯೂಟರ್ಸ್ ಬೇಕಾಗಿದ್ದಾರೆ
FMCG ಸ್ನ್ಯಾಕ್ಸ್ ಪ್ರೊಡಕ್ಟ್ಸ್‌ಗೆ ಮೈಸೂರು ಮತ್ತು ತಾಲ್ಲೂಕಿ ನಾದ್ಯಂತ ಡಿಸ್ಟ್ರಿಬ್ಯೂಟರ್ಸ್ ಬೇಕಾಗಿದ್ದಾರೆ.
9901080314

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

HOUSE FOR RENT
1st Floor-1BHK, # EWS, 257
Near Kumar Medicals
Akshaya Bandar
Kuvempunagar, Mysore-23
7090436270
9845785720

Sri Ramakrishna Vidyakula
Hootagalli, Mysuru-18
TEACHER REQUIRED
SCIENCE - M.Sc. B.Ed
Note: Minimum 3 years teaching experience and fluency in English must.
9141859198 / 9880709249
Drop your resume : srkvidyakula@gmail.com
Walk in interview on 8th May 2023 (10 am to 1 pm)

ಮಾರಾಟಕ್ಕಿದೆ
ಶಾಲಾ ಬಸ್ಸುಗಳು
SCHOOL BUSES
2013 & 2019 models in good condition
ವಿವರಗಳಿಗಾಗಿ ಸಂಪರ್ಕಿಸಿ:
9880379822

ಹೆಲ್ತ್‌ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೊಮಾ ಇನ್ ಹೆಲ್ತ್‌ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ANM/GNM ಆದವರಿಗೆ ಕೆಲಸವಿದೆ.
ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ, ಮೈಸೂರು.
9916908454

ಶ್ರೀ ರಾಯಲ್ ವಾರಿಯರ್ ಬೇಕರಿಗೆ ಅನುಭವವುಳ್ಳ ಸೇಲ್ಸ್ ಮ್ಯಾನ್ ಗಳು ಮತ್ತು ಮ್ಯಾನೇಜ್ಮೆಂಟ್ ವಿಕ್ಕಿಡ್ಯೂಟಿ ವಿತ್ ಕಂಪ್ಯೂಟರ್ ನಾಲೆಡ್ಜ್ ಇನ್ ಸಾಫ್ಟ್‌ವೇರ್ ಪ್ಯಾಕಿಂಗ್ ಗೆ ಅನುಭವವುಳ್ಳ ವರ್ಕರ್ಸ್ ಮತ್ತು ಕ್ಲೀನಿಂಗ್ ಲೇಡೀಸ್‌ಗಳು ಬೇಕಾಗಿದ್ದಾರೆ.
ಉತ್ತಮ ಸಂಬಳದೊಂದಿಗೆ ಊಟ ವಸತಿ ಉಚಿತವಾಗಿ ನೀಡಲಾಗುವುದು
ಶ್ರೀ ರಾಯಲ್ ವಾರಿಯರ್ ಬೇಕರಿ ಅಂಡ್ ಸ್ವೀಟ್ಸ್
ನೃಪತುಂಗ ರಸ್ತೆ ಸೆಕೆಂಡ್ ಸ್ಟೇಜ್ ಎಂ ಬ್ಲಾಕ್ ನಿಯರ್ ವೈ ಬಸ್ ಡಿಪೋ. ಈ ಕೂಡಲೇ ಸಂಪರ್ಕಿಸಿ:
ಮಾಲೀಕರು – 9686907943
ಮ್ಯಾನೇಜರ್–9019876412

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

FOR SALE
30x40 House for Sale in JP Nagar Ground and 1st Floor, 28x41 Site For Sale in Kuvempu Layout near Dattagalli, 20x40 Site for Sale near JP Nagar Ring Road Vinayak Enclave
9880344263

ತಕ್ಷಣ ಬೇಕಾಗಿದ್ದಾರೆ
T.V.S. Toyota, ಬ್ರಿಟಾನಿಯಾ, ಟಾಟಾ ಮೋಟಾರ್ಸ್, ಬಿಗ್‌ಬಜಾರ್, ಕಂಪನಿಗಳಿಗೆ ಆಫೀಸ್‌ಗಳಿಗೆ 5th, 7th, 10th, PUC, Degree ITI, Diploma ಯುವಕ/ಯುವತಿಯರು ನೇರನೇಮಕಾತಿ ಸಂಬಳ18,000/- 56,000/- ವಸತಿ ಊಟವಿದೆ.
9035520339

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

COMPUTER PLAZA
LAPTOP, DESKTOP, PRINTER REPAIR & SERVICE
• Battery • Adaptor • Keyboards
• LCD / LED Screen • Toner Cartridge
• Hinges • Windows Software
• Hard Drive • Laptop Bag Pack
• Laptop Top Cover • Laptop RAM
• Laptop Body • SSD Upgradation
ASUS acer lenovo intel DELL hp
All Brands Laptop, Desktop & Accessories Available At Best Price

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

ಮನೆ ಕಟ್ಟಿ ಕೊಡಲಾಗುವುದು
ಈ ಕೆಳಕಂಡ ಜಿಲ್ಲೆಗಳ, ನಗರ ಮತ್ತು ಹಳ್ಳಿಗಳಲ್ಲಿ, ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು, ಹಾಸನ, ಕೊಡಗು, ಚಾಮರಾಜನಗರ
ಸಂಪರ್ಕಿಸಿ:
9740081795

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾದೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

WANTED
A Reputed, CBSE affilated School requires following faculties for the year 2023-24 with 5-6 years experience
1. TGT for Primary & Middle Level classes with D.Ed., B.Ed./B.ELEd for Social Science, P.E.T., Computer Science.
2. School Bus drivers with Heavy License and Badge & Lady Attenders/Ayahs.
08212402929
9481123959

ಮೈಸೂರು ಮ್ಯಾರೇಜ್ ಬ್ಯೂರೋ
35 ವರ್ಷ ಸುಂದರ ಶ್ರೀಮಂತ ಕೋಟ್ಯಾಧೀಶ್ವರ MBA ತಿಂಗಳಿಗೆ 6 ಲಕ್ಷ ವರಮಾನವಿರುವ ಒಬ್ಬನೇ ವರನಿಗೆ ಸುಂದರ ವಿದ್ಯಾವಂತ ವಧೂಬೇಕು ಜಾತಿ ಅಭ್ಯಂತರ ಇಲ್ಲ ನೇರಸಂಪರ್ಕಿಸಿ:
ಡಾ.ಗುರೂಜಿ
7899625268
9448229184

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

TOUR 2 Day Beach Package to KERALA
Scintillating Beaches, Coloniel Forts, Temples and Lush Greenly
Joyful - 2Days
@ 3980/-per Seat
Includes Accomodation-Food
Kannur - 20-05-2023
Mangalore - 27-05-2023
9886697052

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

APARTMENT
@ Yadavagiri
For Sale / Lease
2 BHK
Near Aakashavani Circle
52 Lakh, Negotiable
9886697052

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
ಪವರ್ ಟೆಕ್ನಾಲಜೀಸ್
9611648636

HOUSE FOR SALE
Duplex House built on 40x67 Site in Vivekananda Nagar (SBM Colony)
Brokers Kindly Execuse
Serious Buyers Only
May Contact
8792720395

WANTED
Male Accounts Executive with 3-4 Yrs experience For Hospital in Kuvempunagar Mysore
Post Resume to
r.kulkarni2008@rediffmail.com

Herbal Cure Wellness
PART TIME JOBS
(Part Time / Full Time Jobs)
ಮೊಬೈಲ್ ಮೂಲಕ ನಮ್ಮ ಆಯುರ್ವೇದ ಉತ್ಪನ್ನಗಳನ್ನು ಪ್ರಚಾರ ಮಾಡುವ ಮೂಲಕ ದಿನಗಳಲ್ಲಿ 500 ರಿಂದ 5,000 ರವರೆಗೂ ಗಳಿಸಿ. ಸಂಪರ್ಕಿಸಿ:
8197695295

5 days Kashi trip Rs. 16,000 per person.
ASIAN WORLD TOURS, Bangalore
Mob: 9886460563

ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (Cold Pressed) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್
#203, ಬನ್ನಿಮಂಟಪ ಬಡಾವಣೆ, ಮೈಸೂರು–570 015
Mob: 80888-87802

Document Lost
Shenappa Gowda, residing at No. 314, 3rd Stage, Kesare Badavane, Mysore-570 007, have lost Khata Original Copy Receipt No. R(2)PR(KT)01/09-10, tax paid Reg. No. 38+39, Page No. 177. Finders please contact:
Mob: 7026307597

REQUIRED
A leading Mechanical Engineering firm in Mysore is looking for the below positions.
1) Accountant (freshers / experienced).
Qualification: B.Com. / M.Com.
2) Design Engineer (Fresher / Experienced)
Qualification: Engineering in Civil or Mechanical discipline with AutoCAD knowledge. *Contact:*
8762764251, 9739886662

ತಕ್ಷಣ ಬೇಕಾಗಿದ್ದಾರೆ
ಬನ್ನೂರು ರಸ್ತೆ ದೇವೇಗೌಡ ಸರ್ಕಲ್, ಬುಗತ್ ಹಳ್ಳಿಯಲ್ಲಿ ಇರುವ ಒಂದು ದೊಡ್ಡ ಕಂಪನಿಗೆ SSLC ವ್ಯಾಸಂಗ ಹೊಂದಿರುವ 45 ವರ್ಷ ದೊಳಗಿನ ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. 8hrs ಡ್ಯೂಟಿ ESI, EPF, W/off, ಊಟ, ತಿಂಡಿ, ಸೌಲಭ್ಯ ವಿರುತ್ತದೆ. ಮತ್ತು ಆಕರ್ಷಕ ಸಂಬಳ ದೊರೆಯುತ್ತದೆ.
ಆಸಕ್ತರು ತಕ್ಷಣ ಈ ನಂಬರಿಗೆ ಸಂಪರ್ಕಿಸಿ:
9900066284, 900066478

ಮಕ್ಕಳ ಸ್ಮರಣ ಶಕ್ತಿಯೋಗ ಶಿಬಿರ
ವ್ಯಕ್ತಿತ್ವ ವಿಕಾಸ, ಆಹಾರಕ್ರಮ, ಧ್ಯಾನ, ಪ್ರಾಣಾಯಾಮ ನಿಮ್ಮ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸಲು ಈ ಶಿಬಿರಕ್ಕೆ ಸೇರಿಸಿರಿ (8 ವರ್ಷದಿಂದ 14 ವರ್ಷದ ಮಕ್ಕಳಿಗಾಗಿ)
ದಿನಾಂಕ: 07–05–2023ನೇ ಭಾನುವಾರ ಬೆಳಗ್ಗೆ 10.30ಕ್ಕೆ ಪ್ರಾರಂಭ, ಸ್ಥಳ: ಋಷಿಸಂಸ್ಕೃತಿ ವಿದ್ಯಾಕೇಂದ್ರ ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು
9448458050
8618762110

ಸೈಟುಗಳು ಮಾರಾಟಕ್ಕಿವೆ
MUDA APPROVED
ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
Mob: 8050345574

URGENT SALE
Running well furnished Unisex Saloon, 1 year old, ground floor, Rajkumar Road. Very reasonable price.
Mob: 7829567878
Wanted 2 hair dressers.

ಬೇಕಾಗಿದ್ದಾರೆ
1) Housekeeping - Ladies - 9 to 5 pm.
2) Room Boy - Full Time.
3) Night Service - 9 pm to 9 am.
ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, J.P. Nagar, Mysore.
Mob: 9686225522

FOR SALE
1) 30x40, 15 Lakhs sites in H.D. Kote Road. 2) 40x60, 60 feet Road, sites Somanatha Nagar. (3) 30x40, N, G+2 house, near Ashwini Choultry, Srirampura. (4) 17x60 house opp. Park, Kamakshi Hospital, SS Puram. 5) 30x30 Commercial 20x30 Duplex house, JP Nagar.
9538690359, 9035990359

ಕ್ಯಾಟರಿಂಗ್ ಅನುಭವ ಇರುವವರು ನಡೆಸಲು ಸಹಾಯ ಬೇಕಾಗಿದ್ದಲ್ಲಿ ಸಂಪರ್ಕಿಸಿ ಮತ್ತು ವೆಜ್, ನಾನ್‌ವೆಜ್ ಅಡುಗೆ ಮಾಡುವವರು ಬೇಕಾಗಿದ್ದಾರೆ.
Mob: 6362892296

SITE FOR SALE
40x60 South Facing 80 Feet Road Vijayanagar 4th Stage 2nd Phase 1.80 Cr, 30x40 West facing Allotie Site Vijayanagar 4th Stage, 30x40 Roopanagar Muda 55 Lack
J.K.Properties
8197707001

ಬೇಕಾಗಿದ್ದಾರೆ
ಮೇಟಗಳ್ಳಿ ರಿಂಗ್ ರಸ್ತೆಯಲ್ಲಿರುವ ಭಾರತ್ ಪೆಟ್ರೋಲಿಯಂ ಬಂಕ್‌ನಲ್ಲಿ ಕೆಲಸಕ್ಕೆ ಕ್ಯಾಶಿಯರ್, ಹೆಲ್ಪರ್ ಹಾಗೂ ಸೂಪರ್‌ವೈಸರ್ ಬೇಕಾಗಿದ್ದಾರೆ.
7259858585

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳಲವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC
ಸಂಬಳ: 17000/- (26Days)
ESI & PF ಸೌಲಭ್ಯ ಇರುತ್ತದೆ.
9620667819
9880727819

WANTED
* Accountant
* Telecallers
* Event Managers
* Anchors
* Marketing Managers
* Pigmy Collection Boy.
Call: 8050052444

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್ ಕೆಲಸಕ್ಕೆ ಹುಡುಗರು, ಹುಡುಗಿಯರು ಬೇಕಾಗಿದ್ದಾರೆ. ಕ್ಯಾಷಿಯರ್, ಹೆಲ್ಪರ್ ಹಾಗೂ ಸೂಪರ್‌ವೈಸರ್. ಮೈಸೂರು.
Mob: 8088393837

ಬೇಕಾಗಿದ್ದಾರೆ
ಕ್ಯಾಂಟರ್, ಟಾಟಾ 1109, ಗೂಡ್ಸ್ ಗಾಡಿಗಳಿಗೆ ಚಾಲಕರು ಬೇಕಾಗಿದ್ದಾರೆ. ರೂಟ್: ಮೈಸೂರು, ಚೆನ್ನೈ, ಹೈದರಾಬಾದ್.
Mob: 9538811425

WANTED
1) DRIVERS FOR BOLERO JEEP AND CAR.
2) Dip. Civil Engineer's for construction company.
Hootagalli KHB Colony, Mysore.
Mob: 9448550972
email: vinodurs999@gmail.com

ಸುವರ್ಣ ಯಾತ್ರ
26/5/2023 ಕಾಶಿ ಪ್ರವಾಸ 7 ದಿನಗಳು. 9/06/2023 ನೇಪಾಳ ಪಶುಪತಿನಾಥ, ಮುಕ್ತಿನಾಥ್ ಪ್ರವಾಸ 9 ದಿನಗಳು, 21/05/2023 ಚಾರ್ ಧಾಮ್ ಯಾತ್ರ 13 ದಿನಗಳು
9019462508
9480843945

ಸುವರ್ಣಾವಕಾಶ
ನಿವೃತ್ತಿ ಸ್ವಯಂ ನಿವೃತ್ತಿ ಹಾಗೂ SSLC ಪಾಸಾದ ನಿರುದ್ಯೋಗಿಗಳಿಗೆ ಮತ್ತು ಗೃಹಿಣಿಯರಿಗೆ ಸ್ವಯಂ ಉದ್ಯಮದಾರರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part time/Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ Fixed Salary, PF & ESI age above 30 Years
9900596388, 990596388
9008799156

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಸ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

FOR SALE
New Apartment Flat 1100 Sqft. 2BHK, North Face Car Parking and Lift Facility available, M Block, Near Shanthi Sagar Complex Kuvempunagar, Mysuru
For More Details Contact.
9449601309

ಬೇಕಾಗಿದ್ದಾರೆ
ಮಾಲಿ (ಗಾರ್ಡ್‌ನರ್) ಬೇಕಾಗಿದ್ದಾರೆ. ವಯೋಮಿತಿ 45 ವರ್ಷ ಒಳಪಟ್ಟು ESI, PF, ಸೌಲಭ್ಯವಿರುತ್ತದೆ. ಸಂಪರ್ಕಿಸಿ:
380/ಎ, 2ನೇ ಮಹಡಿ, ಕೃಷ್ಣವಿಲಾಸ ರಸ್ತೆ, ಮೈಸೂರು
9513089922

SITE FOR SALE
30x40
East Facing
Sardar Vallabai patel Nagar
9035216017

ಶಿರಡಿ ಪ್ರವಾಸ
27-May 2023
3 ಜ್ಯೋತಿರ್ಲಿಂಗ ಸಮೇತ 3 ದಿನಗಳು ಶನಿಸಿಂಗಪುರ, ಗೃಷ್ಣೇಶ್ವರ, ಎಲ್ಲೋರ, ನಾಸಿಕ್, ತ್ರಯಂಬಕೇಶ್ವರ, ಭೀಮಾಶಂಕರ.
MYTHRI TRAVELS
9482421499

ಸಪ್ತಸ್ವರ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ
1st Main, 10 Cross, ಬಿ.ಎಂ.ಶ್ರೀ ನಗರ, ಮೇಟಗಳ್ಳಿ, ಮೈಸೂರು
ಶಿಕ್ಷಕರು ಬೇಕಾಗಿದ್ದಾರೆ
B.A, B.Ed/MA. B.Ed
(English Teacher - 1 Post)
B.Sc, B.Ed / MSc. B.Ed.
(ಗಣಿತ ಶಿಕ್ಷಕರು ಕನ್ನಡ ಮಾಧ್ಯಮ) 1 Post
NST ಶಿಕ್ಷಕರು 2 Post
ಆಸಕ್ತರು ತಮ್ಮ ಮೂಲ ದಾಖಲಾತಿಯೊಂದಿಗೆ ಕಛೇರಿಗೆ ಹತ್ತು ದಿನದ ಒಳಗೆ ಭೇಟಿ ನೀಡತಕ್ಕದ್ದು. (ಮಹಿಳಾ ಶಿಕ್ಷಕಯರಿಗೆ ಮಾತ್ರ)
9916195956

ತಕ್ಷಣ ಬೇಕಾಗಿದ್ದಾರೆ
ಲೀಡಿಂಗ್ ಆಟೋಮೊಬೈಲ್ ಡೀಲರ್ಶಿಪ್ ಮೈಸೂರು
0821-2404555/8496907100
kshatriyaforcesales@gmail.com
ಸರ್ವೀಸ್ ಅಡ್ವೈಸರ್/ಮೆಕ್ಯಾನಿಕ್/ಟಿಂಕರಿಂಗ್/ಎಲೆಕ್ಟ್ರಿಷಿಯನ್/ಸೇಲ್ಸ್ ಎಕ್ಸಿಕ್ಯೂಟಿವ್ ಆಟೋಮೊಬೈಲ್ ಕ್ಷೇತ್ರದಲ್ಲಿ ಉತ್ತಮ ಅನುಭವ ಹೊಂದಿರಬೇಕು. ಮೊದಲು ಬಂದವರಿಗೆ ಆದ್ಯತೆ

SITE /HOUSE FOR SALE
40x60 & 30x40 Site Sale at Kuvempunagar T.K. Layout, Dattagalli, 30x40 Duplex House Sale at Srirampura
9663136318

ALL IN ONE FURNITURE
Bring an Opportunity to Exchange any FURNITURE TO NEW FURNITURE
7760263212

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ, ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ.
1) SSLC to PUC, 2) BE, Mechanical ಊಟ, ವಸತಿ ESI PF, ವಾಹನ (CAB) ಸೌಲಭ್ಯವಿರುತ್ತದೆ ಸಂಬಳ 11400 to 18000 ಇರುತ್ತದೆ
8951869646, 9008819487

ತರಬೇತಿ ಶಿಬಿರ
ಬ್ಲೌಸ್, ಡ್ರೆಸ್ ಕಟಿಂಗ್ ಹೇಳಿ ಕೊಡಲಾಗುತ್ತದೆ. ಆಸಕ್ತಿ ಉಳ್ಳವರು ಕೆಳಗಿನ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಿ:
9341414144
ವಿಜಯನಗರ, ಮೈಸೂರು

ಬೇಕಾಗಿದ್ದಾರೆ
ಮೈಸೂರಿನ ನಜರ್‌ಬಾದ್‌ನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
ಸಂಬಳ: ರೂ. 12000/–
9380232259

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
ಸಂಬಳ: ರೂ. 12000/–
8892258814

ಉಚಿತವಾಗಿ ಪಡೆಯಿರಿ
26KG BT ರೈಸ್‌ನ್ನು ಖರೀದಿಸಿದರೆ 5KG ಬ್ರಾಂಡೆಡ್ ಗೋಧಿ ಹಿಟ್ಟು 2KG ಸಕ್ಕರೆ 1Ltr ಸನ್‌ಪ್ಯೂರ್ ಎಣ್ಣೆಯನ್ನು ಉಚಿತವಾಗಿ ಪಡೆಯಿರಿ
ಬೆಲೆ ರೂ.1600/– ಮಾತ್ರ (ಷರತ್ತು ಅನ್ವಯ)
ಶ್ರೀ ಅನ್ನಪೂರ್ಣೇಶ್ವರಿ ರೈಸ್ ಕಾರ್ನರ್
ಶಿವರಾಂಪೇಟೆ ಮೋರ್ ಮೆಗಾ ಸ್ಟೋರ್ ಎದುರಿನ ರಸ್ತೆ, ಮೈಸೂರು
9741859037, 9902158019

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳಾ ಅಡುಗೆ ಕೆಲಸದವರು ಬೇಕಾಗಿದ್ದಾರೆ.
ಜಯಲಕ್ಷ್ಮೀಪುರಂ
9110467744

ಶ್ರೀ ವಿನಾಯಕ ಟೂರಿಸ್ಟ್
23 ದಿನಗಳ ಉತ್ತರ ಭಾರತ ಪ್ರವಾಸ ಮೈಸೂರಿನಿಂದ 3+2 ಪುಷ್‌ಬ್ಯಾಕ್ ಬಸ್ಸಿನಲ್ಲಿ ಪಂಢರಾಪುರ ಶನಿಸಿಂಗನಾಪುರ ಶಿರಡಿ, ಉಜ್ಜೈಯಿನಿ, ಆಗ್ರಾ, ದೆಹಲಿ, ಹರಿದ್ವಾರ, ಋಷಿಕೇಶ್, ಬದರೀನಾಥ್, ಕೇದಾರನಾಥ್, ಅಯೋಧ್ಯ, ಕಾಶಿ, ಗಯ, ಭುವನೇಶ್ವರ ಪುರಿಜಗನ್ನಾಥ್, ಶ್ರೀಶೈಲ, ಮಹಾನಂದಿ ಇತ್ಯಾದಿ, 26–05–2023 ಹೊರಡುವುದು ಸಂಪರ್ಕಿಸಿ
ರಾಮಚಂದ್ರ 9481819973
ಲಕ್ಷ್ಮಣರಾವ್ 9341820013

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಜೆಡಿಎಸ್‌ಗೆ ಬಹುಮತ ಕೊಟ್ಟರೆ ಪಂಚರತ್ನ ಯೋಜನೆ ಜಾರಿಗೆ ಬದ್ಧ

● ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಭರವಸೆ ● ಶಾಸಕ ಎಂ.ಅಶ್ವಿನ್ ಕುಮಾರ್ ಪರ ಮತಯಾಚನೆ

ತಿ.ನರಸೀಪುರ, ಮೇ 5– ಕನ್ನಡಿಗರ ಅಸ್ಮಿತೆಯಾಗಿರುವ ಪ್ರಾದೇಶಿಕ ಪಕ್ಷ ಜೆಡಿಎಸ್‌ಗೆ ಬಹುಮತ ಕೊಟ್ಟರೆ ಪಕ್ಷದ ಮಹತ್ವಾಕಾಂಕ್ಷೆಯ ಪಂಚರತ್ನ ಯೋಜನೆ ಜಾರಿಗೆ ತರಲು ಬದ್ಧನಾಗಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ತಾಲೂಕಿನ ಬನ್ನೂರು ಪಟ್ಟಣದ ಹಾಲಿನ ಡೇರಿ ಮುಂಭಾಗ ನಡೆದ ಬಹಿರಂಗ ಚುನಾವಣಾ ಪ್ರಚಾರ ಸಮಾವೇಶದಲ್ಲಿ ಜೆಡಿಎಸ್ ಅಭ್ಯರ್ಥಿ ಎಂ.ಅಶ್ವಿನ್ ಕುಮಾರ್ ಪರ ಮತಯಾಚಿಸಿ ಮಾತನಾಡಿದ ಅವರು, ಮಹಿಳೆಯರು ಸ್ವಾವಲಂಬಿ ಬದುಕು ನಡೆಸಲು ಹಾಗೂ ರೈತರ ಕೃಷಿ ಹಸನಗೊಳಿಸಲು ಪೂರಕವಾದ ಕಾರ್ಯಕ್ರಮ ಅನುಷ್ಠಾನಕ್ಕೆ ತರುತ್ತೇನೆ. ರೈತರ ಸಾಲದ ಜೊತೆಗೆ ಮಹಿಳಾ ಸ್ವಸಹಾಯ ಸಂಘದ ಸಾಲ ಮನ್ನಾ ಮಾಡಲು ಸಿದ್ಧ ಎಂದರು.

ಉತ್ತರ ಭಾರತದ ರಾಜಕಾರಣಿಗಳ ಆಗಮನ: ರಾಜ್ಯದಲ್ಲಿ ಕೋವಿಡ್ ವೇಳೆ ಹಾಗೂ ಸಾಲಭಾದೆ ತಾಳಲಾರದೆ ರೈತರು ಆತ್ಮಹತ್ಯೆ ಮಾಡಿಕೊಂಡಾಗ, ನೆರೆಯಿಂದ ಹಳ್ಳಿಗಳು ಜಲಾವೃತಗೊಂಡು ಬೆಳೆ ನಷ್ಟವಾದಾಗ ಕರ್ನಾಟಕ, ಕನ್ನಡಿಗರನ್ನು ತಿರುಗಿ ನೋಡದ ಉತ್ತರ ಭಾರತದ ರಾಜಕಾರಣಿಗಳು ಈಗ ನಾಡಿನ ಜನರ ದರ್ಶನ ಪಡೆಯಲು ನಿತ್ಯ ಬರುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಉತ್ತರ ಭಾರತದ ರಾಜಕಾರಣಿಗಳು ನಾಡಿನ ಮೇಲೆ ಎಲ್ಲಿಲ್ಲದ ಮಮಕಾರದಿಂದ ದಿನವೂ ನಾಡಿಗೆ



ಬರುತ್ತಿದ್ದಾರೆ. ಕಳೆದ ಏಳೂವರೆ ದಶಕಗಳಿಂದಲೂ ನಾಡಿನ ಹಲವು ಬೇಡಿಕೆಗಳನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಾಗ ಕಡೆಗಣಿಸಿ ಮಲತಾಯಿ ಧೋರಣೆ ತೋರಿದ ಕಾಂಗ್ರೆಸ್ ಹಾಗೂ ಬಿಜೆಪಿ ರಾಷ್ಟ್ರೀಯ ಪಕ್ಷಗಳಿಗೆ ಚುನಾವಣೆ ವೇಳೆ ರಾಜ್ಯದ ಮೇಲೆ ಒಲವು ಉಂಟಾಗಿದೆ ಎಂದು ಟೀಕಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದ ಮೂಲ ಉದ್ದೇಶ ಬಡತನ ನಿರ್ಮೂಲನೆ, ಅಸ್ಪೃಶ್ಯತೆ ಹೋಗಲಾಡಿಸುವುದಾಗಿತ್ತು. ಆದರೆ ಈವರೆಗೂ ಅದು ಸಾಧ್ಯವಾಗಿಲ್ಲ. ಈಗ ಪಂಚರತ್ನ ಯೋಜನೆ ಮೂಲಕ ಇವೆಲ್ಲವನ್ನೂ ಹೋಗಲಾಡಿಸಿ ಉತ್ತಮ ಸಮಾಜ ನಿರ್ಮಾಣ ಮಾಡಬೇಕೆಂದಿದ್ದೇನೆ. ನನ್ನ ಆಶಯಗಳಿಗೆ ಸ್ಪಂದಿಸುವ ಕೆಲಸವನ್ನು ರಾಜ್ಯದ ಜನತೆ ಮಾಡಿದ್ದೇ ಆದಲ್ಲಿ ಅವರ ಹಿತ ಕಾಯುವ ಕೆಲಸ ನಾನು ಮಾಡುತ್ತೇನೆ ಎಂದರು.

ಈ ವೇಳೆ ಜೆಡಿಎಸ್ ರಾಜ್ಯ ಕಾರ್ಯದರ್ಶಿ ವೈ.ಎಸ್. ರಾಮಸ್ವಾಮಿ, ಜಿಲ್ಲಾಧ್ಯಕ್ಷ ಕೆ.ಎಸ್.ನರಸಿಂಹಸ್ವಾಮಿ, ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಕಾರ್ಯಾಧ್ಯಕ್ಷ ಬಿ.ಆರ್.ಮಂಜುನಾಥ್, ಪುರಸಭಾ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಉಪಾಧ್ಯಕ್ಷೆ ಭಾಗ್ಯ, ಎಪಿಎಂಸಿ ಮಾಜಿ ಅಧ್ಯಕ್ಷ ವೆಂಕಟೇಶ್, ರಾಜು, ಮಾಜಿ ಜಿಪಂ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಮಾಜಿ ಸದಸ್ಯ ಎಂ.ಆರ್.ಸೋಮಣ್ಣ, ಮೂಗೂರು ಎಂ.ಪಿ.ಮರಿಸ್ವಾಮಿ, ಎಂ.ಕೆ.ಸಿದ್ದರಾಜು ಗೊರವನಹಳ್ಳಿ ನಾಗರಾಜು, ಮುಖಂಡರಾದ ಚಿಕ್ಕಜವರಪ್ಪ, ಕೆ.ಎನ್.ಪ್ರಭುಸ್ವಾಮಿ, ಎನ್.ಲಿಂಗಪ್ಪಾಜಿ, ಎಂ.ಆರ್.ಶಿವಮೂರ್ತಿ ಇನ್ನಿತರರಿದ್ದರು.

> ಕ್ಷೇತ್ರದ ಜನತೆ ಕಳೆದ ಬಾರಿ ನನ್ನ ಮೇಲೆ ವಿಶ್ವಾಸವಿಟ್ಟು ಸಾಮಾನ್ಯ ಜಿ.ಪಂ. ಸದಸ್ಯನಾಗಿದ್ದ ನನಗೆ ಶಾಸಕನಾಗಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದರು. ನಿಮ್ಮ ಪ್ರೀತಿ ವಿಶ್ವಾಸಕ್ಕೆ ಬೆಲೆ ಕಟ್ಟಲಾಗದು, ನೀವು ಕೊಟ್ಟ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳದೇ ನಿಮ್ಮ ಮನೆ ಮಗನಂತೆ ಜನರೊಂದಿಗೆ ಸ್ಪಂದಿಸಿ ಕೆಲಸ ಮಾಡಿಕೊಟ್ಟಿದ್ದೇನೆ. ನೂರಾರು ಕೋಟಿ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಒತ್ತು ಕೊಟ್ಟಿದ್ದೇನೆ. ಈಗ ಮತ್ತೊಂದು ಅವಕಾಶಕ್ಕಾಗಿ ನಿಮ್ಮ ಬಳಿಗೆ ಬಂದಿದ್ದೇನೆ. ಕಳೆದ ಬಾರಿನೀಡಿದ ಪ್ರೀತಿ ವಿಶ್ವಾಸವನ್ನು ಈ ಬಾರಿಯೂ ತೋರಿಸಿ ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಿ.
> –ಎಂ.ಅಶ್ವಿನ್ ಕುಮಾರ್, ಕ್ಷೇತ್ರದ ಶಾಸಕ.

ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ: ಗೃಹಿಣಿ ಸಾವು

ಮಲ್ಕುಂಡಿ, ಮೇ 5– ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಹಿಂಬದಿ ಕುಳಿತಿದ್ದ ಪತ್ನಿ ಸಾವನ್ನಪ್ಪಿ, ಪತಿ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಹಾಡ್ಯದಹುಂಡಿ ಗ್ರಾಮದ ಬಳಿ ನಡೆದಿದೆ.

ನಂಜನಗೂಡು ತಾಲೂಕಿನ ಹಲ್ಲರೆ ಗ್ರಾಮದ ನಿವಾಸಿ ಮದನ್ ಅವರ ಪತ್ನಿ ಪೂಜಾ(20) ಮೃತಪಟ್ಟವರು. ಕಳೆದ 2 ತಿಂಗಳ ಹಿಂದೆ ಮದನ್ ಅವರೊಂದಿಗೆ ವಿವಾಹವಾಗಿದ್ದ ಪೂಜಾ, ಶುಕ್ರವಾರ ಬೆಳಗ್ಗೆ ತನ್ನ ಪತಿ ಜೊತೆ ಬೈಕ್‌ನಲ್ಲಿ ಮುತ್ತಿಗೆ ಹುಂಡಿ ಗ್ರಾಮದ ಸಂಬಂಧಿಕರ ಮನೆಯಲ್ಲಿ ಆಯೋಜಿಸಿದ್ದ ಪೂಜೆಗೆಂದು ತೆರಳುತ್ತಿದ್ದರು. ಈ ವೇಳೆ ಹೆಡಿಯಾಲ ಕಡೆಯಿಂದ ಸಾರಿಗೆ ಬಸ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಪೂಜಾ ಸ್ಥಳದಲ್ಲೇ ಸಾವನ್ನಪ್ಪಿದರೇ, ಅವರ ಪತಿ ಮದನ್ ತೀವ್ರ ಗಾಯಗೊಂಡು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

40% ಭ್ರಷ್ಟಾಸುರನ ದಹಿಸಿದ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ

ತಿ.ನರಸೀಪುರದಲ್ಲಿ ವಿನೂತನ ಪ್ರತಿಭಟನೆ



ತಿ.ನರಸೀಪುರ, ಮೇ 5– ರಾಜ್ಯದಲ್ಲಿ ಅಧಿಕಾರದಲ್ಲಿರುವ ಶೇ.40 ಕಮೀಷನ್ ಸರ್ಕಾರವನ್ನು ತೆಗೆಯಲು ಮೇ 10 ರಂದು ಬಟನ್ ಒತ್ತಿದ ತಕ್ಷಣ ದೆಹಲಿಗೆ ಕೇಳುವಂತಾಗಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ 40% ಭ್ರಷ್ಟಾಚಾರ ಸಂಹಾರಕ್ಕಾಗಿ ಪ್ರತಿಭಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭ್ರಷ್ಟಾಸುರನನ್ನು ಸಂಹಾರ ಮಾಡಲು ನಾವು ಬಂದಿದ್ದೇವೆ. ಯುವಕರಿಂದಲೇ ಸುಡಿಸುತ್ತೇವೆ. ಇಂತಹ ಸರ್ಕಾರ ಕಿತ್ತೊಗೆಯಲು 10ರಂದು ಬಟನ್ ಒತ್ತಿದ ತಕ್ಷಣ ದೆಹಲಿಗೆ ಕೇಳಿಸಬೇಕು ಎಂದು ಹೇಳಿ ಬಳಿಕ ಭ್ರಷ್ಟಾಸುರನ ಪ್ರತಿಮೆಗೆ ಬಾಣ ಬಿಟ್ಟರು.

ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ರಾಮ, ಲಕ್ಷ್ಮಣನ ರೀತಿ. ಭ್ರಷ್ಟಾಚಾರದ ಸರ್ಕಾರವನ್ನು ಸಂಹಾರ ಮಾಡುತ್ತಾರೆ ಎಂದು ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು. ಇದೇ ವೇಳೆ ರಸ್ತೆ ಮಧ್ಯದಲ್ಲೇ ಭ್ರಷ್ಟಾಚಾರದ ಅಸುರನಿಗೆ ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಾಣ ಬಿಡುವ ಮೂಲಕ ಪ್ರತಿಕೃತಿ ದಹನ ಮಾಡಿದರು. ಅಲ್ಲದೇ ಇಬ್ಬರು ನಾಯಕರು ಕೈಎತ್ತಿ ಒಗ್ಗಟ್ಟು ಪ್ರದರ್ಶಿಸಿದರು. ಈ ವೇಳೆ ಮಾಜಿ ಸಚಿವ, ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ. ಮಹ ದೇವಪ್ಪ, ಪುರಸಭಾ ಅಧ್ಯಕ್ಷ ನಂಜುಂಡ ಸ್ವಾಮಿ, ಮುಖಂಡರಾದ ಆಲಗೂಡು ಶಿವಕುಮಾರ್, ಮಲ್ಲಿಕಾರ್ಜುನ ಸ್ವಾಮಿ, ಮದನ್ ರಾಜ್, ಬಿ.ಮರಯ್ಯ, ಸೋಮು, ಆಹ್ಮದ್ ಸಯ್ಯದ್, ಮಂಜುನಾಥ್, ನಾಗರಾಜು ಮತ್ತಿತರರಿದ್ದರು.

ಹೆಚ್‌ಪಿಎಂಗೆ ಗಾಣಿಗ ಸಮುದಾಯ ಬೆಂಬಲ

ಹುಣಸೂರು, ಮೇ 5– ಚುನಾವಣೆಯಲ್ಲಿ ಗಾಣಿಗ ಸಮಾಜ ಕಾಂಗ್ರೆಸ್ ಅಭ್ಯರ್ಥಿ, ಶಾಸಕ ಹೆಚ್.ಪಿ.ಮಂಜುನಾಥ್ ಬೆಂಬಲಿಸಲು ತೀರ್ಮಾನಿಸಿದೆ ಎಂದು ಧರ್ಮಾಪುರ ಗ್ರಾಪಂ ಸದಸ್ಯ ವಿ.ಮಹದೇವ್ ತಿಳಿಸಿದರು.

ನಗರದ ಪತ್ರಕರ್ತರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮಂತಹ ಸಣ್ಣಪುಟ್ಟ ಜನಾಂಗ ರಾಜಕೀಯ, ಆರ್ಥಿಕವಾಗಿ ಬೆಳೆಯಲು ಶಾಸಕ ಮಂಜುನಾಥ್ ಕಾರಣ. ಈ ಹಿಂದೆ ನಮ್ಮ ಜನಾಂಗದಲ್ಲಿ ಒಬ್ಬರು, ಇಬ್ಬರು ಜನಪ್ರತಿನಿಧಿಗಳು ಇರುತ್ತಿದ್ದರು. ಆದರೆ ತಾಲೂಕಿನಲ್ಲಿ ಮಂಜುನಾಥ್ ಶಾಸಕರಾದ ಮೇಲೆ ನಮ್ಮ ಜನಾಂಗದ 14 ಮಂದಿ ಗ್ರಾಪಂ ಸದಸ್ಯರಾಗಿದ್ದಾರೆ. 10ಕ್ಕೂ ಹೆಚ್ಚು ಮಂದಿ ಸೊಸೈಟಿ ನಿರ್ದೇಶಕರಾಗಿದ್ದಾರೆ. ಸುಮಾರು ಹಳ್ಳಿಗಳಲ್ಲಿ ಡೈರಿ ಅಧ್ಯಕ್ಷರು, ಉಪಾಧ್ಯಕ್ಷರಾಗಿದ್ದಾರೆ ಎಂದರು. ಗ್ರಾಪಂ ಸದಸ್ಯ ಗೋವಿಂದಶೆಟ್ಟಿ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಸದಸ್ಯ ನಾಗರಾಜು, ಮಾ.ಅಧ್ಯಕ್ಷ ರಾಜು, ಸದಸ್ಯರಾದ ರುದ್ರಶೆಟ್ಟಿ, ವೆಂಕಟೇಶ್ ಹಾಜರಿದ್ದರು.

ವಿಜಯಶಂಕರ್ ಪರ ವಿಜಯೇಂದ್ರ ಪ್ರಚಾರ



ಪಿರಿಯಾಪಟ್ಟಣ, ಮೇ 5– ದೇಶಾದ್ಯಂತ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿರುವ ಕಾಂಗ್ರೆಸ್ ಪಕ್ಷ ರಾಜ್ಯದಲ್ಲೂ ಸಹ ನೆಲೆ ಕಳೆದುಕೊಳ್ಳಲಿದೆ. ಇದಕ್ಕೆ ಮೇ 13 ರಂದು ರಾಜ್ಯದ ಜನತೆ ನೀಡುವ ಚುನಾವಣಾ ಫಲಿತಾಂಶವೇ ಸಾಕ್ಷಿ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಪಟ್ಟಣದ ಮಹಾಲಕ್ಷ್ಮಿ ಕಲ್ಯಾಣ ಮಂಟಪದಲ್ಲಿ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿ, ಬಿಜೆಪಿ ಅಭ್ಯರ್ಥಿ ಸಿ.ಹೆಚ್.ವಿಜಯಶಂಕರ್ ಪರ ಮತಯಾಚಿಸಿ ಮಾತನಾಡಿದ ಅವರು, 80ರ ಇಳಿ ವಯಸ್ಸಿನಲ್ಲೂ ಕಾಲಿಗೆ ಚಕ್ರ ಕಟ್ಟಿಕೊಂಡು ರಾಜ್ಯಾದ್ಯಂತ ಪ್ರವಾಸ ಮಾಡಿ ಬಡವರ, ದೀನದಲಿತರ ಪರ ಹೋರಾಟ ಮಾಡುತ್ತಿರುವ ಏಕೈಕ ನಾಯಕ ಇದ್ದರೆ ಅದು ನಿಮ್ಮ ಬಿ.ಎಸ್.ಯಡಿಯೂರಪ್ಪ ಮಾತ್ರ. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡದರೂ ಪಕ್ಷವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ಅವರು ಶ್ರಮಿಸುತ್ತಿದ್ದಾರೆ. ರಾಜ್ಯದ ಮುಖ್ಯಮಂತ್ರಿಯಾಗಿ ಭಾಗ್ಯಲಕ್ಷ್ಮಿ, ಸಂಧ್ಯಾ ಸುರಕ್ಷಾ, ವಿದ್ಯಾಸಿರಿ ಸೇರಿದಂತೆ ಹತ್ತಾರು ಯೋಜನೆಗಳನ್ನು ಜಾರಿಗೊಳಿಸಿ ರಾಜ್ಯದ ಅಭಿವೃದ್ಧಿಗಾಗಿ ಯಡಿಯೂರಪ್ಪ ಶ್ರಮಿಸಿದ್ದಾರೆ ಎಂದ ಅವರು ಪ್ರಧಾನಿ ಮೋದಿ ಅವರು ಕೋವಿಡ್ ಸಂದರ್ಭ ರಾಜ್ಯಕ್ಕೆ ನೀಡಿದ ಕೊಡುಗೆ ಅಪಾರ. ಜನಪರ ಕಾರ್ಯಕ್ರಮಗಳ ಮೂಲಕ ದೇಶದ ಬಲವರ್ಧನೆಗೆ ಶಕ್ತಿ ತುಂಬುತ್ತಿರುವ ಮೋದಿ ಅವರಿಗೆ ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರುವ ಮೂಲಕ ಬೆಂಬಲ ನೀಡಬೇಕು. ಈ ನಿಟ್ಟಿನಲ್ಲಿ ವಿಜಯಶಂಕರ್ ಅವರನ್ನು ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸುವಂತೆ ಮನವಿ ಮಾಡಿದರು.


ಬಿಜೆಪಿ ಅಭ್ಯರ್ಥಿ ವಿಜಯಶಂಕರ್ ಮಾತನಾಡಿ, ಈಗಾಗಲೇ ನೀವು ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಕ್ಕೆ ಅವಕಾಶ ನೀಡಿದ್ದೀರಿ. ನನಗೂ ಒಂದು ಅವಕಾಶ ಮಾಡಿಕೊಡಿ. ಕ್ಷೇತ್ರವನ್ನು ರಾಜ್ಯದಲ್ಲೇ ಮಾದರಿಯಾಗಿ ಅಭಿವೃದ್ಧಿ ಪಡಿಸುತ್ತೇನೆ. ಅದಕ್ಕೆ ನಿಮ್ಮೆಲ್ಲರ ಸಹಕಾರ ಅತ್ಯಗತ್ಯ ಎಂದರು.

ಈ ವೇಳೆ ತಾಲೂಕು ಅಧ್ಯಕ್ಷ ಎಂ.ಎಂ.ರಾಜೇಗೌಡ, ಮಾಜಿ ಶಾಸಕ ಬಸವರಾಜ್, ಮುಖಂಡರಾದ ರಘು ಕೌಟಿಲ್ಯ, ಪಿ.ಪ್ರಶಾಂತಗೌಡ, ಸೋಮಶೇಖರ್, ರಾಜೇಂದ್ರ ಚಂದ್ರು, ವೀರಭದ್ರ ಪಿ.ಜೆರವಿ ನಳಿನಿಗೌಡ ಇತರರಿದ್ದರು.

ತಂದೆಯಂತೆ ನಿಮ್ಮ ಸೇವೆ ಮಾಡಲು ಅವಕಾಶ ನೀಡಿ: ದರ್ಶನ್ ಧ್ರುವನಾರಾಯಣ್

ಮಲ್ಕುಂಡಿ, ಮೇ 5– ನನ್ನ ತಂದೆ ಧ್ರುವನಾರಾಯಣ್ ಅವರಂತೆ ನಿಮ್ಮ ಸೇವೆ ಮಾಡಲು ನನಗೊಂದು ಅವಕಾಶ ಮಾಡಿಕೊಡಿ ಎಂದು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಮನವಿ ಮಾಡಿದರು.

ನಂಜನಗೂಡು ಕ್ಷೇತ್ರದ ಮಲ್ಕುಂಡಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮನೆ ಮನೆಗೆ ತೆರಳಿ ಬಿರುಸಿನ ಪ್ರಚಾರ ನಡೆಸಿ ಮಾತನಾಡಿದ ಅವರು, ನನ್ನ ತಂದೆ ಧ್ರುವನಾರಾಯಣ್ ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಕನಸು ಕಂಡಿದ್ದರು. ಅವರ ಕನಸನ್ನು ನನಸು ಮಾಡಲು ಈ ಬಾರಿಯ ಚುನಾವಣೆಯಲ್ಲಿ ನನಗೆ ಆಶೀರ್ವದಿಸಿ ಎಂದು ಮನವಿ ಮಾಡಿದರು.



ನನ್ನ ತಂದೆ ಆರ್.ಧ್ರುವನಾರಾಯಣ್ ನಿಧನರಾಗುವ ಮುನ್ನಾ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೊನೆಯದಾಗಿ ಭಾಷಣ ಮಾಡಿದ್ದರು. ಇದೀಗ ಗ್ರಾಮಕ್ಕೆ ನಾನು ಆಗಮಿಸಿದ್ದೇನೆ. ನನ್ನ ತಂದೆ ನೀಡಿದ ಪ್ರೀತಿ, ವಿಶ್ವಾಸವನ್ನು ನನಗೂ ನೀಡಿ. ಸದಾ ನಿಮ್ಮ ಜೊತೆಯಲ್ಲಿದ್ದು, ನಿಮ್ಮ ಸೇವೆ ಮಾಡುತ್ತೇನೆ ಎಂದರು.

ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು, ಈಗಾಗಲೇ ಘೋಷಿಸಿರುವಂತೆ ಪ್ರತಿ ಮನೆಗೆ 200 ಯುನಿಟ್ ಉಚಿತ ವಿದ್ಯುತ್, ಪ್ರತಿಯೊಬ್ಬರಿಗೂ 10 ಕೆಜಿ ಅಕ್ಕಿ, ಕುಟುಂಬದ ಮಹಿಳೆಗೆ 2000 ನೀಡಲಾಗುವುದು ಎಂದ ಅವರು, ಬಿಜೆಪಿ ಸರ್ಕಾರದಲ್ಲಿ ಬಡಮಕ್ಕಳ ವಿದ್ಯಾರ್ಥಿ ವೇತನ ಕಡಿತಗೊಳಿಸಿ, ದಿನನಿತ್ಯ ಬಳಕೆಯ ವಸ್ತುಗಳ ಬೆಲೆ ಏರಿಕೆ ಮಾಡಿ ಬಡ ಜನರ ಜೀವದ ಜೊತೆಗೆ ಚೆಲ್ಲಾಟ ವಾಡುತ್ತಿರುವ ಬಿಜೆಪಿ ಸರ್ಕಾರವನ್ನು ಕಿತ್ತೊಗೆದು ಬಡವರ ಪರ ಕೆಲಸ ಮಾಡುವ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು ಎಂದ ಅವರು ನಾನು ನನ್ನ ತಂದೆ ತಾಯಿ ಕಳೆದು ಕೊಂಡು ತಬ್ಬಲಿಯಾಗಿದ್ದೇನೆ ಎಂದು ತಿಳಿದಿದ್ದೆ. ಆದರೆ ನಿಮ್ಮ ಪ್ರೀತಿ, ವಿಶ್ವಾಸ ನೋಡಿದರೆ ನಾನು ತಬ್ಬಲಿಯಲ್ಲ. ಕ್ಷೇತ್ರದ ಜನತೆಯೇ ನನ್ನ ತಂದೆ ತಾಯಿ. ಈ ನಿಮ್ಮ ಮನೆ ಮಗನಿಗೆ ತಮ್ಮ ಸೇವೆ ಮಾಡಲು ಅವಕಾಶ ನೀಡಿ ಎಂದು ಮನವಿ ಮಾಡಿದರು. ಇದೇ ವೇಳೆ ಹುರ, ಹಾಡ್ಯ, ಹೆಡಿಯಾಲ, ಈರೇಗೌಡನ ಹುಂಡಿ ಗ್ರಾಮಗಳಲ್ಲಿ ಮತಯಾಚಿಸಿದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಎಸ್ಸಿ ಘಟಕದ ಜಿಲ್ಲಾ ಉಪಾಧ್ಯಕ್ಷ ಮಹದೇವು, ಗ್ರಾಪಂ ಮಾಜಿ ಸದಸ್ಯ ಎಂ.ಎನ್.ಸತೀಶ್, ಹೆಚ್.ಎಂ.ಪುಟ್ಟಬುದ್ಧಿ, ಗ್ರಾ.ಪಂ ಸದಸ್ಯ ಪಾಪ, ಶಿವಕುಮಾರ್, ವಕೀಲ ಎಂ.ಸಿ.ಶ್ರೀನಿವಾಸ್, ಶಿವಕುಮಾರ್, ಶಿವಲಿಂಗಪ್ಪ, ಕಿಟ್ಟಪ್ಪ, ಅಶೋಕ್, ಕೆಂಡಗಣ್ಣಪ್ಪ ಸೇರಿದಂತೆ ಇತರರಿದ್ದರು.

ನಿರುದ್ಯೋಗ ಸಮಸ್ಯೆ ನಿವಾರಣೆಗೆ ಶ್ರಮಿಸುತ್ತೇನೆ

ಬಿಜೆಪಿ ಅಭ್ಯರ್ಥಿ ಕೆ.ಎಂ. ಕೃಷ್ಣನಾಯಕ ಭರವಸೆ

ಹೆಚ್.ಡಿ.ಕೋಟೆ, ಮೇ 5– ತಾಲೂಕಿನ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಶ್ರಮಿಸುತ್ತೇನೆ ಎಂದು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ಭರವಸೆ ನೀಡಿದರು.

ತಾಲೂಕಿನ ಅಣ್ಣೂರು ಗ್ರಾಪಂ ವ್ಯಾಪ್ತಿಯಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾದ ನನಗೆ ತಾಲೂಕಿನ ಜನತೆ ಆಶೀರ್ವದಿಸಲಿದ್ದಾರೆ ಎಂಬ ವಿಶ್ವಾಸ ವಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಅದೇ ರೀತಿ ಈ ಬಾರಿ ಕ್ಷೇತ್ರದಲ್ಲಿ ಮೊದಲ ಬಾರಿಗೆ ಬಿಜೆಪಿ ಜಯಭೇರಿ ಬಾರಿಸಲಿದೆ. ನಾನು ಆಯ್ಕೆಯಾದ ಬಳಿಕ ತಾಲೂಕಿನಲ್ಲಿ ಕೈಗಾರಿಕೆ ಸ್ಥಾಪಿಸುವ ಮೂಲಕ ನಿರುದ್ಯೋಗ ಸಮಸ್ಯೆ ಬಗೆಹರಿಸುವ ಜೊತೆಗೆ ಉದ್ಯೋಗ ಸೃಷ್ಟಿಗೆ ಮೊದಲ ಆದ್ಯತೆ ನೀಡುತ್ತೇನೆ ಎಂದರು.

ತಾಲೂಕಿನಲ್ಲಿ 4 ಜಲಾಶಯಗಳಿದ್ದರೂ, ಈ ಭಾಗದ ರೈತರಿಗೆ ಇಲ್ಲಿವರೆಗೆ ಯಾವುದೇ ಅನುಕೂಲ ಮಾಡಿಕೊಟ್ಟಿಲ್ಲ. ಹೀಗಾಗಿ ಏತ ನೀರಾವರಿ ಯೋಜನೆ ಕೆರೆಕಟ್ಟೆಗಳನ್ನು ತುಂಬಿಸಿ ಅಂತರ್ಜಲ



ವೃದ್ಧಿಗೆ ಕ್ರಮ ಕೈಗೊಳ್ಳುತ್ತೇನೆ ಎಂದರು.

ಯಾವುದೇ ಪ್ರತಿಫಲ ಬಯಸದೇ ಕ್ಷೇತ್ರದಲ್ಲಿ ಸಮಾಜ ಸೇವೆ ಮಾಡಿಕೊಂಡು ಬಂದ ನನಗೆ ಬಿಜೆಪಿ ಪಕ್ಷ ಟಿಕೆಟ್ ನೀಡಿದೆ. ಹೀಗಾಗಿ ಈ ಬಾರಿ ಕ್ಷೇತ್ರದ ಮತದಾರರು ಹೆಚ್ಚಿನ ಮತಗಳಿಂದ ನನ್ನನ್ನು ಗೆಲ್ಲಿಸುವಂತೆ ಮನವಿ ಮಾಡಿದರು.

ತಾಲೂಕಿನಲ್ಲಿ ಬಿಜೆಪಿ ಪರ ಅಲೆ ಇದ್ದು, ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರು ಬಿಜೆಪಿಗೆ ಸೇರ್ಪಡೆಯಾಗಿ ಪ್ರಚಾರ ಮಾಡುವ ಮೂಲಕ ನನ್ನ ಗೆಲುವಿಗೆ ಶ್ರಮಿಸುತ್ತಿದ್ದಾರೆ. ಪ್ರಚಾರಕ್ಕೆ ಹೋದಲೆಲ್ಲಾ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷವನ್ನು ತಿರಸ್ಕರಿಸಿ ಚುನಾವಣೆಯಲ್ಲಿ ಬಿಜೆಪಿಗೆ ಮತ ನೀಡಲಿದ್ದಾರೆ ಎಂದರು.

ಕಾಂಗ್ರೆಸ್, ಜೆಡಿಎಸ್ ನಾಯಕರು ಹಾಗೂ ಮುಖಂಡರ ನಡುವೆ ಹೊಂದಾಣಿಕೆ ಕೊರತೆ ಎದ್ದು ಕಾಣುತ್ತಿದೆ. ಆದರೆ ನಮ್ಮ ಪಕ್ಷದಲ್ಲಿ ಆ ವಾತಾವರಣ ಇಲ್ಲ. ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳಾಗಿದ್ದ ಎಂ.ಅಪ್ಪಣ್ಣ, ಡಾ.ಹೆಚ್.ವಿ.ಕೃಷ್ಣಮೂರ್ತಿ ಇಬ್ಬರೂ ಟಿಕೆಟ್ ಘೋಷಣೆಯಾದ ನಂತರ ನನಗೆ ಸಂಪೂರ್ಣ ಬೆಂಬಲ ನೀಡಿ, ನನ್ನ ಗೆಲುವಿಗೆ ಶ್ರಮಿಸುತ್ತಿದ್ದಾರೆ ಎಂದರು.

ಇದೇ ವೇಳೆ ಕ್ಷೇತ್ರ ವ್ಯಾಪ್ತಿಯ ಹುನಗನಹಳ್ಳಿ, ಅಡಹಳ್ಳಿ, ಮುದ್ದಹಳ್ಳಿ, ಲಂಕೆ, ಮನುಗನಹಳ್ಳಿ, ಹುಣಸಹಳ್ಳಿ, ಹೂವಿನಕೊಳ, ಕುನ್ನಪಟ್ಟಣ, ಮಂಚಹಳ್ಳಿ, ಶಾಂತಿಪುರ, ಪುರದಕಟ್ಟೆ, ಹಲಸೂರು, ಕೊತ್ತೇಗಾಲ, ಚಾಮೇಗೌಡನಹುಂಡಿ, ಬೊಂತಾಲಹುಂಡಿ, ಕಾಳೇಗೌಡನ ಹುಂಡಿ, ಭರ್ಜರಿ ರೋಡ್ ಶೋ ಮೂಲಕ ಮನೆಗೆ ತೆರಳಿ ಮತಯಾಚನೆ ಮಾಡಿದರು.

ಈ ವೇಳೆ ಮುಖಂಡರಾದ ಸಿ.ವಿ.ನಾಗರಾಜ್, ಬಸವರಾಜಪ್ಪ, ವೆಂಕಟೇಶ್, ಅಧ್ಯಕ್ಷ ಗುರುಸ್ವಾಮಿ, ಸಿ.ಕೆ.ಗಿರೀಶ್, ಮಂಜುನಾಥ್, ರಾಜು, ಶಿವನಂಜೇಗೌಡ, ಶಿವಯ್ಯ, ಕಾಳಪ್ಪಾಜಿ, ನಿಂಗರಾಜು, ಹರೀಶ್, ಮಹದೇವಸ್ವಾಮಿ, ನಂದೀಶ, ಮಹೇಶ, ಬಸವರಾಜಪ್ಪ, ಸುಂದರ, ರಮೇಶ್, ಮಲ್ಲಿಕಾರ್ಜುನಪ್ಪ ಸೇರಿದಂತೆ ಇನ್ನಿತರರಿದ್ದರು.

> ಕೇಂದ್ರದಲ್ಲಿ ಪ್ರಧಾನಿ ಮೋದಿ, ರಾಜ್ಯದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಅವರು ಜನಪರ ಆಡಳಿತ ನೀಡಿದ್ದು, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತ. ಆದ್ದರಿಂದ ಕ್ಷೇತ್ರದ ಜನತೆ ಈ ಬಾರಿ ನನಗೆ ಆಶೀರ್ವದಿಸಿದರೇ ತಾಲೂಕಿನ ಸಮಗ್ರ ಅಭಿವೃದ್ಧಿಗೆ ನೆರವಾಗಲಿದೆ. –ಕೆ.ಎಂ.ಕೃಷ್ಣ ನಾಯಕ, ಬಿಜೆಪಿ ಅಭ್ಯರ್ಥಿ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಪ್ರವೀಣ (ಕ): ಬೆ.10.30ಕ್ಕೆ, ಗುರುದೇವ್ ಹೊಯ್ಸಳ (ಕ): ಮ.1.05ಕ್ಕೆ, ದಸರಾ (ತೆ): ಮ.3.45ಕ್ಕೆ, ರಾವಣಾಸುರ (ತೆ): ಸಂ.6.55ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 2 ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 3 ರಾಮಾಚಾರಿ 2.0 (ಕ): ಬೆ.10.45ಕ್ಕೆ, ಆಗಸ್ಟ್ 16 1947(ತ): ಮ.1.30ಕ್ಕೆ, ಪೆಂಟಗನ್ (ಕ): ಸಂ.4.20ಕ್ಕೆ, ಗುಮ್ರಾಹ್ (ಹಿಂ): ರಾ.7.30ಕ್ಕೆ, ರಾ.10.10ಕ್ಕೆ.

ಸ್ಕ್ರೀನ್ 4 ಗುರುದೇವ್ ಹೊಯ್ಸಳ (ಕ): ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, ವೀರಂ (ಕ): ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.

ಸ್ಕ್ರೀನ್ 2 ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.

ಸ್ಕ್ರೀನ್ 3 ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.

ಸ್ಕ್ರೀನ್ 4 ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಉಗ್ರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಘವೇಂದ್ರ ಸ್ಟೋರ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಬ್ಜ(ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪೆಂಟಗಂ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪಿಎಸ್–2 (ತ)	4 ಪ್ರದರ್ಶನಗಳು
ರಾಜ್‌ಕಮಲ್	
ಪಠಾಣ್ (ಹಿ)	4 ಪ್ರದರ್ಶನಗಳು
ಸಂಗಂ	
ರಾಮಬಾಣಂ (ತೆ)	4 ಪ್ರದರ್ಶನಗಳು
ಲಿಡೋ	
ಉಂಡೆನಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಮಬಾಣಂ (ತೆ)	4 ಪ್ರದರ್ಶನಗಳು
ಪ್ರಭಾ	
ಹೊಯ್ಸಳ(ಕ)	4 ಪ್ರದರ್ಶನಗಳು

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮೇ 5– ವಿ.ವಿ ಮೊಹಲ್ಲಾ ಉಪವಿಭಾಗದ ವಿದ್ಯುತ್ ಮಾರ್ಗದಲ್ಲಿ ತುರ್ತುನಿರ್ವಹಣೆ ಕೆಲಸದ ನಿಮಿತ್ತ ಮೇ 6(ಶನಿವಾರ) ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯ ವರೆಗೆ ಬಿ.ಎಂ.ಶ್ರೀ ನಗರ, ಕರಕುಶಲನಗರ, ಅಂಬೇಡ್ಕರ್ ಜ್ಞಾನಲೋಕ, ಅಪ್ಪಾಜಿಗೌಡ, IOCL ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 10ರಲ್ಲಿ

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

11ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 11 ವರ್ಷವಾದರೂ ಸದಾ ನಿಮ್ಮ ನೆನಪಿನಲ್ಲಿರುವ, ಪತ್ನಿ: ಜಯಮ್ಮ ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು, ಹೆಬ್ಬಾಳು.

ಕೆಂಪಶೆಟ್ಟರು

ನಿಧನ: 5.5.2012

ಹಸಿರು ನಮ್ಮ ಉಸಿರು

भारत सरकार/**Government of India**

परमाणु ऊर्जा विभाग/**Department of Atomic Energy**

भाभा परमाणु अनुसंधान केन्द्र/**Bhabha Atomic Research Centre**

विरल पदार्थ परियोजना/**Rare Materials Project**

डाक बैग संख्या–1, येलवाल, मैसूरू ५७११३०/

Post Bag no. 1. Yelwal, Mysore 571130

दूरभाष/**Telephone: 2406543** फैक्स/**Fax: 0821-2403064**

Email: dcarmpbarc.gov.in

पेंशन अदालत सूचना/PENSION ADALAT NOTICE

सीसीएस (पेंशन) नियम, 2021 के अंतर्गत भापअकें/विपप के पेंशनभोगी/परिवार पेंशनभोगी के ध्यानाकर्षण हेतु

For the attention of BARC/RMP Pensioners/Family Pensioners Under CCS (Pension) Rules, 2021

भापअकें/विपप के पेंशनभोगी एवं परिवार पेंशनभोगी की शिकायतों पर विचार करने तथा उनके निवारण हेतु दिनांक 17 मई 2023 (बुधवार) को 11:00 से 13:00 बजे तक विरल पदार्थ परियोजना, भवन संख्या 2, प्रशासन, येलवाल, मैसूरु – 571130 में विडियो कान्फ्रेंसिंग के माध्यम से ''पेंशन अदालत'' का आयोजन किया जा रहा है। इस अदालत में पेंशनरी लाभ से संबंधित शिकायतों पर विचार किया जायेगा। उन शिकायतों जिनका निपटारा किया जा चुका है/ उत्तर दिया जा चुका है/ जिन पर मुकद्दमेबाजी चल रही है या जिनमें पूर्णत: कानूनी बिंदु जैसे उत्तराधिकार, शामिल हों एवं नीति मामलों से संबंधित शिकायतों पर विचार नहीं किया जायेगा। भापअके/विपप के पेंशनभोगी/परिवार पेंशनभोगी अपनी शिकायतों को, यदि कोई हों, तो उन्हें निर्धारित प्रारूप में श्री टी. पुंडरीकाक्षुडु उप लेखा नियंत्रक को dcarmp@barc.gov.in पर ई–मेल कर सकते हैं या डाक द्वारा उक्त पते पर, लिफाफे के ऊपर ''पेंशन अदालत'' लिखकर भेज सकते हैं। भापअके/विपप में दिनांक 12.05.2023 तक प्राप्त शिकायतों पर ही विचार किया जायेगा। अपनी शिकायतें दर्ज करने वाले पैंशनभोगियों को पेंशन अदालत की निर्धारित तिथि एवं अदालत में भाग लेने हेतु ई–मेल के द्वारा गूगल मीट लिंक भेजा जाएगा। शिकायत पंजीकरण फार्म भापअकें की वेबसाइट www.barc.gov.in पर उपलब्ध है।

A "PENSION ADALAT" is scheduled to be conducted on 17th May 2023 (Wednesday) at 11:00 to 13:00 hours at Rare Materials Project, Building 2, Administration, Yelwal, Mysuru - 571130 **through Video conferencing** to consider and redress grievances of BARC/RMP pensioners and family pensioners. Grievances pertaining to Pensionary benefits would be considered in the Adalat. Grievances already settled/replied/ under litigation or involving purely legal points e.g. succession and policy matters will not be considered. BARC/RMP pensioners and family pensioners may send their grievances if any, in the prescribed format to Shri T.Pundarikakshudu, Deputy Controller of Accounts on email at dcarmp@barc.gov.in or by post at the above address in an envelope superscribed "PENSION ADALAT". Grievances received in BARC/RMP by 12.05.2023 shall be considered. **The exact date and time of the Pension Adalat and Google meet link through which the Pensioners can participate in Adalat will be shared through e-mail to the Pensioners, who have lodged their grievances.** Grievance Registration Form is available in the BARC website **www.barc.gov.in.**



